U.B.M. CHURCH

ಯುನೈಟೆಡ್ ಬಾಸೆಲ್ ಮಿಶನ್ ಚರ್ಚ್ ಕೌನ್ಸಿಲ್, ಮುಂಬೈ

ಬಿತ್ತುವ ಸಂಚಿಕೆ

ಬೆಳೆ ಹಬ್ಬದ ಸಂಚಿಕೆ – 2026

ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು

"ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು." ಕೀರ್ತನೆ 126:5



FAITHFUL SOWING IN GOD'S WORD

TRUSTING HIS PERFECT PLAN

ABUNDANT FRUIT THROUGH GRACE

TO GOD BE THE GLORY & JOY

ಸಂಪುಟ ೨

www.ubmchurches.com

ಸೆಪ್ಟೆಂಬರ್ 2026

19ನೇ ಸಂಚಿಕೆ

ಯುಬಿಎಂಸಿ ಪದಾಧಿಕಾರಿಗಳು

ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಕೌನ್ಸಿಲ್, ಮುಂಬೈ

ಯುಬಿಎಂಸಿ ಪದಾಧಿಕಾರಿಗಳು

ಅಧ್ಯಕ್ಷರು: ಶ್ರೀ ವಿಶಾಲ್ ಶಿರಿ

ಉಪಾಧ್ಯಕ್ಷರು: ಶ್ರೀಮತಿ ಆಲ್ಮಾ ಕ್ಲೇವಿಯರ್

ಕಾರ್ಯದರ್ಶಿ: ಶ್ರೀಮತಿ ಮೇಬಲ್ ಸೋನ್ಸ್

ಸಹ ಕಾರ್ಯದರ್ಶಿ: ರೋಹನ್ ಡೆನ್ಸನ್ ಮಾಬೆನ್

ಖಜಾಂಚಿ: ಶ್ರೀ ಸ್ಯಾಮುವೆಲ್ ರಿಚರ್ಡ್ ಸೋನ್ಸ್

ಜಂಟಿ ಖಜಾಂಚಿ: ಶ್ರೀ ನವೀನ್ ಕಾರ್ಕಡ

ಸಂಪಾದಕರು

ರೆವ. ಸುನಿಲ್ ಜಾಯ್

ಸಂಪಾದಕೀಯ ವಿಭಾಗ

ರೆವ. ಸುನಿಲ್ ಜಾಯ್

ರೆವ. ಜಯಂತ್ ರೋಶ್

ರೆವ. ಜಾನ್ ಎಲ್ಯೆಝರ್

ರೆವ. ಸ್ಯಾಮುವೆಲ್ ಮ್ಯಾಕ್ಲಿನ್ ಆನಂದ

ರೆವ. ಸ್ಯಾಮ್ ಮುನಿ

ಔಟ್‌ರೀಚ್ ವಿಭಾಗ

ರೆವ. ವಾಸು ಪಾಲ್

ಭಾನುವಾರ ಶಾಲೆ ವಿಭಾಗ

ರೆವ. ರೇಣುಕಾ ರೋಶ್

ಮಹಿಳಾ ವಿಭಾಗ

ರೆವ. ಸ್ಯಾಮುವೆಲ್ ತತ್ತಿಗಿರಿ

ಯುವಜನ ವಿಭಾಗ

ರೆವ. ಜಾನ್ ಎಲ್ಯೆಝರ್

ಸಂಗೀತ ವಿಭಾಗ

ರೆವ. ಸ್ಯಾಮುವೆಲ್ ಮ್ಯಾಕ್ಲಿನ್ ಆನಂದ

ರೆವ. ಸುಶೀಲ್ ಬಿ. ಸುಮಿತ್ರಾ

ಕನ್ನಡ ಅನುವಾದ

ರೆವ. ಸ್ಯಾಮುವೆಲ್ ಮ್ಯಾಕ್ಲಿನ್ ಆನಂದ

ರೆವ. ಜಾನ್ ಎಲ್ಯೆಝರ್

ರೆವ. ಸುನಿಲ್ ಜಾಯ್

ಹಿಂದಿ ಅನುವಾದ

ರೆವ. ಜಯಂತ್ ರೋಶ್

ಶ್ರೀಮತಿ ರೇಣುಕಾ ರೋಶ್

ಕನ್ನಡ ಕರಡು ಪರಿಶೀಲನೆ

ರೆವ. ಸುನಿಲ್ ಜಾಯ್

ರೆವ. ಸ್ಯಾಮುವೆಲ್ ಮ್ಯಾಕ್ಲಿನ್ ಆನಂದ

ರೆವ. ಜಾನ್ ಎಲ್ಯೆಝರ್

ಹಿಂದಿ ಕರಡು ಪರಿಶೀಲನೆ

ರೆವ. ಜಯಂತ್ ರೋಶ್

ಶ್ರೀಮತಿ ರೇಣುಕಾ ರೋಶ್

ಕಲಾ ನಿರ್ದೇಶಕರು

ಶ್ರೀ ಆನ್ಸ್ಟಿ ಕಾರ್ಕಡ

ವಿಷಯಸೂಚಿ

1 **ಸಂಪಾದಕೀಯ**

ರೆವ. ಸುನಿಲ್ ಜಾಯ್
ಯುಬಿಎಂ ಶಾಲೋಮ್ ಚರ್ಚ್, ನವಿ ಮುಂಬೈ

2 **ಪದಾಧಿಕಾರಿಗಳ ಮೇಜಿನಿಂದ**

ಶ್ರೀ ವಿಶಾಲ್ ಶಿರಿ
ಅಧ್ಯಕ್ಷರು, ಯುಬಿಎಂಸಿ, ಮುಂಬೈ

3 **ಪಾಸ್ಟರ್‌ರ ಮೇಜಿನಿಂದ**

ರೆವ. ಇಯಾನ್ ಐಮನ್
ಯುಬಿಎಂ ಕ್ರಿಸ್ತ ಮಹಿಮಾ ಚರ್ಚ್, ವಸಾಯಿ

4 **ದೈವಶಾಸ್ತ್ರ ಇಂದು**

ರೆವ. ಡಾ. ಆರ್. ಆನಿ ವ್ಯಾಟ್ಸನ್
ಕರ್ನಾಟಕ ಥಿಯಾಲಾಜಿಕಲ್ ಕಾಲೇಜು, ಮಂಗಳೂರು

5 **ಆಧ್ಯಾತ್ಮಿಕತೆ ಇಂದು**

ರೆವ. ಡಾ. ಸಂದೀಪ್ ಥಿಯೋಫಿಲ್
ಅಸೋಸಿಯೇಟ್ ಪ್ರೊಫೆಸರ್, ಕೆಟಿಸಿ, ಮಂಗಳೂರು

6 ಇಂದಿನ ನಾಯಕತ್ವ
ರೆವ. ಸುಶೀಲ್ ಸುಮಿತ್ರಾ
ಯುಬಿಎಂ ಕ್ರಿಸ್ತ ಕೃಪಾ ಚರ್ಚ್, ಚೆಂಬೂರ್

7 ಮಕಾರಿಯೋಸ್
ರೆವ. ರಾಬಿನ್ ಗಾರ್ಜರ್
ಇಸಿಐ ಚರ್ಚ್, ತಲೋಜಾ, ನವಿ ಮುಂಬೈ

8 ಪರೂಸಿಯಾ
ರೆವ. ಗಾಡ್‌ಫ್ರೇ ಸೋನ್ಸ್
ಯುಬಿಎಂ ಸುಶಾಂತಿ ಚರ್ಚ್, ಬೈಕುಲ್ಲಾ

9 ಮಿಷನರಿ ಕಥೆ
ರೆವ. ಜಾನ್ ಎಲ್ಮೈಯುರ್
ಯುಬಿಎಂ ಕ್ರಿಸ್ತ ಕಾಂತಿ ಚರ್ಚ್, ಕುರ್ಲಾ

10 ಸಭೆಯ ಮೇಜಿನಿಂದ
ಶ್ರೀಮತಿ ಯೂನಿಸ್ ಸೋನ್ಸ್
ಯುಬಿಎಂ ಕ್ರಿಸ್ತ ಜ್ಯೋತಿ ಚರ್ಚ್, ಥಾಣೆ

11 ವರದಿಗಳು ಮತ್ತು ಛಾಯಾಚಿತ್ರಗಳು



ಸಂಪಾದಕೀಯ

ರೆವ. ಸುನಿಲ್ ಜಾಯ್
ಯುಬಿಎಂ ಶಾಲೋಮ್ ಚರ್ಚ್, ನವಿ ಮುಂಬೈ

"ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು"

ಬೆಳೆ ಹಬ್ಬವು ಪ್ರತಿಯೊಬ್ಬ ಮಾನವನ ಜೀವಿತದಲ್ಲಿ ಪ್ರಾಮುಖ್ಯವಾದ ದಿನ ಅದರಲ್ಲೂ ರೈತರಿಗೆ ಬಹಳ ಸಂತೋಷಕರವಾದ ದಿನವಾಗಿರುತ್ತದೆ. ಯಾಕೆಂದರೆ ವರ್ಷವಿಡಿ ನೆಲದಲ್ಲಿ ಬೀಜ ಬಿತ್ತಿ, ಆ ಬೀಜವು ಬೆಳೆಯುವುದಕ್ಕೆ ಪರಿಶ್ರಮಪಟ್ಟು, ನೆಲದಲ್ಲಿ ಸಾಕಷ್ಟು ಸಂಕಷ್ಟಗಳನ್ನುಂಡು ಆ ಬೆಳೆಯು ಬೆಳೆದು ಕೊಯ್ಯುವ ಸಂದರ್ಭದಲ್ಲಿ ರೈತನು ಬಹಳ ಸಂತೋಷ ಪಡುತ್ತಾನೆ.

ನಾನು ಪಟ್ಟ ಪರಿಶ್ರಮಕ್ಕೆ ಫಲ ಸಿಕ್ಕಿದೆ, ದೇವರು ನನ್ನ ಪರಿಶ್ರಮಕ್ಕೆ ತಕ್ಕ ಪ್ರತಿಫಲವನ್ನು ಬೆಳೆಯ ಮೂಲಕ ಅನುಗ್ರಹಿಸಿದ್ದಾನೆ ಎಂದು ತಿಳಿದು ಆನಂದಿಸುತ್ತಾನೆ. ಇಂದು ಕ್ರೈಸ್ತರಾದ ನಾವು ಕೂಡ ಈ ಬೆಳೆ ಹಬ್ಬದ ಆರಾಧನೆಯಲ್ಲಿ ಸಂತೋಷಪಡಬೇಕು, ಉಲ್ಲಾಸ ಪಡಬೇಕು ಏಕೆಂದರೆ ವರ್ಷವಿಡಿ ದೇವರು ನಮಗೆ ಬೇಕಾದನ್ನು ಒದಗಿಸಿ ಕೊಟ್ಟಿದ್ದಾನೆ. ದೇವರ ಒದಗಿಸುವಿಕೆಯನ್ನು ನೆನೆಸಿ ನಾವು ಕೃತಜ್ಞತೆಯನ್ನು ತಿಳಿಸಬೇಕಾಗಿದೆ. ಆದ್ದರಿಂದಲೇ ನಾವು ಈ ದಿನವನ್ನು ಬೆಳೆ ಕಾಣಿಕೆ ಎಂದು ಆಚರಿಸುತ್ತಿದ್ದೇವೆ.

ದೇವರ ಒದಗಿಸುವಿಕೆಯನ್ನು ಅನುಭವಿಸುವ ಮೊದಲು ನಮ್ಮೆಲ್ಲರಲ್ಲಿ ನಂಬಿಕೆ ಇರಬೇಕು. ನಾವು ದೇವರನ್ನು, ಆತನ ಕಾರ್ಯಗಳನ್ನು ಮುಖ್ಯವಾಗಿ ಆತನ ಒದಗಿಸುವಿಕೆಯನ್ನು ನಂಬುವವರಾಗಿರಬೇಕು. ರೈತನು ಕೂಡ ತನ್ನ ನೆಲದಲ್ಲಿ ಬೀಜವನ್ನು ಬಿತ್ತುವಾಗ ನಂಬಿಕೆಯಿಂದಲೇ ಬಿತ್ತುತ್ತಾನೆ ಆ ನಂಬಿಕೆಯೇ ಆತನ ನಿರೀಕ್ಷೆ ಆಗಿರುತ್ತದೆ. ನಾವು ಪ್ರತಿಯೊಂದು ಕಾರ್ಯವನ್ನು ಮಾಡುವಾಗಲು ಕೂಡ ನಂಬಿಕೆಯಿಂದಲೇ ಆರಂಭಿಸಬೇಕು.

ನಮ್ಮ ಈ ವರ್ಷದ ಬೆಳೆ ಹಬ್ಬದ ಮುಖ್ಯ ಪ್ರಸ್ತಾಪವು ಕೂಡ: "ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು" ಕೀರ್ತನೆ 126:5 ಎಂಬುದಾಗಿದೆ. ನಂಬಿಕೆಯಿಂದ ಹೇಗೆ ಬಿತ್ತುವುದು ಮತ್ತು ಸಂತೋಷದಿಂದ ಹೇಗೆ ಕೊಯ್ಯುವುದರ ಕುರಿತಾಗಿ ತಿಳಿದುಕೊಳ್ಳೋಣ.

ನಂಬಿಕೆಯಿಂದ ಬಿತ್ತುವುದು

ಕೀರ್ತನೆ 126:5 ರಲ್ಲಿ, "ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು" ಎಂದು ಬರೆಯಲಾಗಿದೆ. ಇಲ್ಲಿ ಕೀರ್ತನಗಾರನು ಈ ಲೋಕದಲ್ಲಿ ಜೀವಿಸುವಾಗ ಅಥವಾ ದೇವರು ನಮಗೆ ನೀಡಿದ ಜವಾಬ್ದಾರಿಗಳನ್ನು ಮಾಡುವಾಗ ನಂಬಿಕೆ, ತಾಳ್ಮೆ, ತ್ಯಾಗ ಮತ್ತು ನಿರೀಕ್ಷೆಯ ಜೀವನವನ್ನು ನಡೆಸುವವರಾಗಿರಬೇಕು.

ನಂಬಿಕೆಯಿಂದ ಈ ಲೋಕದಲ್ಲಿ ಜೀವಿಸುವುದಾದರೆ ಮತ್ತು ದೇವರ ಸೇವೆಯನ್ನು ಆತನು ನಮಗೆ ಕೊಟ್ಟಿರುವ ಜವಾಬ್ದಾರಿಯನ್ನು ನಿರ್ವಹಿಸುವಾಗ ಅತ್ಯುತ್ತಮ ಫಲವನ್ನು ನಾವು ನೋಡುವುದಕ್ಕೆ ಸಾಧ್ಯವಾಗುತ್ತದೆ.

ರೈತನು ಕೂಡ ಆರಂಭದಲ್ಲಿ ಬೀಜವನ್ನು ನೆಲದ ಮೇಲೆ ಬಿತ್ತುವಾಗ ನಂಬಿಕೆಯಿಂದಲೂ ಮತ್ತು ನಿರೀಕ್ಷೆಯಿಂದಲೂ ಬಿತ್ತುತ್ತಾನೆ. ನಾನು ಈಗ ಬಿತ್ತುತ್ತಿರುವ ಈ ಬೀಜವು ಮುಂದೆ ಬೆಳೆದು ಫಲ ಕೊಡುತ್ತದೆ ಎಂಬ ನಿರೀಕ್ಷೆಯಲ್ಲಿಯೇ ಜೀವಿಸುತ್ತಾನೆ. ಆ ಬೀಜವು ಮುಂದೆ ಒಳ್ಳೆ ಫಲ ಕೊಡುತ್ತದೊ ಅಥವಾ ಕೆಟ್ಟ ಫಲ ಕೊಡುತ್ತದೊ ಎಂಬ ಆಲೋಚನೆಯನ್ನು ಇಟ್ಟುಕೊಳ್ಳದೆ ಸಂಪೂರ್ಣವಾದ ನಂಬಿಕೆಯಿಂದ ಬೀಜವನ್ನು ಬಿತ್ತುತ್ತಾನೆ.

ಆ ರೈತನು ದೇವರ ಮೇಲೆ ನಂಬಿಕೆ ಇಟ್ಟಿರುತ್ತಾನೆ ಮತ್ತು ತನ್ನ ಭೂಮಿಯ ಮೇಲೆಯೂ ನಂಬಿಕೆ ಇಟ್ಟು ಬೆಳೆಗೋಸ್ಕರ ನಿರೀಕ್ಷಿಸುತ್ತಾನೆ.

ಇಂದು ಕ್ರೈಸ್ತರಾದ ನಮ್ಮ ಜೀವನವೂ ಕೂಡ ಇದೇ ರೀತಿ ಆಗಿದೆ. ಹೇಗೆಂದರೆ ದೇವರು ನಮಗೆ ನೀಡಿರುವ ಜವಾಬ್ದಾರಿಗಳನ್ನು ನಾವು ನಂಬಿಕೆಯಿಂದ ನಡೆಸುವವರಾಗಿರಬೇಕು. ಮುಖ್ಯವಾಗಿ ಈ ಶಾಶ್ವತವಲ್ಲದ ಲೋಕದಲ್ಲಿ ಪ್ರತಿನಿತ್ಯವೂ ಕೂಡ ನಂಬಿಕೆಯಿಂದಲೇ ಜೀವಿಸಬೇಕಾಗಿದೆ.

ನಾವು ಬೀಜವನ್ನು ಬಿತ್ತುವಾಗ ಆ ಬೀಜವು ಮುಂದೆ ಯಾವ ರೀತಿಯ ಫಲವನ್ನು ನೀಡುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಅದೇ ರೀತಿಯಲ್ಲಿ ನಂಬಿಕೆಯು ಕೂಡ ನಾವು ದೇವರ ಮೇಲೆ ನಂಬಿಕೆ ಇಟ್ಟಾಗ ಅಥವಾ ಭರವಸೆ ಇಟ್ಟಾಗ ಅದರ ಪರಿಣಾಮವನ್ನು ನೋಡುವುದಕ್ಕೆ ಸಾಧ್ಯವಿಲ್ಲ.

ಆದ್ದರಿಂದಲೇ ಪೌಲನು ನಾವು ನೋಡುವವರಾಗಿ ನಡೆಯದೆ ನಂಬುವರಾಗಿಯೇ ನಡೆಯುವವರಾಗಿರಬೇಕು 2 ಕೋರಿಂಥ 5:7 ರಲ್ಲಿ ತಿಳಿಸಿದ್ದಾನೆ. ನಾವು ಪ್ರಾರ್ಥನೆ ಮಾಡಿದ ತಕ್ಷಣವೇ ಉತ್ತರವನ್ನ ನೋಡುವುದಕ್ಕೆ ಸಾಧ್ಯವಿಲ್ಲ ಹಾಗೆ ನಮ್ಮ ಜೀವನದಲ್ಲಿ ಬದಲಾವಣೆಗಳನ್ನು ಮತ್ತು ಉತ್ತಮ ಭವಿಷ್ಯವನ್ನ ತಕ್ಷಣವೇ ರೂಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಂಬಿಕೆಯಿಂದ ದೇವರ ದಿನಕ್ಕೋಸ್ಕರ ಮತ್ತು ಆತನ ಉತ್ತರ ಕೋಸ್ಕರ ಮುಖ್ಯವಾಗಿ ಆತನ ಅದ್ಭುತ ಕಾರ್ಯಗೋಸ್ಕರ ತಾಳ್ಮೆ, ಸಹನೆಯಿಂದ ಮತ್ತು ನಂಬಿಕೆಯಿಂದ ಕಾಯಬೇಕು.

"ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರುಹೊಯಿದನು ಆದರೆ ಬೆಳೆಸುತ್ತಾ ಬಂದವನು ದೇವರು," 1 ಕೊರಿಂಥ 3:6. ಈ ವಾಕ್ಯದ ಮೂಲಕ ಪೌಲನು ದೇವರು ನಮಗೆ ನೀಡಿರುವ ಜವಾಬ್ದಾರಿಗಳನ್ನು ನಾವು ನಂಬಿಕೆಯಿಂದ ಪ್ರತಿನಿತ್ಯವೂ ಮಾಡಬೇಕು. ನಾವು ಈ ಲೋಕದಲ್ಲಿ ಜೀವಿಸುವಾಗಲು ಕೆಲಸ ಕಾರ್ಯಗಳನ್ನು ಮಾಡುವಾಗಲು ನಿರ್ಧಾರಗಳನ್ನ ತೆಗೆದುಕೊಳ್ಳುವಾಗಲು ನಾವು ನಂಬಿಕೆಯಿಂದ ಮಾಡಬೇಕು. ನಾವು ನಂಬಿಕೆಯಿಂದ ಎಲ್ಲವನ್ನು ಮಾಡುವುದಾದರೆ ಅದರ ಫಲವನ್ನು ದೇವರೇ ನಮಗೆ ಅನುಗ್ರಹಿಸುತ್ತಾನೆ.

ಇಂದು ನಂಬಿಕೆಯಿಂದ ಬಿತ್ತಿರಿ, ನಾಳೆ ಅದರ ಫಲವನ್ನು ನೋಡಲು ಸಾಧ್ಯವಾಗದಿದ್ದರೂ ಬೀಜವನ್ನು ಬಿತ್ತಿರಿ ಯಾಕೆಂದರೆ ದೇವರು ನಿಮ್ಮ ಪರಿಶ್ರಮವನ್ನು ಮತ್ತು ಕಣ್ಣೀರನ್ನು ನೋಡುವವನಾಗಿದ್ದಾನೆ. ನಮ್ಮ ದೇವರು ಆತನು ನೇಮಿಸಿದ ದಿನದಲ್ಲಿ ಮತ್ತು

ಸಮಯದಲ್ಲಿ ಸಮೃದ್ಧ ಬೆಳೆಯನ್ನು ಒದಗಿಸಲು ಶಕ್ತನಾಗಿದ್ದಾನೆ.

ಸಂತೋಷದಲ್ಲಿ ಕೊಯ್ಯುವುದು

ಕಷ್ಟಗಳು ಅಥವಾ ಕಣ್ಣೀರನ್ನ ಜೀವನ ಇದುವೇ ಕಥೆಯ ಅಂತ್ಯವಲ್ಲ ಬದಲಾಗಿ ನಂಬಿಕೆಯಿಂದ ಕಷ್ಟದ ಜೀವನದ ಮಧ್ಯದಲ್ಲಿಯೂ ಜೀವಿಸಿದರೆ ಸಂತೋಷದ ಕ್ಷಣಗಳನ್ನು ಮತ್ತು ಸಮೃದ್ಧಿಯ ಸುಗ್ಗಿಯನ್ನು ನೋಡಬಹುದು.

ನಮ್ಮೆಲ್ಲರ ಜೀವನದಲ್ಲಿ ಕೂಡ ಕಷ್ಟಗಳು ಬರುತ್ತಲೇ ಇರುತ್ತವೆ. ಒಂದು ಸಮಸ್ಯೆಯಿಂದ ಹೊರಬಂದು ನಿಂತರೆ ಮತ್ತೊಂದು ಸಮಸ್ಯೆಯು ನಮ್ಮ ದಾರಿಯಲ್ಲಿ ಸಿದ್ಧವಾಗಿ ನಿಂತಿರುತ್ತದೆ. ನಮ್ಮ ಪ್ರತಿನಿತ್ಯದ ಜೀವನದಲ್ಲಿ ಸಂತೋಷ, ಸಮಾಧಾನ ಮತ್ತು ಸಮೃದ್ಧಿಯನ್ನು ಪಡೆದುಕೊಳ್ಳುವುದಕ್ಕಾಗಿ ಅನೇಕ ಹೋರಾಟಗಳನ್ನ ನಡೆಸುತ್ತೇವೆ. ಈ ಹೋರಾಟದ ಜೀವನದಲ್ಲಿ ಅನೇಕ ಬಾರಿ ಸೋತಿದ್ದೇವೆ ಮತ್ತು ಕೆಳಗೆ ಬಿದ್ದಿದ್ದೇವೆ, ಕುಂದಿ ಹೋಗಿದ್ದೇವೆ, ನಿರಾಶೆಯ ಜೀವನವನ್ನ ನಡೆಸಿದ್ದೇವೆ.

ರೈತನು ತನ್ನ ಹೊಲದಲ್ಲಿ ಬೀಜವನ್ನು ಬಿತ್ತಿದ ಮೇಲೆ ಆ ಬೀಜವು ಬೆಳೆದು ಫಲ ಕೊಡುವ ವರೆಗೂ ಕೂಡ ಕಷ್ಟ ಪಡುತ್ತಲೇ ಇರುತ್ತಾನೆ. ಆ ಬೀಜವು ಗಿಡವಾದ ಮೇಲೆ ಅದನ್ನ ಸಂರಕ್ಷಿಸಬೇಕು ಯಾರು ಅದನ್ನು ಕಿತ್ತು ಹಾಕದಂತೆ ನೋಡಿಕೊಳ್ಳಬೇಕು ಪ್ರತಿದಿನ ಅದಕ್ಕೆ ನೀರು ಗೊಬ್ಬರಗಳನ್ನ ಹಾಕಿ ಪೋಷಿಸುವುದು ಆತನ ಜವಾಬ್ದಾರಿಯಾಗಿದೆ.

ರೈತನು ಫಲವನ್ನು ಅನುಭವಿಸಬೇಕಾದರೆ ಅಥವಾ ಸುಗ್ಗಿಯನ್ನು ನೋಡಬೇಕಾದರೆ ಆತನು ತಾಳ್ಮೆಯಿಂದ ಕಾಯಲೇಬೇಕು ಹಾಗೂ ತನ್ನ ಬೆಳೆಯನ್ನು ಪ್ರತಿದಿನ ಸಂರಕ್ಷಿಸುವುದರಲ್ಲಿ ನಿರತನಾಗಿರಬೇಕು. ಹೀಗೆ ಆತನು ತನ್ನ ಕೆಲಸವನ್ನ ನಂಬಿಕೆಯಿಂದಲೂ ನಿಷ್ಠೆಯಿಂದಲೂ ಮಾಡಿದರೆ ಸುಗ್ಗಿಯ ಕಾಲದಲ್ಲಿ ಆತನು ಹೆಚ್ಚಾಗಿ ಸಂತೋಷಪಡುತ್ತಾನೆ ಮುಖ್ಯವಾಗಿ ಸುಗ್ಗಿಯ ಸಮಯದಲ್ಲಿ ಸಂತೋಷವಾಗಿ ತನ್ನ ಬೆಳೆಯನ್ನು ಕೊಯ್ಯುತ್ತಾನೆ.

ಇಂದು ನಮ್ಮ ಜೀವನವೂ ಕೂಡ ಇದೇ ರೀತಿಯಾಗಿದೆ. ನಾವು ನಮ್ಮ ಜೀವನದಲ್ಲಿ ಬರುವ ಕಷ್ಟಗಳನ್ನು ಸಹಿಸಿಕೊಂಡು ಆ ಸಂಕಷ್ಟಗಳನ್ನು ಪ್ರತಿನಿತ್ಯ ಧೈರ್ಯದಿಂದ ಎದುರಿಸುತ್ತಾ, ನಮ್ಮ ಕಣ್ಣೀರಿನ ಜೀವನದಲ್ಲಿ ನಂಬಿಕೆಯಿಂದ ಜೀವಿಸುವುದಾದರೆ ನಾವು ಕೂಡ ನಮ್ಮ ಜೀವನದಲ್ಲಿ ಸಂತೋಷವನ್ನು ಅದ್ಭುತವನ್ನು ನೋಡಬಹುದು.

"ಒಳ್ಳೆಯದನ್ನು ಮಾಡುವುದರಲ್ಲಿ ಬೇಸರಗೊಳ್ಳದೆ ಇರೋಣ. ಯಾಕೆಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು." ಗಲಾತ್ಯ 6:9

ಆದ್ದರಿಂದ ನಮ್ಮ ಜೀವನದಲ್ಲಿ ಎಂದಿಗೂ ಬೇಸರಗೊಳ್ಳದೆ ಮನ ಗುಂದದೆ ಕಷ್ಟಗಳು ಬಂದಾಗ್ಲೂ ಕೂಡ ಕುಗ್ಗಿ ಹೋಗದೆ ನಂಬಿಕೆಯಿಂದ ಜೀವಿಸೋಣ. ಆಗ ದೇವರು ನೇಮಿಸಿದ ದಿನದಲ್ಲಿ ಸಂತೋಷವನ್ನ ನೋಡುವುದಕ್ಕೆ ಸಾಧ್ಯ.

ಈ ಬೆಳೆ ಹಬ್ಬವು ನಮಗೆ ಎರಡು ರೀತಿಯ ಸಂದೇಶವನ್ನ ಅಥವಾ ಎಚ್ಚರಿಕೆಯನ್ನು ನೀಡುವಂಥದ್ದಾಗಿದೆ. ಈ ಬೆಳೆ ಹಬ್ಬದ ಸಂದರ್ಭದಲ್ಲಿ ದೇವರಿಗೆ ಕೃತಜ್ಞತೆ ತಿಳಿಸಬೇಕು. ಯಾಕೆಂದರೆ ವರ್ಷವಿಡೀ ನಮಗೆ ಬೇಕಾದ ಆಹಾರ ನೀರು ನಮ್ಮ ಅಗತ್ಯತೆಗಳನ್ನು ಪ್ರತಿದಿನವೂ ಪೂರೈಸಿದಕ್ಕಾಗಿ ಮತ್ತು ಸಮೃದ್ಧಿಯನ್ನು ಒದಗಿಸಿದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುವವರಾಗಿರಬೇಕು.

ಈ ಬೆಳೆ ಹಬ್ಬವು ನಮಗೆ ಎಚ್ಚರಿಕೆಯನ್ನು ಕೂಡ ನೀಡುತ್ತದೆ. ಫಲ ಕೊಡದ ಪ್ರತಿಯೊಂದು ಮರಗಳನ್ನ ಕಡಿದು ಹಾಕುವ ದಿನವೂ ಬೇಗನೆ ಬರುತ್ತದೆ. ಅಂದರೆ ಕರ್ತನ ದಿನವೂ ಹತ್ತಿರವಾಗಿದೆ ನೀವು ಪಶ್ಚಾತಾಪ ಪಡದೆ ನೀತಿವಂತರಾಗದೆ ಉತ್ತಮ ಫಲಗಳನ್ನು ಕೊಡುವಲ್ಲಿ ಸೋತು ಹೋದರೆ ಆ ದಿನದಲ್ಲಿ ನ್ಯಾಯ ವಿಚಾರಣೆಗೆ ಒಳಗಾಗಬೇಕಾಗುತ್ತದೆ.

ಆದ್ದರಿಂದಲೇ ಈಗಲೇ ದೇವರ ಕಡೆಗೆ ತಿರುಗಿಕೊಂಡು ತಮ್ಮ ಪಾಪಗಳನ್ನು ಒಪ್ಪಿಕೊಂಡು ಕ್ಷಮಾಪಣೆಯನ್ನು ಪಡೆದು ಫಲ ಕೊಡುವ ಜೀವನವನ್ನ ನಡೆಸಿರಿ.

ಈ ಲೋಕದ ಜೀವನದಲ್ಲಿ ಪ್ರತಿನಿತ್ಯವು ನಂಬಿಕೆಯಿಂದ ಜೀವಿಸೋಣ, ದೇವರ ಮೇಲೆ ನಂಬಿಕೆ ಇಟ್ಟು ನಮ್ಮ ಕೆಲಸಗಳನ್ನು ಮಾಡೋಣ ದೇವರ ನಿಯೋಗಿಕ ಸೇವೆಯನ್ನು ಮುಂದುವರಿಸೋಣ ಆಗ ಮುಂದೆ ಸಂತೋಷದಿಂದ ನಾವು ಹಾಕಿದ ಬೀಜದ ಬೆಳೆಯನ್ನು ಕೊಯ್ಯೋಣ.

ತಮ್ಮೆಲ್ಲರಿಗೂ ಬೆಳೆ ಹಬ್ಬದ ಹಾರ್ದಿಕ ಶುಭಾಶಯಗಳು. ದೇವರು ನಿಮ್ಮ ನಂಬಿಕೆಯನ್ನು ವೃದ್ಧಿಸಲಿ, ಸಮೃದ್ಧಿಯನ್ನು ಹೆಚ್ಚಾಗಿ ಅನುಗ್ರಹಿಸಲಿ. ತಂದೆ ಮಗ ಪವಿತ್ರಾತ್ಮನು ನಿಮ್ಮ ಜೀವನದಲ್ಲಿ ಶಾಂತಿ ಸಮಾಧಾನ ಮತ್ತು ಸಂತೋಷವನ್ನು ನೀಡಲಿ.



ಪದಾಧಿಕಾರಿಗಳ ಮೇಜಿನಿಂದ

ಶ್ರೀ ವಿಶಾಲ್ ಶಿರಿ

ಅಧ್ಯಕ್ಷರು, ಯುಬಿಎಂಸಿ, ಮುಂಬೈ

ಕ್ರಿಸ್ತನಲ್ಲಿ ಪ್ರಿಯ ಸಹೋದರ ಸಹೋದರಿಯರೇ,

ನಮ್ಮ ವಾರ್ಷಿಕ ಬೆಳೆ ಹಬ್ಬವನ್ನು ಆಚರಿಸಲು ನಾವು ಒಂದಾಗಿ ಸೇರುವಾಗ, ದೇವರು ನಮಗೆ ನೀಡಿರುವ ಅದ್ಭುತವಾದ ಪೂರೈಕೆಯ ಸ್ಪಷ್ಟ ಗುರುತುಗಳನ್ನು ನೋಡುತ್ತಾ, ನಮ್ಮ ಹೃದಯವು ಕೃತಜ್ಞತೆಯಿಂದ ತುಂಬುತ್ತದೆ.

ಈ ಹಬ್ಬವು ಕೇವಲ ಒಂದು ಸಾಂಪ್ರದಾಯಿಕ ಆಚರಣೆಯಲ್ಲ; ಸರ್ವಶಕ್ತನಾದ ದೇವರ ಮೇಲೆ ನಾವು ಸಂಪೂರ್ಣವಾಗಿ ಅವಲಂಬಿತರಾಗಿದ್ದೇವೆ ಎಂಬ ಸತ್ಯವನ್ನು ಅಂಗೀಕರಿಸುವ ಒಂದು ಪವಿತ್ರ ಸಮಯವಾಗಿದೆ. ಆತನು ಭೂಮಿಯನ್ನು ಮಾತ್ರವಲ್ಲ, ನಮ್ಮ ಆತ್ಮಗಳನ್ನೂ ಪೋಷಿಸಿ, ಸಂರಕ್ಷಿಸುತ್ತಾನೆ.

ಧರ್ಮಶಾಸ್ತ್ರದಲ್ಲಿ ಬಿತ್ತುವುದು ಮತ್ತು ಕೊಯ್ಯುವುದು ಎಂಬ ಚಕ್ರವು ಆಳವಾದ ಆಧ್ಯಾತ್ಮಿಕ ಅರ್ಥವನ್ನು ಹೊಂದಿದೆ. ಕಳೆದ ಒಂದು ವರ್ಷದಲ್ಲಿ ನಾವು ಬಿತ್ತಿದ ಬೀಜಗಳನ್ನು ನಮ್ಮ ಸಂಪನ್ಮೂಲಗಳ ಮೂಲಕವಾಗಲಿ, ನಮ್ಮ ಸಮಯದ ಮೂಲಕವಾಗಲಿ, ಅಥವಾ ನಮ್ಮ ಸೇವಾ ಕಾರ್ಯಗಳ ಮೂಲಕವಾಗಲಿ ಚಿಂತಿಸುವಾಗ, ಅಪೋಸ್ತಲ ಪೌಲನು ತಿಳಿಸಿರುವ ಆಧ್ಯಾತ್ಮಿಕ ನಿಯಮವು ನಮಗೆ ನೆನಪಾಗುತ್ತದೆ:

"ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು; ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು." (2 ಕೊರಿಂಥದವರಿಗೆ 9:6)

ನಿಜವಾದ ಸಮೃದ್ಧಿಯು ದೇವರು ನಮ್ಮ ಜೀವನದಲ್ಲಿ ಸುರಿಸಿರುವ ಆಶೀರ್ವಾದಗಳಲ್ಲಿಂದ ಒಂದು ಭಾಗವನ್ನು ಸಂತೋಷದಿಂದ ಕಾಣಿಕೆಯಾಗಿ ಕೊಡುವಾಗಲು, ದೇವರನ್ನು ಸಂಪೂರ್ಣವಾಗಿ ನಂಬುವ ಹೃದಯದಿಂದಲೂ ನಮ್ಮ ಸಮೃದ್ಧಿಯು ಕಂಡುಬರುತ್ತದೆ.

ಬೆಳೆಯ ಕಾಲವು ತಾಳ್ಮೆ ಮತ್ತು ಸ್ಥೈರ್ಯವನ್ನು ಆಚರಿಸುವ ಕಾಲವೂ ಹೌದು. ಇಂದು ನಾವು ಅನುಭವಿಸುವ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಆಶೀರ್ವಾದಗಳು, ಫಲವು ಕಾಣಿಸಿಕೊಳ್ಳುವ ಬಹಳ ಹಿಂದೆಯೇ ನಡೆದಿರುವ ಮೌನವಾದ, ನಂಬಿಗಸ್ತ ಪರಿಶ್ರಮದ ಫಲಗಳಾಗಿವೆ.

ಕೆಲವು ಸಂದರ್ಭಗಳಲ್ಲಿ ಕಣ್ಣೀರಿನೊಂದಿಗೆ, ಸವಾಲುಗಳ ನಡುವೆ ಮತ್ತು ಅನಿಶ್ಚಿತತೆಯಲ್ಲಿಯೂ ನಾವು ಬಿತ್ತಬೇಕಾಗುತ್ತದೆ. ಆದರೂ ದೇವರು ತನ್ನ ವಾಕ್ಯಕ್ಕೆ ನಂಬಿಗಸ್ತನಾಗಿರುತ್ತಾನೆ. ಕೀರ್ತನೆ 126:5 ನಮಗೆ ಸುಂದರವಾಗಿ ನೆನಪಿಸುತ್ತದೆ: "ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು."

ನೀವು ಈಗ ಕಾಯುವಿಕೆಯ ಅಥವಾ ಹೋರಾಟದ ಕಾಲದಲ್ಲಿದ್ದರೆ, ಧೈರ್ಯವಾಗಿರಿ. ಕರ್ತನಲ್ಲಿ ನೀವು ಮಾಡುವ ಪರಿಶ್ರಮವು ಎಂದಿಗೂ ವ್ಯರ್ಥವಾಗುವುದಿಲ್ಲ. ಆಧ್ಯಾತ್ಮಿಕ ಬೆಳೆಯು ದೇವರ ಪರಿಪೂರ್ಣ ಸಮಯದಲ್ಲಿ ಖಂಡಿತವಾಗಿಯೂ ಬರುತ್ತದೆ.

ನಮ್ಮ ಮುಂದೆ ಇರುವ ಸಮೃದ್ಧವಾದ ದೇವರ ಪೂರೈಕೆಯನ್ನು ನೋಡುವಾಗ, ನಾವು ನಮ್ಮ ದೃಷ್ಟಿಯನ್ನು ಹೊರಗಿನವರ ಕಡೆಗೂ ತಿರುಗಿಸೋಣ. ಗಲಾತ್ಯದವರಿಗೆ 6:9 ಹೀಗೆ ನೆನಪಿಸುತ್ತದೆ:

"ಒಳ್ಳೆಯದನ್ನು ಮಾಡುವುದರಲ್ಲಿ ಬೇಸರಗೊಳ್ಳದೆ ಇರೋಣ; ನಾವು ಮನಗುಂದದಿದ್ದರೆ ತಕ್ಕ ಕಾಲದಲ್ಲಿ ಕೊಯ್ಯುವೆವು."

ಈ ಬೆಳೆ ಹಬ್ಬದ ಸಂದರ್ಭದಲ್ಲಿ ನಮ್ಮ ಕ್ರೈಸ್ತ ಕರ್ತವ್ಯದ ಒಂದು ಭಾಗವೇನೆಂದರೆ ಅಗತ್ಯದಲ್ಲಿರುವವರೊಂದಿಗೆ ನಮ್ಮ ಆಶೀರ್ವಾದಗಳನ್ನು ಹಂಚಿಕೊಳ್ಳುವುದು. ಹೀಗೆ ನಮ್ಮ ದೇವಾಲಯದ ಗೋಡೆಗಳ ಒಳಗೂ ಹೊರಗೂ ಕ್ರಿಸ್ತನ ಪ್ರೀತಿಯು ಕಾರ್ಯರೂಪದಲ್ಲಿ ಅನುಭವಿಸಲ್ಪಡುವಂತೆ ಮಾಡೋಣ.

ಅಂತಿಮವಾಗಿ, ನಮ್ಮ ದೃಷ್ಟಿಯನ್ನು ಅತ್ಯಂತ ಮಹತ್ವದ ಬೆಳೆಯ ಕಡೆಗೆ ದೇವರ ರಾಜ್ಯಕ್ಕೆ ಆತ್ಮಗಳನ್ನು ಸೇರಿಸುವ ಕಡೆಗೆ ಇರಿಸೋಣ. ಯೇಸು ತನ್ನ ಶಿಷ್ಯರಿಗೆ ಹೀಗೆ ನೆನಪಿಸಿದನು:

"ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದ್ದರಿಂದ ಬೆಳೆಯ ಯಜಮಾನನನ್ನು – ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ." (ಮತ್ತಾಯ 9:37 38)

ಒಂದು ಸಭೆಯಾಗಿ, ನಾವು ಭೌತಿಕ ಫಲಗಳನ್ನು ಮಾತ್ರ ಸಂಗ್ರಹಿಸುವವರಾಗಿರದೆ, ನಾವು ಭೇಟಿಯಾಗುವ ಪ್ರತಿಯೊಬ್ಬರ ಹೃದಯದಲ್ಲಿ ರಕ್ಷಣೆಯ ಸುವಾರ್ತೆಯ ಬೀಜವನ್ನು ಬಿತ್ತುವಲ್ಲಿ ನಂಬಿಗಸ್ತರಾಗಿರೋಣ.

ನಿಮಗೂ ನಿಮ್ಮ ಕುಟುಂಬದವರಿಗೂ ಸಂತೋಷಭರಿತ, ಆಶೀರ್ವಾದಪೂರ್ಣ ಮತ್ತು ಆತ್ಮಾವಲೋಕನದಿಂದ ಕೂಡಿದ ಬೆಳೆ ಹಬ್ಬದ ಶುಭಾಶಯಗಳನ್ನು ಕೋರುತ್ತೇನೆ.

ಬೆಳೆಯ ಕರ್ತನು ನಿಮ್ಮ ಜೀವನವನ್ನು ಸಮೃದ್ಧಿಗೊಳಿಸಲಿ, ನೀವು ಬಿತ್ತಿದ ಬೀಜಗಳನ್ನು ಹೆಚ್ಚಿಸಲಿ ಮತ್ತು ನಿಮ್ಮ ನೀತಿಯಲ್ಲಿ ವೃದ್ಧಿಯನ್ನು ಉಂಟುಮಾಡಲಿ.



ಪಾಸ್ಟರ್‌ರ ಮೇಜಿನಿಂದ

ರೆವ. ಇಯಾನ್ ಐಮನ್
ಯುಬಿಎಂ ಕ್ರಿಸ್ತ ಮಹಿಮಾ ಚರ್ಚ್, ವಸಾಯಿ

"ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು"

ಸುಗ್ಗಿಯು ಕೃತಜ್ಞತೆಯ ಕಾಲವಾಗಿದೆ. ದೇವರು ನಮಗೆ ನೀಡಿರುವ ಆಶೀರ್ವಾದಗಳನ್ನು ನಾವು ಆಚರಿಸುವಾಗ, ಒಂದು ಮಹತ್ವದ ಆತ್ಮೀಕ ಸತ್ಯವನ್ನು ನೆನಪಿಸಿಕೊಳ್ಳುತ್ತೇವೆ: ಪ್ರತಿಯೊಂದು ಸುಗ್ಗಿಯೂ ಒಂದು ಬೀಜದಿಂದ ಆರಂಭವಾಗುತ್ತದೆ, ಮತ್ತು ಪ್ರತಿಯೊಂದು ಬೀಜವನ್ನು ಬಿತ್ತಲು ನಂಬಿಕೆಯ ಅಗತ್ಯವಿದೆ.

ಕೀರ್ತನೆ 126:5 ಹೀಗೆ ಹೇಳುತ್ತದೆ: "ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು." ಈ ವಚನವು ನಮ್ಮ ನಂಬಿಕೆಯ ಪಯಣದಲ್ಲಿ ತ್ಯಾಗ, ನಿರೀಕ್ಷೆ, ಅನಿಶ್ಚಿತತೆ ಮತ್ತು ಕಣ್ಣೀರಿನ ಸಮಯಗಳೂ ಇರಬಹುದು ಎಂಬುದನ್ನು ನಮಗೆ ನೆನಪಿಸುತ್ತದೆ. ಆದಾಗ್ಯೂ, ನಾವು ನಂಬಿಗಸ್ತರಾಗಿರುವಾಗ, ದೇವರು ತನ್ನ ಪರಿಪೂರ್ಣ ಸಮಯದಲ್ಲಿ ಸಮೃದ್ಧವಾದ ಸುಗ್ಗಿಯನ್ನು ನೀಡಬಲ್ಲನು.

ಈ ಸುಗ್ಗಿಯ ಕಾಲವನ್ನು ಧ್ಯಾನಿಸುವಾಗ, "SEED" ಎಂಬ ಪದದಿಂದ ಮೂರು ಪ್ರಮುಖ ಸತ್ಯಗಳನ್ನು ಅರಿಯೋಣ.

S ನಂಬಿಕೆಯಲ್ಲಿ ಬಿತ್ತಿರಿ (SOW IN FAITH)

ಒಬ್ಬ ರೈತನು ಬೀಜವನ್ನು ಬಿತ್ತುವಾಗ, ಮಣ್ಣಿನೊಳಗೆ ಏನು ನಡೆಯುತ್ತಿದೆ ಎಂಬುದನ್ನು ತಕ್ಷಣವೇ ನೋಡಲು ಸಾಧ್ಯವಿಲ್ಲ. ಆದರೂ ಸರಿಯಾದ ಸಮಯದಲ್ಲಿ ಆ ಬೀಜವು ಬೆಳೆಯುತ್ತದೆ ಎಂಬ ನಂಬಿಕೆಯಿಂದ ಅವನು ಬಿತ್ತುತ್ತಾನೆ.

ನಂಬಿಕೆಯೂ ಹಾಗೆಯೇ. ತಕ್ಷಣವೇ ಉತ್ತರಗಳನ್ನು ಕಾಣದೆ ನಾವು ಪ್ರಾರ್ಥಿಸುತ್ತೇವೆ. ಫಲಿತಾಂಶಗಳನ್ನು ನೋಡದೆ ಸೇವೆ ಮಾಡುತ್ತೇವೆ. ನಮ್ಮ ಕಾರ್ಯಗಳು ಯಾವ ಪರಿಣಾಮ ಬೀರುತ್ತವೆ ಎಂದು ತಿಳಿಯದೆ ನಾವು ಕೊಡುತ್ತೇವೆ, ಪ್ರೋತ್ಸಾಹಿಸುತ್ತೇವೆ, ಬೋಧಿಸುತ್ತೇವೆ, ಕ್ಷಮಿಸುತ್ತೇವೆ ಮತ್ತು ಪ್ರೀತಿಸುತ್ತೇವೆ.

ಸಭೆಯಾಗಿ ನಾವು ಮಾಡುವ ಪ್ರತಿಯೊಂದು ಸೇವೆಯೂ ಒಂದು ಬೀಜವಾಗಿದೆ. ನಮ್ಮ ಮಕ್ಕಳಿಗೆ ಬೋಧಿಸುವಾಗ, ರೋಗಿಗಳನ್ನು ಸಂದರ್ಶಿಸುವಾಗ, ನಿರುತ್ಸಾಹಗೊಂಡವರನ್ನು ಪ್ರೋತ್ಸಾಹಿಸುವಾಗ, ಅಗತ್ಯದಲ್ಲಿರುವವರಿಗೆ ಸಹಾಯ ಮಾಡುವಾಗ, ಒಟ್ಟಾಗಿ ಆರಾಧಿಸುವಾಗ ಮತ್ತು ದೇವರ ಕಾರ್ಯಕ್ಕಾಗಿ ಕೊಡುವಾಗ, ಈ ಮೂಲಕವಾಗಿ ನಾವು ಬೀಜಗಳನ್ನು ಬಿತ್ತುತ್ತಿದ್ದೇವೆ.

ಗಲಾತ್ಯದವರಿಗೆ 6:9 ನಮಗೆ ಹೀಗೆ ಪ್ರೋತ್ಸಾಹಿಸುತ್ತದೆ: "ಒಳ್ಳೆಯದನ್ನು ಮಾಡುವುದರಲ್ಲಿ ಬೇಸರಗೊಳ್ಳದೆ ಇರೋಣ; ನಾವು

ದಣಿಯದೆ ಇದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು."

ಸಣ್ಣ ಆರಂಭಗಳನ್ನು ತಿರಸ್ಕರಿಸಬೇಡಿ. ನಂಬಿಗಸ್ತಿಕೆಯಿಂದ ಬಿತ್ತಿರಿ, ಏಕೆಂದರೆ ದೇವರು ಪ್ರತಿಯೊಂದು ಬೀಜವನ್ನೂ ನೋಡುತ್ತಾನೆ.

E ಕಣ್ಣೀರಿನಲ್ಲಿಯೂ ಸಹಿಸಿಕೊಳ್ಳಿರಿ (ENDURE THROUGH TEARS)

ಕೀರ್ತನೆ 126 ಬಿತ್ತುವಿಕೆ ಯಾವಾಗಲೂ ಸುಲಭವಾಗಿರುತ್ತದೆ ಎಂದು ಹೇಳುವುದಿಲ್ಲ. ಬದಲಾಗಿ, ಕೆಲವರು "ಕಣ್ಣೀರಿನಲ್ಲಿ ಬಿತ್ತುವರು" ಎಂದು ಹೇಳುತ್ತದೆ.

ಜೀವನವೆಂಬ ಮಣ್ಣು ಕೆಲವು ವೇಳೆ ಬಹಳ ಕಠಿಣವಾಗಿ ಕಾಣುತ್ತದೆ. ನಾವು ಸ್ವಸ್ಥತೆಗಾಗಿ, ಪುನಃಸ್ಥಾಪನೆಗಾಗಿ, ಪೂರೈಕೆಗಾಗಿ, ಸಮಾಧಾನಕ್ಕಾಗಿ ಅಥವಾ ಒಂದು ಅದ್ಭುತಕ್ಕಾಗಿ ಪ್ರಾರ್ಥಿಸಬಹುದು; ಆದರೆ ಉತ್ತರವು ತಡವಾಗುತ್ತಿರುವಂತೆ ಕಾಣಬಹುದು. ಕೆಲವೊಮ್ಮೆ ನಮ್ಮ ಪ್ರಾರ್ಥನೆಗಳು ಮತ್ತು ಪ್ರಯತ್ನಗಳು ಯಾವುದಾದರೂ ಬದಲಾವಣೆಯನ್ನು ತರುತ್ತಿವೆಯೇ ಎಂದು ನಾವು ಆಶ್ಚರ್ಯಪಡಬಹುದು.

ಆದರೆ ಕಣ್ಣೀರು ಎಂದರೆ ದೇವರು ನಮ್ಮನ್ನು ಕೈಬಿಟ್ಟಿದ್ದಾನೆ ಎಂದಲ್ಲ. ಯೇಸು ಸ್ವತಃ ಲಾಜರನ ಸಮಾಧಿಯ ಬಳಿ ಕಣ್ಣೀರಿಟ್ಟನು. ಆದರೆ ಆ ಕಥೆ ಕಣ್ಣೀರಿನಲ್ಲೇ ಕೊನೆಗೊಳ್ಳಲಿಲ್ಲ. ಆ ಕಣ್ಣೀರಿನ ನಂತರ ಪುನರುತ್ಥಾನದ ಅದ್ಭುತ ಸಂಭವಿಸಿತು. ಅದೇ ರೀತಿ, ನಮ್ಮ ಕಣ್ಣೀರು ಕಥೆಯ ಒಂದು ಭಾಗವಾಗಿರಬಹುದು; ಆದರೆ ಅದು ನಮ್ಮ ಕಥೆಯ ಅಂತ್ಯವಾಗಬೇಕೆಂದಿಲ್ಲ.

ದೇವರು ಏನು ಮಾಡುತ್ತಿದ್ದಾನೆ ಎಂಬುದನ್ನು ನಾವು ನೋಡಲು ಸಾಧ್ಯವಾಗದಿದ್ದರೂ, ದೇವರು ಯಾರು ಎಂಬುದನ್ನು ನಾವು ನಂಬಬಹುದು. ನಿರೀಕ್ಷೆಯ ಕಾಲದಲ್ಲಿಯೂ ನಂಬಿಗಸ್ತರಾಗಿ ಉಳಿಯುವುದು ನಮ್ಮ ಕರ್ತವ್ಯವಾಗಿದೆ. ಬೀಜವು ಮಣ್ಣಿನೊಳಗೆ ಅಡಗಿರಬಹುದು, ಆದರೆ ದೇವರು ಇನ್ನೂ ಕಾರ್ಯನಿರತನಾಗಿದ್ದಾನೆ.

E ದೇವರ ಸುಗ್ಗಿಯನ್ನು ನಿರೀಕ್ಷಿಸಿರಿ (EXPECT GOD'S HARVEST)

1 ಕೊರಿಂಥದವರಿಗೆ 3:6ರಲ್ಲಿ ಪೌಲನು ಹೀಗೆ ಹೇಳುತ್ತಾನೆ: "ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು." ನಾವು ಬೀಜವನ್ನು ಬಿತ್ತುತ್ತೇವೆ, ನೀರುಣಿಸುತ್ತೇವೆ, ಶ್ರಮಿಸುತ್ತೇವೆ, ಪ್ರಾರ್ಥಿಸುತ್ತೇವೆ, ಆದರೆ ಅಂತಿಮವಾಗಿ ಬೆಳವಣಿಗೆಯನ್ನು ನೀಡುವವನು ದೇವರೇ.

ನಾವು ಬಿತ್ತಿದ ಪ್ರತಿಯೊಂದರ ಸಂಪೂರ್ಣ ಫಲಿತಾಂಶವನ್ನು ಯಾವಾಗಲೂ ನೋಡದೇ ಇರಬಹುದು. ಒಬ್ಬ ತಂದೆ ಅಥವಾ ತಾಯಿಯ ಪ್ರಾರ್ಥನೆಯು ವರ್ಷಗಳ ನಂತರ ಮಗುವಿನ ಜೀವನವನ್ನು ಪ್ರಭಾವಿಸಬಹುದು. ಒಬ್ಬ ಶಿಕ್ಷಕರ ಮಾತು ವಿದ್ಯಾರ್ಥಿಯ ಭವಿಷ್ಯವನ್ನು ರೂಪಿಸಬಹುದು. ಒಂದು ಸಣ್ಣ ದಯೆಯ ಕಾರ್ಯವು ಯಾರಿಗಾದರೂ ದೇವರ ಪ್ರೀತಿಯ ಮೊದಲ ಅನುಭವವಾಗಬಹುದು. ನಂಬಿಗಸ್ತಿಕೆಯಿಂದ ಮಾಡಿದ ಸೇವೆಯು ನಾವು ಎಂದಿಗೂ ಭೇಟಿಯಾಗದ ತಲೆಮಾರುಗಳನ್ನೂ ಪ್ರಭಾವಿಸಬಹುದು.

ಆದ್ದರಿಂದ, ಸುಗ್ಗಿಯು ತಡವಾಗುತ್ತಿರುವಂತೆ ಕಂಡಾಗ ನಿರುತ್ಸಾಹಗೊಳ್ಳಬೇಡಿ. ದೇವರ ಸಮಯವು ನಮ್ಮ ಸಮಯದಂತಲ್ಲ. ಬೀಜವು ಬೆಳೆಯಲು ಸಮಯ ತೆಗೆದುಕೊಳ್ಳಬಹುದು, ಆದರೆ ಜೀವವನ್ನು ನೀಡುವ ದೇವರು ನಂಬಿಗಸ್ತನಾಗಿದ್ದಾನೆ.

D ದೇವರ ನಂಬಿಗಸ್ತಿಕೆಯನ್ನು ಅವಲಂಬಿಸಿರಿ (DEPEND ON GOD'S FAITHFULNESS)

SEED ಎಂಬ ಪದದ ಕೊನೆಯ ಅಕ್ಷರವು ನಮಗೆ ಅತ್ಯಂತ ಪ್ರಮುಖವಾದ ಸತ್ಯವನ್ನು ನೆನಪಿಸುತ್ತದೆ: ನಮ್ಮ ಸುಗ್ಗಿಯು ನಮ್ಮ ಸ್ವಂತ ಶಕ್ತಿಯ ಮೇಲೆ ಅವಲಂಬಿತವಾಗಿಲ್ಲ; ಅದು ದೇವರ ನಂಬಿಗಸ್ತಿಕೆಯ ಮೇಲೆ ಅವಲಂಬಿತವಾಗಿದೆ.

ದೇವರು ಜೀವವನ್ನು ನೀಡದೆ ಇದ್ದರೆ, ಒಂದು ಬೀಜವು ತನ್ನಿಂದ ತಾನೇ ಬೆಳೆಯಲು ಸಾಧ್ಯವಿಲ್ಲ. ಅದೇ ರೀತಿ, ನಮ್ಮ ಪ್ರಯತ್ನಗಳು, ಪ್ರಾರ್ಥನೆಗಳು ಮತ್ತು ಸೇವೆಗಳು ಫಲವನ್ನು ನೀಡುವುದು ದೇವರು ನಮ್ಮ ಜೀವನದಲ್ಲಿ ಕಾರ್ಯನಿರ್ವಹಿಸುವುದರಿಂದಲೇ.

ಯೇಸು ಯೋಹಾನ 15:5ರಲ್ಲಿ ಹೀಗೆ ಹೇಳುತ್ತಾನೆ: "ನನ್ನನ್ನು ಬಿಟ್ಟು ನೀವು ಏನೂ ಮಾಡಲಾರಿರಿ." ಇದು ದೇವರನ್ನು ಅವಲಂಬಿಸುವುದು ದೌರ್ಬಲ್ಯವಲ್ಲ, ಬದಲಾಗಿ ಜ್ಞಾನವಾಗಿದೆ ಎಂಬುದನ್ನು ನಮಗೆ ನೆನಪಿಸುತ್ತದೆ.

ನಾವು ದೇವರನ್ನು ಅವಲಂಬಿಸಿದಾಗ, ನಾವು ಒಪ್ಪಿಕೊಳ್ಳುವುದು:

ಆತನು ಪ್ರತಿಯೊಂದು ಆಶೀರ್ವಾದದ ಮೂಲನು.

ಆತನೇ ಬೆಳವಣಿಗೆಯನ್ನು ಉಂಟುಮಾಡುವವನು.

ಆತನೇ ಸುಗ್ಗಿಯನ್ನು ನಿರ್ಧರಿಸುವವನು.

ಆದ್ದರಿಂದ, ನಾವು ದುರ್ಬಲರಾಗಿದ್ದರೂ ಸಹ ಧೈರ್ಯವಾಗಿರಬಹುದು, ಏಕೆಂದರೆ ನಮ್ಮ ದೌರ್ಬಲ್ಯದಲ್ಲಿ ದೇವರ ಶಕ್ತಿಯು ಪರಿಪೂರ್ಣವಾಗುತ್ತದೆ.

ಪ್ರಿಯರೇ, ನಾವು ನಂಬಿಕೆಯಲ್ಲಿ ಬಿತ್ತೋಣ, ಕಣ್ಣೀರಿನಲ್ಲಿಯೂ ಸಹಿಸಿಕೊಳ್ಳೋಣ, ದೇವರ ಸುಗ್ಗಿಯನ್ನು ನಿರೀಕ್ಷಿಸೋಣ ಮತ್ತು ಆತನ ನಂಬಿಗಸ್ತಿಕೆಯನ್ನು ಅವಲಂಬಿಸೋಣ.

ನಾವು ಫಲವನ್ನು ತಕ್ಷಣವೇ ಕಾಣದೆ ಇರಬಹುದು, ಆದರೆ ದೇವರಿಗೆ ವಿಧೇಯತೆಯಿಂದ ಬಿತ್ತಲ್ಪಟ್ಟ ಯಾವುದೇ ಬೀಜವೂ ಎಂದಿಗೂ ವ್ಯರ್ಥವಾಗುವುದಿಲ್ಲ.

ಇಂದಿನ ಕಣ್ಣೀರು ನಾಳೆಯ ಸಂತೋಷದ ಗೀತೆಯಾಗಬಹುದು. ಇಂದಿನ ತ್ಯಾಗವು ಮುಂದಿನ ತಲೆಮಾರುಗಳಿಗೆ ಆಶೀರ್ವಾದವಾಗಬಹುದು. ಇಂದಿನ ಪ್ರಾರ್ಥನೆಗಳು ದೇವರ ನಂಬಿಗಸ್ತಿಕೆಯ ಸಾಕ್ಷಿಗಳಾಗಬಹುದು.

ಆದ್ದರಿಂದ, ನಾವು ಬಿತ್ತುವುದನ್ನು ಮುಂದುವರಿಸೋಣ. ನಂಬುವುದನ್ನು ಮುಂದುವರಿಸೋಣ. ಪ್ರಾರ್ಥಿಸುವುದನ್ನು ಮುಂದುವರಿಸೋಣ. ಸೇವೆ ಮಾಡುವುದನ್ನು ಮುಂದುವರಿಸೋಣ. ವಿಶ್ವಾಸವಿಡುವುದನ್ನು ಮುಂದುವರಿಸೋಣ. ಏಕೆಂದರೆ

ಬೀಜವನ್ನು ತನ್ನ ಕೈಯಲ್ಲಿ ಹಿಡಿದಿರುವ ದೇವರೇ ಸುಗ್ಗಿಯನ್ನೂ ತನ್ನ ಕೈಯಲ್ಲಿ ಹಿಡಿದಿದ್ದಾನೆ.

ನಮ್ಮ ಜೀವನಗಳು ಮತ್ತು ನಮ್ಮ ಸಭೆಯು ನಂಬಿಕೆ, ಪ್ರೀತಿ, ನಿರೀಕ್ಷೆ, ಉದಾರತೆ ಮತ್ತು ದೇವರ ವಾಕ್ಯದ ಬೀಜಗಳು ನಿರಂತರವಾಗಿ ಬಿತ್ತಲ್ಪಡುವ ಫಲವತ್ತಾದ ಭೂಮಿಯಾಗಲಿ. ಸುಗ್ಗಿಯು ಬಂದಾಗ, ಅದರ ಎಲ್ಲಾ ಮಹಿಮೆಯೂ ದೇವರಿಗೆ ಮಾತ್ರ ಸೇರಬೇಕು ಎಂಬುದನ್ನು ನಾವು ಮರೆಯದಿರೋಣ.

"ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು." ಕೀರ್ತನೆ 126:5



ದೈವಶಾಸ್ತ್ರ ಇಂದು

ರೆವ. ಡಾ. ಆರ್. ಆನಿ ವ್ಯಾಟ್ಸನ್
ಕರ್ನಾಟಕ ಥಿಯಾಲಾಜಿಕಲ್ ಕಾಲೇಜು, ಮಂಗಳೂರು

ಪ್ರಸ್ತಾವನೆ

'ದೈವಶಾಸ್ತ್ರ ಇಂದು' (Theology Today) ಎಂಬ ಪದವು ನೋಡಲು ಬಹಳ ಸರಳವಾಗಿ ಕಂಡರೂ, ಅದು ಬಹಳ ವಿಶಾಲವಾದ ವಿಷಯವಾಗಿರುವುದರಿಂದ ಸಂಕೀರ್ಣವಾದ ಅರ್ಥವನ್ನು ಹೊಂದಿದೆ. "ದೈವಶಾಸ್ತ್ರ ಇಂದು" ಎಂಬ ಹೇಳಿಕೆಯಿಂದ ನಮ್ಮ ನಿರೀಕ್ಷೆಗಳೇನು? ನಾವು ಕೇವಲ ದೈವಶಾಸ್ತ್ರ ಎಂದರೇನು ಎಂಬುದನ್ನು ಚರ್ಚಿಸುತ್ತಿಲ್ಲ; ಬದಲಾಗಿ, ನಮ್ಮ ಇಂದಿನ ಸಂದರ್ಭದಲ್ಲಿ ದೇವರ ಮೇಲಿನ ನಮ್ಮ ನಂಬಿಕೆಯನ್ನು ಅರ್ಥಮಾಡಿಕೊಳ್ಳಲು ದೈವಶಾಸ್ತ್ರವು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಅರಿಯಲು ಪ್ರಯತ್ನಿಸುತ್ತಿದ್ದೇವೆ.

ದೈವಶಾಸ್ತ್ರವು ಎಂದಿಗೂ ನಿಂತ ನೀರಿನಂತಿರುವುದಿಲ್ಲ; ಅದು ಸದಾ ಹರಿಯುವ ನದಿಯಂತಿದ್ದು, ವಿಶ್ವಾಸಿಗಳ ಭಾಗವಹಿಸುವಿಕೆ, ಚಿಂತನೆ ಮತ್ತು ತಮ್ಮದೇ ಸಂದರ್ಭಗಳಲ್ಲಿ ಹೊಂದುವ ಅನುಭವಗಳ ಮೂಲಕ ನಿರಂತರವಾಗಿ ವಿಸ್ತರಿಸುತ್ತಾ ಬೆಳೆಯುತ್ತಿರುತ್ತದೆ. ಜಾನ್ ಮ್ಯಾಕ್ವಾರಿ (John Macquarrie) ಹೇಳುವಂತೆ, ದೈವಶಾಸ್ತ್ರವೆಂದರೆ "ಧಾರ್ಮಿಕ ನಂಬಿಕೆಯಲ್ಲಿ ಭಾಗವಹಿಸುವಿಕೆ ಮತ್ತು ಅದರ ಕುರಿತು ಚಿಂತನೆಯ ಮೂಲಕ, ಆ ನಂಬಿಕೆಯ ವಿಷಯವನ್ನು ಲಭ್ಯವಿರುವ ಅತ್ಯಂತ ಸ್ಪಷ್ಟವಾದ ಮತ್ತು ಸಮನ್ವಯಪೂರ್ಣ ಭಾಷೆಯಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸುವ ಅಧ್ಯಯನ."

ಕ್ರೈಸ್ತ ನಂಬಿಕೆಯು "ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ನಂಬಿಕೆ" (Faith seeking understanding) ಆಗಿದೆ ಎಂದು 11ನೇ ಶತಮಾನದ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಅನ್ಸೆಲ್ಮ್ (Anselm) ವಿವರಿಸಿದರು. ಆದ್ದರಿಂದ, ದೈವಶಾಸ್ತ್ರವು ತನ್ನ ತಾರ್ಕಿಕ ಆಯಾಮ ಮತ್ತು ವ್ಯವಸ್ಥಿತ ವಿಧಾನಗಳ ಮೂಲಕ ಸಭೆಯು ಏನನ್ನು ನಂಬುತ್ತದೆ ಮತ್ತು ಏಕೆ ನಂಬುತ್ತದೆ ಹಾಗೂ ವಿಶೇಷವಾಗಿ ದೇವರ ರಕ್ಷಣಾ ಕಾರ್ಯದ ಕುರಿತು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ.

ಅದೇ ಸಮಯದಲ್ಲಿ, ದೇವರ ಪ್ರಕಟನೆಗೆ ಆಧಾರವಾದ ದೇವರ ಕುರಿತು ನಡೆಯುವ ಚಿಂತನೆಯಾಗಿ ದೈವಶಾಸ್ತ್ರವು ವಿಶ್ವಾಸಿಗಳ ಆಧ್ಯಾತ್ಮಿಕ ಅನುಭವದೊಂದಿಗೆ ಆಳವಾಗಿ ಸಂಬಂಧ ಹೊಂದಿದೆ. ಇದು ದೇವರ ಅತೀತ ಮಹಿಮೆಯನ್ನು ಯೇಸು ಕ್ರಿಸ್ತನಲ್ಲಿ ಕಾಣಲು ಅವರ ಜ್ಞಾನವನ್ನು ಬೆಳಗಿಸುತ್ತದೆ ಮತ್ತು ಪೋಷಿಸುತ್ತದೆ.

ಬೈಬಲ್ ಹೀಗೆ ಹೇಳುತ್ತದೆ:

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ಯೋಹಾನ 3:16

ದೇವರು ತನ್ನ ಮಗನಾದ ಯೇಸು ಕ್ರಿಸ್ತನ ವ್ಯಕ್ತಿತ್ವ ಮತ್ತು ಕಾರ್ಯದ ಮೂಲಕ ತನ್ನನ್ನು ಪ್ರಕಟಿಸಿಕೊಂಡನು. ಕ್ರಿಸ್ತನು ಈ ಲೋಕಕ್ಕೆ ಮಾನವನಾಗಿ ಅವತರಿಸಿ, ಜೀವಿಸಿ, ಮರಣವನ್ನು ಹೊಂದಿ, ಪುನರುತ್ಥಾನಗೊಂಡು ಲೋಕದ ರಕ್ಷಣೆಯನ್ನು ಸಾಧಿಸಿದನು.

ಆದ್ದರಿಂದ, ಇಂದಿನ ದೈವಶಾಸ್ತ್ರವು ಕೇವಲ ದೇವರ ವಾಕ್ಯದ ಅಧ್ಯಯನವಲ್ಲ. ಅದು ದೈವಿಕ ಪ್ರಕಟನೆಯ ಕುರಿತು ತಾರ್ಕಿಕ ಮತ್ತು ಸಂದರ್ಭಾಧಾರಿತ ಚಿಂತನೆಯಾಗಿದೆ. ಒಂದು ದೈವಶಾಸ್ತ್ರದಿಂದ ದೇವರ ಮಹತ್ವವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಅನೇಕ ದೈವಶಾಸ್ತ್ರಗಳು ಉದ್ಭವಿಸುತ್ತವೆ. ದೇವರ ಕೃಪೆಯು ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಯಲ್ಲಿ ವಿಮೋಚನೆ, ರಕ್ಷಣೆ ಮತ್ತು ಬಿಡುಗಡೆಯಾಗಿ ಕಾರ್ಯನಿರ್ವಹಿಸುವುದರಿಂದ ಈ ವೈವಿಧ್ಯಮಯ ದೈವಶಾಸ್ತ್ರಗಳು ದೇವರ ವಾಕ್ಯವನ್ನು ವಿಭಿನ್ನ ಸಂದರ್ಭಗಳಲ್ಲಿ ಕೇಂದ್ರೀಕರಿಸುತ್ತವೆ.

ಬೆಳೆ ಹಬ್ಬದ ಮುಖ್ಯ ಪ್ರಸ್ತಾಪವೂ ಕೂಡ ("ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು") ಈ ರೀತಿಯ ದೈವಶಾಸ್ತ್ರೀಯ ಚಿಂತನೆಗೆ ಆಹ್ವಾನಿಸುತ್ತದೆ. ಇಲ್ಲಿ ನಂಬಿಕೆಯಿಂದ ಬಿತ್ತುವುದು ಎಂದರೆ ದೇವರನ್ನು ನಂಬಿ, ಜೀವನದ ಕಷ್ಟಗಳು, ಸಮಸ್ಯೆಗಳು ಮತ್ತು ಅನಿಶ್ಚಿತತೆಗಳ ನಡುವೆಯೂ ಆತನ ಮೇಲೆ ಭರವಸೆ ಇಡುವುದು. ನಂಬಿಕೆ ಎಂದರೆ ಕೇವಲ ದೇವರನ್ನು ನಂಬುತ್ತೇನೆ ಎಂದು ಹೇಳುವುದಲ್ಲ; ನಮ್ಮ ಜೀವನದಲ್ಲಿ ಆ ನಂಬಿಕೆಯನ್ನು ತೋರಿಸುವುದಾಗಿದೆ. ಈ ಬೆಳೆ ಹಬ್ಬವು ನಮಗೆ ದೇವರ ಕೃಪೆಯನ್ನು ನೆನಪಿಸುತ್ತದೆ. ನಾವು ನಂಬಿಕೆಯಿಂದ ಬದುಕಿ, ಪರಿಶ್ರಮಪಟ್ಟು, ನಿರೀಕ್ಷೆಯಿಂದ ಮುಂದೆ ಸಾಗಿದಾಗ ಮತ್ತು ನಮ್ಮ ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿದಾಗ, ಅದರ ಫಲವನ್ನು ಸಂತೋಷದಿಂದ ಅನುಭವಿಸಲು ಸಾಧ್ಯವಾಗುತ್ತದೆ. ಈ ಸಂತೋಷವು ದೇವರು ನಮ್ಮ ಜೀವನದಲ್ಲಿ ನೀಡುವ ಆಶೀರ್ವಾದ ಮತ್ತು ಕೃಪೆಯ ನೆನಪಾಗಿದೆ.

ಅಂಚಿನಲ್ಲಿರುವವರ ದೃಷ್ಟಿಕೋನದಿಂದ ಇಂದಿನ ದೈವಶಾಸ್ತ್ರ

ಸಾಂಪ್ರದಾಯಿಕವಾಗಿ ವ್ಯವಸ್ಥಿತ ದೈವಶಾಸ್ತ್ರ (Systematic Theology), ಸಿದ್ಧಾಂತಾತ್ಮಕ ದೈವಶಾಸ್ತ್ರ (Doctrinal Theology), ತಾರ್ಕಿಕ ದೈವಶಾಸ್ತ್ರ (Scholastic Theology), ಅನುಭವ ದೈವಶಾಸ್ತ್ರ (Dogmatic Theology) ಮುಂತಾದ ದೈವಶಾಸ್ತ್ರಗಳು ಸಭೆಯ ಪಿತೃಗಳು, ಪ್ರಬಲ ಸಾಮಾಜಿಕ ಗುಂಪುಗಳು ಮತ್ತು ಸಂಸ್ಥೆಗಳ ಅಧಿಕಾರಿಗಳಿಂದ ರೂಪುಗೊಂಡವು.

ಆದರೆ ಇಂದು ನಾವು ವಿಮೋಚನಾ ದೈವಶಾಸ್ತ್ರ (Liberation Theology), ಕಪ್ಪು ಜನಾಂಗದ ವಿಮೋಚನಾ ದೈವಶಾಸ್ತ್ರ (Black Liberation Theology), ದಲಿತ ದೈವಶಾಸ್ತ್ರ (Dalit Theology), ಸ್ತ್ರೀವಾದಿ ದೈವಶಾಸ್ತ್ರ (Feminist Theology), ಮಹಿಳಾ ದೈವಶಾಸ್ತ್ರ (Womanist Theology), ವಸಾಹತೋತ್ತರ ದೈವಶಾಸ್ತ್ರ (Post-colonial Theology), ಅಂಗವೈಕಲ್ಯ ದೈವಶಾಸ್ತ್ರ (Disability Theology), ಮೂಲನಿವಾಸಿ ಸಮುದಾಯಗಳ ದೈವಶಾಸ್ತ್ರ (Theology of Indigenous Communities), LGBTQ+ ದೈವಶಾಸ್ತ್ರ, ಪರಿಸರ ದೈವಶಾಸ್ತ್ರ (Eco-

environmental Theology) ಮುಂತಾದ ಅನೇಕ ದೈವಶಾಸ್ತ್ರಗಳನ್ನು ಕಾಣುತ್ತೇವೆ.

ಇವುಗಳೆಲ್ಲವೂ ಅಂಚಿಗೆ ತಳ್ಳಲ್ಪಟ್ಟ, ಶೋಷಿತ ಮತ್ತು ದಮನಿತ ಸಮುದಾಯಗಳ ಐತಿಹಾಸಿಕ ಹೋರಾಟಗಳಿಂದ ರೂಪುಗೊಂಡಿವೆ. ಈ ಹೋರಾಟಗಳು ವಸಾಹತುಶಾಹಿ, ಜಾತಿ ದಮನ, ವರ್ಣಭೇದ, ಪಿತೃಪ್ರಧಾನ ವ್ಯವಸ್ಥೆ, ಆರ್ಥಿಕ ಶೋಷಣೆ, ಸಾಂಸ್ಕೃತಿಕ ಮೌನಗೊಳಿಸುವಿಕೆ, ಪ್ರಕೃತಿಯ ಅವನತಿ ಮತ್ತು ನಾಶ ಮುಂತಾದ ಅನುಭವಗಳಿಂದ ಗುರುತಿಸಲ್ಪಟ್ಟಿವೆ.

ಇಂದು ನಾವು ಕೇವಲ ಆಧುನಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯ (AI) ಯುಗದಲ್ಲಷ್ಟೇ ಬದುಕುತ್ತಿಲ್ಲ; ಜೀವನಕ್ಕೆ ಅಪಾಯಕಾರಿಯಾದ ಯುದ್ಧಗಳು ಮತ್ತು ಮಾನವ ವಿನಾಶದ ಸಾಧ್ಯತೆಗಳಿರುವ ಯುಗದಲ್ಲಿಯೂ ಬದುಕುತ್ತಿದ್ದೇವೆ.

ಜೀವನವನ್ನು ಬೆಂಬಲಿಸಲು ಮತ್ತು ಅಭಿವೃದ್ಧಿಗಾಗಿ ಬಳಸಬೇಕೆಂದು ಭಾವಿಸಲಾದ ವಿಜ್ಞಾನ ಮತ್ತು ತಂತ್ರಜ್ಞಾನಗಳು, ಮಾನವನ ಸ್ವಾರ್ಥ, ಅಹಂಕಾರ, ಗರ್ವ, ನಿಯಂತ್ರಿಸುವ ಮನೋಭಾವ, ಇತರರ ಮೇಲೆ ಅಧಿಕಾರ ಸಾಧಿಸುವ ಮನೋಭಾವ ಮತ್ತು ಮಿತಿಯಿಲ್ಲದ ಸಂಗ್ರಹಣೆಯ ಕಾರಣದಿಂದ ಸಂಪೂರ್ಣ ವಿನಾಶಕ್ಕೆ ಕಾರಣವಾಗುತ್ತಿವೆ.

ಭಾರತೀಯ ಸಂದರ್ಭದಲ್ಲಿ ಇಂದಿನ ದೈವಶಾಸ್ತ್ರ

ನಮ್ಮ ಭಾರತೀಯ ಸಂದರ್ಭದಲ್ಲಿ ಸಭೆಯು ಧಾರ್ಮಿಕ ಬಹುತ್ವ, ಜಾತಿ–ವರ್ಗ–ಲಿಂಗ ಮತ್ತು ಆರ್ಥಿಕ ಅಸಮಾನತೆ, ರಾಜಕೀಯ ಧ್ರುವೀಕರಣ, ಜಾತ್ಯತೀತ ಜಾಗತೀಕರಣ, ತಂತ್ರಜ್ಞಾನ ಪರಿವರ್ತನೆ ಮತ್ತು ಕೃತಕ ಬುದ್ಧಿಮತ್ತೆಯ ಯುಗದ ನಡುವೆ ಅಸ್ತಿತ್ವದಲ್ಲಿದೆ.

ಆದ್ದರಿಂದ ನಮ್ಮ ದೈವಶಾಸ್ತ್ರವು ಕೇವಲ ಪಾಶ್ಚಾತ್ಯ ಮಾದರಿಗಳನ್ನು ಅಥವಾ ಸಾಂಪ್ರದಾಯಿಕ ಶಾಸ್ತ್ರೀಯ ದೈವಶಾಸ್ತ್ರಗಳನ್ನು ಅನುಕರಿಸಲು ಸಾಧ್ಯವಿಲ್ಲ.

ಒಂದು ಮಾತ್ರ ಸಾರ್ವತ್ರಿಕ ದೈವಶಾಸ್ತ್ರವಿಲ್ಲ.

ನಮ್ಮ ದೈವಶಾಸ್ತ್ರವು ನಮ್ಮ ದೇಶದ ತತ್ತ್ವಚಿಂತನೆಗಳು, ಅಂತರ್‌ಧರ್ಮೀಯ ಸಂವಾದ, ಮೂಲನಿವಾಸಿ ಸಂಸ್ಕೃತಿಗಳು, ಲಿಂಗ ಮತ್ತು ಸಾಮಾಜಿಕ–ಆರ್ಥಿಕ ನ್ಯಾಯ, ಪರಿಸರ ಕಾಳಜಿ, ಸಾರ್ವಜನಿಕ ಅರಿವು ಮತ್ತು ನಮ್ಮ ಜೀವನದ ನೈಜ ಸಂದರ್ಭಗಳೊಂದಿಗೆ ತೊಡಗಿಸಿಕೊಳ್ಳಬೇಕು.

ಇದು ಜನರ ಜೀವನ ಮತ್ತು ಅವರ ಹೋರಾಟಗಳಲ್ಲಿ ಭಾಗವಹಿಸುವಿಕೆಯಾಗಿದೆ. ಏಕೆಂದರೆ ದೇವರ ವಾಕ್ಯವಾದ ಪವಿತ್ರ ಶಾಸ್ತ್ರವು ಸಮುದಾಯದ ಜೀವಂತ ವಾಸ್ತವಿಕತೆಗಳು ಮತ್ತು ಅನುಭವಗಳನ್ನು ಎದುರಿಸುತ್ತದೆ.

ಆದ್ದರಿಂದ, ದೈವಶಾಸ್ತ್ರದ ಮೂಲಗಳನ್ನು ಅಂದರೆ ಶಾಸ್ತ್ರ, ಪರಂಪರೆ ಮತ್ತು ಅನುಭವ ವ್ಯಾಖ್ಯಾನಿಸುವ ವಿಧಾನವಾದ ವ್ಯಾಖ್ಯಾನ ಶಾಸ್ತ್ರ (Hermeneutics) ಕೂಡ ಸಂದರ್ಭಾಧಾರಿತವಾಗಿರಬೇಕು.

ಈ ಅರ್ಥದಲ್ಲಿ, "ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು" ಎಂಬುದನ್ನು ಸಮಾಜದ ಅಂಚಿನಲ್ಲಿರುವವರ (ಮಾರ್ಜಿನಲೈಸ್ಡ್ ಜನರ) ದೃಷ್ಟಿಕೋನದಿಂದಲೂ ಅರ್ಥಮಾಡಿಕೊಳ್ಳಬಹುದು. ಬಿತ್ತುವಿಕೆಯು ಹೋರಾಟ, ತ್ಯಾಗ, ಕಣ್ಣೀರು ಮತ್ತು

ನಿರಂತರ ಪ್ರಯತ್ನವನ್ನು ಒಳಗೊಂಡಿರುತ್ತದೆ. ಆದರೆ ಕೊಯ್ಲಿನ ಸಂತೋಷವು ನಿರೀಕ್ಷೆ, ಪುನಃಸ್ಥಾಪನೆ, ನ್ಯಾಯ, ಗೌರವ ಮತ್ತು ಸಮೃದ್ಧವಾದ ಜೀವನದ ಕಡೆಗೆ ಸೂಚಿಸುತ್ತದೆ. ಆದ್ದರಿಂದ, ಇಂದಿನ ದೈವಶಾಸ್ತ್ರವು, ಜನರ ಮತ್ತು ಸೃಷ್ಟಿಯ ಜೀವನದಲ್ಲಿ ಇಂತಹ ಕೊಯ್ಲನ್ನು ಉಂಟುಮಾಡುವ ದೇವರ ಕಾರ್ಯದಲ್ಲಿ ನಮ್ಮ ನಂಬಿಕೆಯು ಹೇಗೆ ಪಾಲ್ಗೊಳ್ಳಬಹುದು ಎಂಬುದನ್ನು ಪ್ರಶ್ನಿಸುತ್ತದೆ.

ಈ ವ್ಯಾಖ್ಯಾನವು ಅಂಚಿಗೆ ತಳ್ಳಲ್ಪಟ್ಟವರ ದೃಷ್ಟಿಕೋನದಿಂದ ನಡೆಯಬೇಕು ಅಂದರೆ ಬಡವರು, ಮಹಿಳೆಯರು, ವಸಾಹತುಶಾಹಿಯಿಂದ ದಮನಿಸಲ್ಪಟ್ಟ ಜನರು, ವರ್ಣಭೇದಕ್ಕೆ ಒಳಗಾದ ಅಲ್ಪಸಂಖ್ಯಾತರು, ಮೂಲನಿವಾಸಿ ಸಮುದಾಯಗಳು, LGBTIQ+ ಜನರು ಹಾಗೂ ನಮ್ಮ ಭೂಮಿ ಮತ್ತು ಪರಿಸರವನ್ನು ಒಳಗೊಂಡಿರಬೇಕು.

ಭೂಮಿಯೇ ಹೊಸ ಬಡವಿ ಮತ್ತು ಅಂಚಿನಲ್ಲಿರುವವಳು

ಇಂದು ಭೂಮಿಯನ್ನು ಹೊಸ ಬಡವಳಾಗಿ ಮತ್ತು ಅಂಚಿಗೆ ತಳ್ಳಲ್ಪಟ್ಟವಳಾಗಿ ಪರಿಗಣಿಸಲಾಗುತ್ತಿದೆ. ಆಧುನಿಕ ಅಭಿವೃದ್ಧಿಯ ಮಾದರಿಗಳು, ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಭೂಮಿಯ ಅಸ್ತಿತ್ವವೇ ಅಪಾಯಕ್ಕೆ ಒಳಗಾಗಿದೆ.

ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಜೀವನಶೈಲಿಗಳು ಮಾನವ ಸಮುದಾಯದ ಜೀವನಕ್ಕೆ ಮಾತ್ರವಲ್ಲದೆ, ಭೂಮಿಯ ಜೀವಸಮುದಾಯಕ್ಕೂ (earth community) ಅಪಾರ ಹಾನಿಯನ್ನುಂಟುಮಾಡಿವೆ. ಪ್ರಕೃತಿಯ ಜೀವಸಮತೋಲನವನ್ನು ನಾಶಮಾಡುವ ಮೂಲಕ ಭೂಮಿಯ ಪರಿಸರ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಬೀರಿವೆ.

ಆದ್ದರಿಂದ, ಈ ಅಂಚಿಗೆ ತಳ್ಳಲ್ಪಟ್ಟ ಮತ್ತು ದಮನಿತ ಜನರ ಅನುಭವಗಳ ಮೂಲಕ ನಾವು ದೈವಶಾಸ್ತ್ರದ ಮೂಲಗಳನ್ನು ಮರುಓದಬೇಕು ಮತ್ತು ಮರುವ್ಯಾಖ್ಯಾನಿಸಬೇಕು. ಇದರಿಂದ ತಟಸ್ಥ ಮತ್ತು ಸಾರ್ವತ್ರಿಕವೆಂದು ಹೇಳಿಕೊಳ್ಳುವ ಪ್ರಬಲ ಪಿತೃಪ್ರಧಾನ ವ್ಯಾಖ್ಯಾನಗಳಿಗೆ ಸವಾಲು ಹಾಕಬಹುದು.

ದಮನದ ಅನುಭವವು ದೇವರ ಪ್ರಕಟಣೆಯ ಸ್ಥಳವಾಗುತ್ತದೆ; ಸಾಕ್ಷಿಯು ದೈವಶಾಸ್ತ್ರದ ವಿಧಾನವಾಗುತ್ತದೆ; ಮತ್ತು ಸಂಕಟವು ದೇವರ ಪ್ರಕಟಣೆಯ ಸ್ಥಳವಾಗುತ್ತದೆ.

ಇಂದಿನ ದೈವಶಾಸ್ತ್ರವು ಅಂಚಿಗೆ ತಳ್ಳುವಿಕೆ ಎಂಬುದು ಜಾತಿ, ವರ್ಣ, ವರ್ಗ, ಲಿಂಗ, ಅಂಗವೈಕಲ್ಯ ಮತ್ತು ಲೈಂಗಿಕತೆಯಂತಹ ಅನೇಕ ಆಯಾಮಗಳಲ್ಲಿ ಒಂದೇ ಸಮಯದಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಗುರುತಿಸುತ್ತದೆ.

ಆದ್ದರಿಂದ, ದಮನವನ್ನು ಸಮರ್ಥಿಸುವ ಪವಿತ್ರ ಗ್ರಂಥಗಳ ವ್ಯಾಖ್ಯಾನಗಳು ಮತ್ತು ಪರಂಪರೆಗಳನ್ನು ಅದು ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತದೆ. ಅದೇ ಸಮಯದಲ್ಲಿ, ಅವುಗಳೊಳಗೆ ಅಡಗಿರುವ ವಿಮೋಚನೆ ಮತ್ತು ಮುಕ್ತಿಯ ಸಂದೇಶಗಳನ್ನು ಪುನಃ ಕಂಡುಕೊಳ್ಳುತ್ತದೆ.

ಇಂದಿನ ದೈವಶಾಸ್ತ್ರವು ಶಾಸ್ತ್ರವನ್ನು ವಿಮೋಚನೆಯ ಗ್ರಂಥವಾಗಿ ಪುನಃ ಪಡೆದುಕೊಳ್ಳುತ್ತದೆ; ಪರಂಪರೆಯನ್ನು ಐತಿಹಾಸಿಕವಾಗಿ ರೂಪುಗೊಂಡದ್ದೆಂದು ಮರುಪರಿಶೀಲಿಸುತ್ತದೆ; ಜೀವಂತ ಅನುಭವವನ್ನು ದೈವಶಾಸ್ತ್ರದ ಮಾನ್ಯವಾದ ಮೂಲವೆಂದು ಎತ್ತಿಹಿಡಿಯುತ್ತದೆ; ಮತ್ತು ನ್ಯಾಯ ಹಾಗೂ ಘನತೆಯನ್ನು ಸೇವಿಸಲು ಕರೆ ನೀಡುತ್ತದೆ.

ಹೀಗಾಗಿ, ಇಂದಿನ ದೈವಶಾಸ್ತ್ರವು ಕೇವಲ ಶಾಸ್ತ್ರದ ವಿವರಣೆಯಲ್ಲ; ಅದು ವ್ಯಾಖ್ಯಾನಾತ್ಮಕ ಪ್ರತಿರೋಧ (interpretive resistance)ವಾಗಿದೆ. ಇದರಿಂದ ದೈವಶಾಸ್ತ್ರವು ಹೆಚ್ಚು ನೈತಿಕ, ಒಳಗೊಳ್ಳುವ ಮತ್ತು ಪರಿವರ್ತನಾತ್ಮಕ ಅಧ್ಯಯನವಾಗುತ್ತದೆ.

ಸಮಾಪನ

ಇಂದು ವಿವಿಧ ದೈವಶಾಸ್ತ್ರಗಳು "ಬಡವರ ಪರವಾದ ವಿಶೇಷ ಆದ್ಯತೆ" (Preferential Option for the Poor) ಎಂಬ ದೃಷ್ಟಿಕೋನದಿಂದ ರೂಪುಗೊಳ್ಳುತ್ತಿವೆ. ಈ ಕಲ್ಪನೆಯು ವಿಶೇಷವಾಗಿ ವಿಮೋಚನಾ ದೈವಶಾಸ್ತ್ರದೊಂದಿಗೆ ಸಂಬಂಧಿಸಿದೆ.

ಬೇರೆ ಮಾತಿನಲ್ಲಿ ಹೇಳುವುದಾದರೆ, ಅಂಚಿಗೆ ತಳ್ಳಲ್ಪಟ್ಟ ಜನರ ಜೀವಂತ ವಾಸ್ತವಿಕತೆಗಳ ಮೂಲಕ ದೈವಶಾಸ್ತ್ರದ ಮೂಲಗಳನ್ನು ಮರುಕಲ್ಪಿಸುವುದು, ಮರುಓದುವುದು ಮತ್ತು ಮರುವ್ಯಾಖ್ಯಾನಿಸುವುದು ಇಂದಿನ ದೈವಶಾಸ್ತ್ರದ ಪ್ರಮುಖ ಲಕ್ಷಣವಾಗಿದೆ.

ಇದು ನ್ಯಾಯ ಮತ್ತು ದಮನಿತ ಜನರೊಂದಿಗೆ ಐಕ್ಯತೆಯನ್ನು ಪುನಃ ದೃಢಪಡಿಸುತ್ತದೆ. ಅದೇ ಸಮಯದಲ್ಲಿ, ವಿಮೋಚನ ಕಾಂಡ (Exodus), ಪ್ರವಾದಿಗಳ ಸಂದೇಶ ಮತ್ತು ದಮನಿತ ಜನರೊಂದಿಗೆ ಯೇಸುವಿನ ಐಕ್ಯತೆಯನ್ನು ಒತ್ತಿಹೇಳುತ್ತದೆ.

ಇದು ದೇವರನ್ನು ಆರಾಧಿಸುವ ಸಮುದಾಯಕ್ಕೆ ಸಾಮಾಜಿಕ ಹೊಣೆಗಾರಿಕೆ, ಸೃಷ್ಟಿಯ ಸಂರಕ್ಷಣೆ, ನ್ಯಾಯ ಮತ್ತು ಕರುಣೆಯ ಸೇವೆಗಾಗಿ ಕರೆ ನೀಡುತ್ತದೆ.

ಈ ಸಂದರ್ಭದಲ್ಲಿ, ನಮ್ಮ ಬೆಳೆಹಬ್ಬದ ವಿಷಯವಾದ "ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು" (ಕೀರ್ತನೆ 126:5) ಎಂಬುದು ಇನ್ನಷ್ಟು ಆಳವಾದ ದೈವಶಾಸ್ತ್ರೀಯ ಅರ್ಥವನ್ನು ನೀಡುತ್ತದೆ. ಕೀರ್ತನೆಯಲ್ಲಿ ಕಣ್ಣೀರಿನಿಂದ ಬಿತ್ತುವವರನ್ನು ಸಂತೋಷದ ಗೀತೆಗಳೊಂದಿಗೆ ಕೊಯ್ಯುವವರಾಗಿ ಚಿತ್ರಿಸುತ್ತದೆ. ಕಷ್ಟಕರವಾದ ಪರಿಸ್ಥಿತಿಗಳಲ್ಲಿಯೂ ನಂಬಿಕೆಯಿಂದ ಮಾಡುವ ಬಿತ್ತನೆಯು ಮುಂದುವರೆಯುತ್ತದೆ ಎಂಬುದನ್ನು ಇದು ನಮಗೆ ನೆನಪಿಸುತ್ತದೆ. ಆದರೆ ದೇವರು ತನ್ನ ಸಮಯದಲ್ಲಿ ನಮಗೆ ನಿರೀಕ್ಷೆಯನ್ನೂ ಫಲವತ್ತತೆಯನ್ನೂ ನೀಡುತ್ತಾನೆ.

ಆದ್ದರಿಂದ, ನಮ್ಮ ಕ್ರೈಸ್ತ ಕರೆಯು ನಂಬಿಕೆ, ನ್ಯಾಯ, ಪ್ರೀತಿ, ಶಾಂತಿ, ಕರುಣೆ ಮತ್ತು ಜವಾಬ್ದಾರಿಯುತ ಸೃಷ್ಟಿ ಸಂರಕ್ಷಣೆಯ ಬೀಜಗಳನ್ನು ಬಿತ್ತುವುದಾಗಿದೆ. ಕೊಯ್ಲನ್ನು ದೇವರು ತನ್ನ ಸಮಯದಲ್ಲಿ ನೀಡುತ್ತಾನೆ ಎಂಬ ನಂಬಿಕೆಯಿಂದ ನಾವು ಈ ಕಾರ್ಯವನ್ನು ಮುಂದುವರಿಸಬೇಕು.

ಉದಾಹರಣೆಗೆ, ನಾವು ಸುಗ್ಗಿ ಹಬ್ಬವನ್ನು (Harvest Festival) ಆಚರಿಸುವುದನ್ನು ಪರಿಗಣಿಸೋಣ. ಇಂದಿನ ದೈವಶಾಸ್ತ್ರವು ನಮ್ಮನ್ನು ಕೇಳುತ್ತದೆ: ಇದು ಕೇವಲ ಕೃತಜ್ಞತಾ ಆರಾಧನೆ, ನಂತರ ಹರಾಜು, ಆಟಗಳು ಮತ್ತು ಸಹಭೋಜನ ನಡೆಸುವ ಒಂದು ಕಾರ್ಯಕ್ರಮವೇ?

ಅಥವಾ ಇದು ದೇವರ ಸೃಷ್ಟಿ, ಪ್ರಕೃತಿ ಮತ್ತು ಭೂಮಿಯ ಕುರಿತು ಮಾನವನ ಜವಾಬ್ದಾರಿಗಳನ್ನು ದೈವಶಾಸ್ತ್ರೀಯವಾಗಿ ಚಿಂತಿಸಲು ಮತ್ತು ನಾವು ಬದುಕುತ್ತಿರುವ ಹಾಗೂ ನಮ್ಮ ಅಸ್ತಿತ್ವಕ್ಕೆ ಅವಲಂಬಿಸಿರುವ ಭೂಮಿ ಮತ್ತು ಪರಿಸರದ ಜವಾಬ್ದಾರಿಯುತ ಸಂರಕ್ಷಕರಾಗಿ ನಮ್ಮನ್ನು ಪರಿವರ್ತಿಸಿಕೊಳ್ಳಲು ದೊರೆಯುವ ಅವಕಾಶವೇ?

ಭೂಮಿ ಮತ್ತು ಅದರಲ್ಲಿರುವ ಎಲ್ಲವೂ ಪ್ರಾಣಿಗಳು ಮತ್ತು ಉಳಿದ ಪ್ರಕೃತಿಯನ್ನು ಒಳಗೊಂಡಂತೆ ಎಲ್ಲಾ ಜೀವಿಗಳಿಗೆ ದೇವರು ನೀಡಿರುವ ಕೊಡುಗೆಯಾಗಿದೆ.

ಆದರೆ, ದೇವರ ಸ್ವರೂಪ ಮತ್ತು ಹೋಲಿಕೆಯಲ್ಲಿ ಸೃಷ್ಟಿಸಲ್ಪಟ್ಟ ಬುದ್ಧಿವಂತ ಮಾನವರು, "ನೀವು ಫಲಭರಿತರಾಗಿ ಹೆಚ್ಚಿರಿ, ಭೂಮಿಯನ್ನು ತುಂಬಿರಿ ಮತ್ತು ಅದನ್ನು ಸ್ವಾಧೀನಪಡಿಸಿಕೊಳ್ಳಿರಿ" (ಆದಿಕಾಂಡ 1:28) ಎಂಬ ವಾಕ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ.

ಇದನ್ನು "ಭೂಮಿಯ ಮೇಲೆ ಪ್ರಭುತ್ವ ಸಾಧಿಸುವುದು" ಎಂದು ಅರ್ಥಮಾಡಿಕೊಳ್ಳುವ ಬದಲು, ಭೂಮಿಯ ಪಾಲಕರು ಮತ್ತು ಸಂರಕ್ಷಕರು ಎಂಬ ಜವಾಬ್ದಾರಿಯಾಗಿ ಅರ್ಥಮಾಡಿಕೊಳ್ಳಬೇಕು.

ಆದರೆ ಮಾನವರು ಭೂಮಿ ಮತ್ತು ಅದರ ಸಂಪನ್ಮೂಲಗಳ ಮೇಲೆ ಪ್ರಭುತ್ವ ಸಾಧಿಸಿ, ಅವುಗಳನ್ನು ನಾಶಮಾಡುವವರಾಗಿದ್ದಾರೆ. ಆಧುನಿಕ ವಿಜ್ಞಾನ, ಕೃಷಿ ಮತ್ತು ಕೈಗಾರಿಕಾ ತಂತ್ರಜ್ಞಾನಗಳ ಅತಿಯಾದ ಮತ್ತು ಅವಿವೇಕದ ಬಳಕೆಯಿಂದ ನಮ್ಮ ಏಕೈಕ ವಾಸಸ್ಥಳವಾದ ಭೂಮಿಯ ಪರಿಸರ ವ್ಯವಸ್ಥೆಯು ವೇಗವಾಗಿ ಮತ್ತು ಕೆಲವೊಮ್ಮೆ ಹಿಂತಿರುಗಿಸಲಾಗದ ರೀತಿಯಲ್ಲಿ ಹಾನಿಗೊಳಗಾಗುತ್ತಿದೆ.

ಪ್ರಸ್ತುತ ಪರಿಸರ ಬಿಕ್ಕಟ್ಟು ತಕ್ಷಣದ ನೈತಿಕ ಜವಾಬ್ದಾರಿ ಮತ್ತು ಕ್ರಿಯೆಯನ್ನು ನಮ್ಮಿಂದ ಬೇಡುತ್ತದೆ.

ದೇವರು ಈ ವಿಶ್ವದ ಮತ್ತು ಅದರಲ್ಲಿರುವ ಪ್ರತಿಯೊಂದರ ಸೃಷ್ಟಿಕರ್ತನೆಂದು ನಾವು ನಂಬುವುದಾದರೆ, ಸೃಷ್ಟಿಯಲ್ಲಿ ನಮ್ಮ ಸ್ಥಾನವನ್ನು ನಾವು ಅರ್ಥಮಾಡಿಕೊಳ್ಳಬೇಕು. ದೇವರ ಮಾಲೀಕತ್ವದಲ್ಲಿರುವ ಆತನ "Oikos" ಅಂದರೆ ದೇವರ ಮನೆಯಲ್ಲಿ, ನಂಬಿಕೆ ಮತ್ತು ಸೇವಾಭಾವದಿಂದ ನಾವು ಬದುಕಬೇಕು.

ಹೀಗಾಗಿ, ದೇವರ ಜ್ಞಾನವು ಕೇವಲ ಪುಸ್ತಕಗಳ ಮೂಲಕವಲ್ಲ; ಅದು ಸಂಬಂಧಗಳು, ಕಾಳಜಿ, ಬದುಕುಳಿಯುವ ಹೋರಾಟ ಮತ್ತು ಪ್ರತಿರೋಧದ ಮೂಲಕವೂ ನಮಗೆ ದೊರೆಯುತ್ತದೆ.

ದೈವಶಾಸ್ತ್ರವು ಸಂಬಂಧಾತ್ಮಕ, ವಿಮೋಚನಾತ್ಮಕ ಮತ್ತು ಸಮಾಜದ ಅತಿ ದುರ್ಬಲರ ಕಡೆಗೆ ಜವಾಬ್ದಾರಿಯುತವಾಗಿರಬೇಕು.

ದೈವಶಾಸ್ತ್ರವು ಹೋರಾಟ ಮತ್ತು ನಿರೀಕ್ಷೆಯಲ್ಲಿ ಬೇರೂರಿರುವ, ನಿರಂತರವಾಗಿ ನಡೆಯುವ ಸಾಮೂಹಿಕ ವಿವೇಚನೆಯ ಕಾರ್ಯವಾಗಿದೆ.

ಅದು ಭಾಗವಹಿಸುವಿಕೆಯ, ಕ್ರಿಯೆ ಮತ್ತು ಅನುಭವದ ಆಧಾರದ (praxis-oriented) ದೈವಶಾಸ್ತ್ರವಾಗಿರಬೇಕು; ಕೇವಲ ಸಿದ್ಧಾಂತಾತ್ಮಕ, ದೂರವಾದ, ಅಮೂರ್ತ ಮತ್ತು ಶ್ರೇಣೀಕೃತ ಚಿಂತನೆಯಾಗಿರಬಾರದು.

ಹೀಗಾಗಿ, ದೈವಶಾಸ್ತ್ರವು ಕ್ರಿಯೆ ಚಿಂತನೆ (Action Reflection) ಆಧಾರಿತವಾಗಿದೆ.

ಅಂತಿಮವಾಗಿ, ದೈವಶಾಸ್ತ್ರವು ಕೇವಲ ಮಾಹಿತಿಯನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಾಗಿಸುವುದಲ್ಲ. ಅದು

ಶಿಷ್ಯತ್ವಕ್ಕೆ, ಅಂದರೆ ದೇವರ ಏಕೈಕ ಪುತ್ರನಾದ ಯೇಸು ಕ್ರಿಸ್ತನನ್ನು ಅನುಸರಿಸಲು ನೀಡುವ ಕರೆಯಾಗಿದೆ.

ಯೇಸು ಕ್ರಿಸ್ತನು ಈ ಲೋಕಕ್ಕೆ ಅವತರಿಸಿದ ಮಹಾನ್ ಮತ್ತು ಮೂಲಭೂತ ಪರಿವರ್ತನೆಯ ಸುಧಾರಕನಾಗಿದ್ದು, "ದೇವರ ರಾಜ್ಯ" (Kingdom of God)ವನ್ನು ಸ್ಥಾಪಿಸಲು ಬಂದನು.

ದೇವರ ರಾಜ್ಯದಲ್ಲಿ ಮಾನವಕುಲವು ಗಡಿಗಳು, ವರ್ಣ, ಲಿಂಗ, ವರ್ಗ, ಜಾತಿ ಮತ್ತು ಧರ್ಮಗಳ ಗಡಿಗಳನ್ನು ಮೀರಿ, ದೇವರ ಒಂದೇ ಕುಟುಂಬವಾಗಿ ಆಳವಾಗಿ ಪರಸ್ಪರ ಸಂಬಂಧ ಹೊಂದಿರುತ್ತದೆ; ಅಲ್ಲಿ ನ್ಯಾಯ ಮತ್ತು ಶಾಂತಿ ಆಳ್ವಿಕೆ ನಡೆಸುತ್ತವೆ.

ಆದ್ದರಿಂದ, ದೇವರ ವಿಶ್ವಾಸಿಗಳ ಸಮುದಾಯವಾಗಿ, ಈ ಲೋಕದಲ್ಲಿ ದೇವರ ನಿಯೋಗದಲ್ಲಿ ಭಾಗವಹಿಸುವುದು ನಮ್ಮ ಜವಾಬ್ದಾರಿಯಾಗಿದೆ.

ನಾವು ಬೆಳೆ ಹಬ್ಬವನ್ನು ಆಚರಿಸುವಾಗ, ನಾವು ನಂಬಿಕೆಯಿಂದ ಬಿತ್ತುವುದಕ್ಕಾಗಿ ಕರೆಯಲ್ಪಟ್ಟಿದ್ದೇವೆ ಎಂದು ನೆನಪಿಸಿಕೊಳ್ಳೋಣ. ಪ್ರೀತಿ, ನ್ಯಾಯ, ಸೃಷ್ಟಿಯ ಜವಾಬ್ದಾರಿಯುತ ಸಂರಕ್ಷಣೆ, ಕರುಣೆ ಮತ್ತು ನಿರೀಕ್ಷೆಯ ಮೂಲಕ ವ್ಯಕ್ತವಾಗುವ ನಂಬಿಕೆಯೇ ಈ ಬಿತ್ತನೆಯಾಗಿದೆ. ಸುಗ್ಗಿಯು ಸಂತೋಷವನ್ನು ತರುವಂತೆ ದೇವರು ಫಲವನ್ನು ನೀಡುತ್ತಾನೆ ಎಂಬ ವಿಶ್ವಾಸದಿಂದ ನಾವು ಬಿತ್ತಬೇಕು.

ಕೀರ್ತನೆ 126:5 ನಮಗೆ ನೆನಪಿಸುವುದೇನೆಂದರೆ, ನಮ್ಮ ಬಿತ್ತನೆಯು ಕಣ್ಣೀರಿನಿಂದ ಕೂಡಿದ್ದರೂ, ದೇವರು ನಮ್ಮ ನಂಬಿಗಸ್ತ ಪರಿಶ್ರಮವನ್ನು ಸಂತೋಷದ ಸುಗ್ಗಿಯಾಗಿ ಪರಿವರ್ತಿಸಬಲ್ಲನು. ದೈವಶಾಸ್ತ್ರ ಇಂದು (Theology Today) ಎಂಬುವುದು ಈ ನಂಬಿಕೆಯನ್ನು ಕೇವಲ ಅರ್ಥಮಾಡಿಕೊಳ್ಳಲು ಮಾತ್ರವಲ್ಲ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು, ನಮ್ಮ ಬದುಕಿನಲ್ಲಿ ವ್ಯಕ್ತಪಡಿಸಲು ಮತ್ತು ಈ ಲೋಕವನ್ನು ಸಬಲೀಕರಿಸುವ ದೇವರ ಕಾರ್ಯದಲ್ಲಿ ಪಾಲ್ಗೊಳ್ಳಲು ನಮ್ಮನ್ನು ಕರೆಯುತ್ತದೆ.



ಆಧ್ಯಾತ್ಮಿಕತೆ ಇಂದು

ರೆವ. ಡಾ. ಸಂದೀಪ್ ಥಿಯೋಫಿಲ್
ಅಸೋಸಿಯೇಟ್ ಪ್ರೊಫೆಸರ್, ಕೆಟಿಸಿ, ಮಂಗಳೂರು

ವೇದಿಕೆಯಿಂದ ಪ್ರಾಯೋಗಿಕ ಜೀವನದ ಕಡೆಗೆ

ಇಂದು ಆಧ್ಯಾತ್ಮಿಕತೆ ಎಂದರೆ ಏನು? ಪ್ರತಿಯೊಂದು ಪೀಳಿಗೆಯೂ ಒಂದು ನಿರ್ದಿಷ್ಟ ಐತಿಹಾಸಿಕ ಸಂದರ್ಭದಲ್ಲಿ ಜೀವಿಸುತ್ತದೆ. ಕ್ರೈಸ್ತ ಆಧ್ಯಾತ್ಮಿಕತೆಯೂ ತನ್ನ ಕಾಲದ ಪ್ರಶ್ನೆಗಳು, ಹೋರಾಟಗಳು, ನಿರೀಕ್ಷೆಗಳು ಮತ್ತು ಸಾಧ್ಯತೆಗಳಿಂದ ರೂಪುಗೊಳ್ಳುತ್ತದೆ. ನಮ್ಮ "ಇಂದು" ಕ್ಷಿಪ್ರಗತಿಯ ತಾಂತ್ರಿಕ ಬದಲಾವಣೆ, ಡಿಜಿಟಲ್ ಸಂವಹನ, ಕೃತಕ ಬುದ್ಧಿಮತ್ತೆ, ಜಾಗತೀಕರಣ, ವಲಸೆ, ಪರಿಸರದ ಬಿಕ್ಕಟ್ಟುಗಳು, ಆರ್ಥಿಕ ಅಸಮಾನತೆಗಳು ಹಾಗೂ ಹೆಚ್ಚುತ್ತಿರುವ ಸಾಮಾಜಿಕ ಮತ್ತು ರಾಜಕೀಯ ವಿಭಜನೆಗಳಿಂದ ಗುರುತಿಸಲ್ಪಡುತ್ತದೆ. ಇವುಗಳು ನಮ್ಮ ಹೊರಗಿನ ಸಂಗತಿಗಳು ಮಾತ್ರವಲ್ಲ; ನಾವು ಹೇಗೆ ಯೋಚಿಸುತ್ತೇವೆ, ಪರಸ್ಪರ ಹೇಗೆ ಸಂಬಂಧ ಹೊಂದುತ್ತೇವೆ, ನಮ್ಮ ಗುರುತನ್ನು ಹೇಗೆ ರೂಪಿಸಿಕೊಳ್ಳುತ್ತೇವೆ ಮತ್ತು ಜೀವನ ಹಾಗೂ ನಂಬಿಕೆಯನ್ನು ಹೇಗೆ ಅರ್ಥಮಾಡಿಕೊಳ್ಳುತ್ತೇವೆ ಎಂಬುದನ್ನೂ ಇವು ರೂಪಿಸುತ್ತವೆ.

"ವೇದಿಕೆ" ಎಂಬ ಪದವು ಈ ಬದಲಾಗುತ್ತಿರುವ ಸಂದರ್ಭವನ್ನು ವಿವರಿಸಲು ಸಹಾಯ ಮಾಡುತ್ತದೆ. ವೇದಿಕೆ ಎಂದರೆ ನಾವು ಜಗತ್ತನ್ನು ಎದುರಿಸುವ ಮತ್ತು ಅದರೊಂದಿಗೆ ತೊಡಗಿಸಿಕೊಳ್ಳುವ ಡಿಜಿಟಲ್ ಸ್ಥಳ. ಭಾರತದಲ್ಲಿನ ಅನೇಕ ಯುವಜನರಿಗೆ Instagram, YouTube, WhatsApp, Snapchat ಮತ್ತು Telegram ಮುಂತಾದವು ಸಂವಹನ, ಕಲಿಕೆ, ಸಂಬಂಧಗಳು, ಸ್ವ-ಅಭಿವ್ಯಕ್ತಿ ಹಾಗೂ ವಿವಿಧ ಸಂಸ್ಕೃತಿಗಳು ಮತ್ತು ನಂಬಿಕೆಗಳೊಂದಿಗೆ ತೊಡಗಿಸಿಕೊಳ್ಳುವ ದೈನಂದಿನ ಸ್ಥಳಗಳಾಗಿವೆ. ಇವು ಕೇವಲ ಸಾಧನಗಳಲ್ಲ; ನಾವು ಏನನ್ನು ನೋಡುತ್ತೇವೆ, ಯಾರ ಧ್ವನಿಯನ್ನು ಕೇಳುತ್ತೇವೆ ಮತ್ತು ಇತರರೊಂದಿಗೆ ಹೇಗೆ ಸಂಬಂಧ ಹೊಂದುತ್ತೇವೆ ಎಂಬುದನ್ನೂ ಇವು ಕ್ರಮೇಣ ರೂಪಿಸುತ್ತವೆ. ಇಂದು ನಾವು ಹಿಂದೆಂದಿಗಿಂತಲೂ ಹೆಚ್ಚು ಸಂಪರ್ಕದಲ್ಲಿದ್ದೇವೆ; ಆದರೆ ಅನೇಕ ಬಾರಿ ಹೆಚ್ಚು ವಿಭಜಿತರಾಗಿದ್ದೇವೆ. ನಮಗೆ ಹಿಂದೆಂದಿಗಿಂತಲೂ ಹೆಚ್ಚಿನ ಮಾಹಿತಿಯ ಪ್ರವೇಶವಿದೆ; ಆದರೆ ಸತ್ಯವನ್ನು ವಿವೇಚಿಸುವಲ್ಲಿ ಕಷ್ಟಪಡುತ್ತೇವೆ. ಹೆಚ್ಚಿನ ವೈವಿಧ್ಯತೆಯನ್ನು ನಾವು ಎದುರಿಸುತ್ತೇವೆ; ಆದರೆ ಅದೇ ಸಮಯದಲ್ಲಿ ಇನ್ನಷ್ಟು ಧ್ರುವೀಕರಣಕ್ಕೂ ಒಳಗಾಗಬಹುದು. ಇಂತಹ ಸಂದರ್ಭದಲ್ಲಿ ಆಧ್ಯಾತ್ಮಿಕತೆಯನ್ನು ಕೇವಲ ವೈಯಕ್ತಿಕ ಪ್ರಾರ್ಥನೆ ಅಥವಾ ವೈಯಕ್ತಿಕ ಭಕ್ತಿಯ ಸೀಮಿತ ಅಭ್ಯಾಸಕ್ಕೆ ಮಾತ್ರ ಸೀಮಿತಗೊಳಿಸಲಾಗುವುದಿಲ್ಲ. ನಮ್ಮ ಜೀವನವನ್ನು ರೂಪಿಸುತ್ತಿರುವ ಶಕ್ತಿಗಳನ್ನು ವಿವೇಚಿಸಲು ಮತ್ತು ಅವುಗಳಿಗೆ ನಂಬಿಗಸ್ತಿಕೆಯಿಂದ ಪ್ರತಿಕ್ರಿಯಿಸಲು ಆಧ್ಯಾತ್ಮಿಕತೆ ನಮಗೆ ಸಹಾಯ ಮಾಡಬೇಕು.

ಆಧ್ಯಾತ್ಮಿಕತೆಯ ಹೃದಯದಲ್ಲಿ ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಜೀವಿಸುವುದು ಮತ್ತು ಆ ಅನ್ಯೋನ್ಯತೆಯು ನಮ್ಮ ಸಂಪೂರ್ಣ

ಜೀವನವನ್ನು ರೂಪಿಸಲು ಅವಕಾಶ ನೀಡುವುದು ಇದೆ. ಯೇಸು ಕ್ರಿಸ್ತನು ತಂದೆಯಾದ ದೇವರಲ್ಲಿ ಆಳವಾದ ನಂಬಿಕೆಯನ್ನು ಹೊಂದಿರುವ ಜೀವನದ ಮಾರ್ಗವನ್ನು ತೋರಿಸುತ್ತಾನೆ. ಜನರೊಂದಿಗೆ ಆತನು ಹೊಂದಿದ ಭೇಟಿಗಳಲ್ಲಿ, ಸಾಮಾಜಿಕ ಮತ್ತು ಧಾರ್ಮಿಕ ಗಡಿಗಳನ್ನು ದಾಟಿದ ರೀತಿಯಲ್ಲಿ, ಅನ್ಯಾಯವನ್ನು ಪ್ರಶ್ನಿಸಿದ ಸಂದರ್ಭದಲ್ಲಿ, ಹೊರಗುಳಿಸಲ್ಪಟ್ಟವರನ್ನು ಸ್ವಾಗತಿಸಿದಾಗ ಮತ್ತು ಮಾನವ ದುಃಖಕ್ಕೆ ಪ್ರತಿಕ್ರಿಯಿಸಿದಾಗ ಈ ನಂಬಿಕೆ ವ್ಯಕ್ತವಾಗುತ್ತದೆ. ಹೀಗಾಗಿ, ಕ್ರೈಸ್ತ ಆಧ್ಯಾತ್ಮಿಕತೆ ದೇವರೊಂದಿಗಿನ ಜೀವನವನ್ನೂ ಜೀವನದೊಂದಿಗೆ ನಮ್ಮ ತೊಡಗಿಸಿಕೊಳ್ಳುವಿಕೆಯನ್ನೂ ಒಟ್ಟಿಗೆ ಹಿಡಿದಿಡುತ್ತದೆ. ನಂಬಿಕೆಯನ್ನು ನೈಜ ಜೀವನದ ಸಂದರ್ಭಗಳೊಳಗೆ ಅರ್ಥೈಸಿ, ಬದುಕಿದಾಗ ಅದು "ಪ್ರಾಯೋಗಿಕ ಜೀವನ" ಅಥವಾ ಪ್ರಾಕ್ಸಿಸ್ (Praxis) ಆಗುತ್ತದೆ. ಅಂದರೆ, ನಮ್ಮ ಸಂದರ್ಭವನ್ನು ಓದುವುದು, ಸುವಾರ್ತೆಯ ಬೆಳಕಿನಲ್ಲಿ ಅದನ್ನು ವಿವೇಚಿಸುವುದು ಮತ್ತು ನಂಬಿಗಸ್ತ ಕ್ರಿಯೆಯ ಮೂಲಕ ಅದಕ್ಕೆ ಪ್ರತಿಕ್ರಿಯಿಸುವುದು.

ವೇದಿಕೆಯಿಂದ ಪ್ರಾಯೋಗಿಕ ಜೀವನದ ಕಡೆಗೆ

ಆದ್ದರಿಂದ "ವೇದಿಕೆಯಿಂದ ಪ್ರಾಯೋಗಿಕ ಜೀವನದ ಕಡೆಗೆ" ಎಂಬುದು ಕೇವಲ ತಂತ್ರಜ್ಞಾನದಿಂದ ಕ್ರಿಯೆಯ ಕಡೆಗೆ ಸಾಗುವ ಚಲನೆಯಲ್ಲ. ನಾವು ಜಗತ್ತನ್ನು ಹೇಗೆ ಎದುರಿಸುತ್ತೇವೋ ಅಲ್ಲಿಂದ, ಕ್ರಿಸ್ತನ ಶಿಷ್ಯರಾಗಿ ಆ ಜಗತ್ತಿನೊಂದಿಗೆ ಹೇಗೆ ತೊಡಗಿಸಿಕೊಳ್ಳಲು ಕರೆಯಲ್ಪಟ್ಟಿದ್ದೇವೋ ಅಲ್ಲಿಗೆ ಸಾಗುವ ಪ್ರಯಾಣವಾಗಿದೆ. ಇದು ನ್ಯಾಯ, ಸಂವಾದ ಮತ್ತು ಐಕ್ಯಭಾವದ ಮೂಲಕ ನೈಜ ರೂಪವನ್ನು ಪಡೆಯುತ್ತದೆ. ಕ್ರಿಸ್ತನಲ್ಲಿ ಬೇರೂರಿರುವ ಆಧ್ಯಾತ್ಮಿಕತೆ ಮಾನವ ಘನತೆಯನ್ನು ನಿರಾಕರಿಸುವ ಸಂಗತಿಗಳನ್ನು ಗುರುತಿಸಲು, ಭಿನ್ನತೆಯನ್ನು ವಿನಯದಿಂದ ಎದುರಿಸಲು ಮತ್ತು ದುಃಖಿಸುವವರೊಂದಿಗೆ ನಿಲ್ಲಲು ನಮಗೆ ಸಾಧ್ಯವಾಗಿಸುತ್ತದೆ. ಈ ಅರ್ಥದಲ್ಲಿ, ನಂಬಿಕೆಯು ಜೀವನದ ವಾಸ್ತವಿಕತೆಗಳಲ್ಲಿ ಬಿತ್ತಲ್ಪಟ್ಟ ಬೀಜದಂತಿದೆ. ಕೀರ್ತನೆ 126:5 ನಮಗೆ ನೆನಪಿಸುವಂತೆ: "ಅಳುತ್ತಾ ಬಿತ್ತುವವರು ಹಾಡುತ್ತಾ ಕೊಯ್ಯುವರು." ಫಲವು ತಕ್ಷಣ ಕಾಣಿಸದಿದ್ದರೂ ನಂಬಿಗಸ್ತಿಕೆಯಿಂದ ಬಿತ್ತುವುದನ್ನು ಮುಂದುವರಿಸಲು ಕ್ರೈಸ್ತ ಆಧ್ಯಾತ್ಮಿಕತೆ ನಮ್ಮನ್ನು ಆಹ್ವಾನಿಸುತ್ತದೆ. ಆದ್ದರಿಂದ ಪ್ರಶ್ನೆ ಕೇವಲ "ನಮ್ಮ ಆಧ್ಯಾತ್ಮಿಕತೆ ನಮಗೆ ಏನು ಮಾಡುತ್ತದೆ?" ಎಂಬುದಲ್ಲ; "ನಮ್ಮ ಆಧ್ಯಾತ್ಮಿಕತೆ ನಮ್ಮನ್ನು ಈ ಜಗತ್ತಿನಲ್ಲಿ ಯಾವ ರೀತಿಯ ಜನರನ್ನಾಗಿ ಮಾಡುತ್ತಿದೆ?" ಎಂಬುದಾಗಿದೆ.

ಆಧ್ಯಾತ್ಮಿಕತೆ ಮತ್ತು ನ್ಯಾಯ

ಡಿಜಿಟಲ್ ವೇದಿಕೆಗಳು ನಾವು ಎದುರಿಸುವ ಅನ್ಯಾಯದ ರೂಪಗಳನ್ನು ಮಾತ್ರವಲ್ಲ, ನಾವು ಯಾವುದನ್ನು ಗಮನಿಸುತ್ತೇವೆ ಮತ್ತು ಯಾವುದನ್ನು ಗಮನಿಸದೆ ಬಿಡುತ್ತೇವೆ ಎಂಬುದನ್ನೂ ರೂಪಿಸುತ್ತವೆ. ಜಗತ್ತಿನಾದ್ಯಂತ ನಡೆಯುವ ಘಟನೆಗಳನ್ನು ನಾವು ಅನುಸರಿಸಬಹುದು; ಆದರೆ ನಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಅರಿವಿಲ್ಲದವರಾಗಿರಬಹುದು. ಮಾಹಿತಿಯ, ಮನರಂಜನೆಯ ಮತ್ತು ಚಿತ್ರಗಳ ನಿರಂತರ ಪ್ರವಾಹವು ದುಃಖವನ್ನು ನಮಗೆ ಪರಿಚಿತವಾಗಿಸಬಹುದು; ಆದರೆ ಅದಕ್ಕೆ ಪ್ರತಿಕ್ರಿಯಿಸುವಂತೆ ಮಾಡದೇ ಇರಬಹುದು. ಆದರೆ ಇದೇ ಡಿಜಿಟಲ್ ವೇದಿಕೆಗಳು ನ್ಯಾಯ ಮತ್ತು ಕ್ರಿಯೆಗೆ ಸ್ಥಳಗಳಾಗಬಹುದು. ನಮ್ಮ ಯುವಜನರು Instagram, YouTube, WhatsApp ಮತ್ತು ಇತರ ಡಿಜಿಟಲ್ ಜಾಲಗಳನ್ನು ಬಳಸಿಕೊಂಡು ತಾರತಮ್ಯ, ಪರಿಸರದ ಸಮಸ್ಯೆಗಳು, ಹಿಂಸಾಚಾರ ಮತ್ತು ಅಂಚಿನಲ್ಲಿರುವ ಸಮುದಾಯಗಳ ಹೋರಾಟಗಳ ಕುರಿತು ಅರಿವು ಮೂಡಿಸುತ್ತಿದ್ದಾರೆ. ಅವರು ಸಾಕ್ಷ್ಯಗಳನ್ನು ಹಂಚಿಕೊಳ್ಳುತ್ತಾರೆ, ಅಭಿಯಾನಗಳನ್ನು ಸಂಘಟಿಸುತ್ತಾರೆ, ಬೆಂಬಲವನ್ನು

ಒಗ್ಗೂಡಿಸುತ್ತಾರೆ ಮತ್ತು ಸ್ಥಳೀಯ ಸಮಸ್ಯೆಗಳನ್ನು ವಿಶಾಲ ಸಾರ್ವಜನಿಕ ಗಮನಕ್ಕೆ ತರುತ್ತಾರೆ. ಆದ್ದರಿಂದ ತಂತ್ರಜ್ಞಾನವು ನಮಗೆ ಕೇವಲ ಸಂಭವಿಸುವ ಯಾವುದೋ ಸಂಗತಿಯಲ್ಲ; ಸಮಾಜವನ್ನು ರೂಪಿಸುವಲ್ಲಿ ನಾವು ಭಾಗವಹಿಸುವ ಒಂದು ಸ್ಥಳವಾಗಿಯೂ ಅದು ಪರಿಣಮಿಸಬಹುದು. ಬೈಬಲಿನ ಪರಂಪರೆಯು ಇಂತಹ ಗಮನವನ್ನು ನಂಬಿಕೆಯೊಂದಿಗೆ ಸಂಪರ್ಕಿಸುತ್ತದೆ. ಪ್ರವಾದಿಗಳು ನ್ಯಾಯದಿಂದ ಬೇರ್ಪಟ್ಟ ಆರಾಧನೆಯನ್ನು ಪ್ರಶ್ನಿಸಿದರು: "ಸದಾಚಾರವನ್ನು ಅಭ್ಯಾಸಮಾಡಿರಿ; ನ್ಯಾಯನಿರತರಾಗಿರಿ, ಹಿಂಸಕನನ್ನು ತಿದ್ದಿ ಸರಿಪಡಿಸಿರಿ, ಅನಾಥನಿಗೆ ನ್ಯಾಯತೀರಿಸಿರಿ, ವಿಧವೆಯ ಪಕ್ಷವಾಗಿ ವಾದಿಸಿರಿ." (ಯೆಶಾಯ 1:17) ಯೇಸು ತನ್ನ ಸೇವೆಯ ಕೇಂದ್ರದಲ್ಲಿಯೇ ಈ ಕಾಳಜಿಯನ್ನು ಇಡುತ್ತಾನೆ. ಲೂಕ 4:18 19ರಲ್ಲಿ ಬಡವರಿಗೆ ಸುವಾರ್ತೆ, ದಬ್ಬಾಳಿಕೆಗೆ ಒಳಗಾದವರಿಗೆ ಸ್ವಾತಂತ್ರ್ಯ ಮತ್ತು ಬಂಧಿತರಿಗೆ ಬಿಡುಗಡೆಯನ್ನು ಆತನು ಘೋಷಿಸುತ್ತಾನೆ. ಅಂಚಿನಲ್ಲಿರುವವರಿಗಾಗಿ ಅವನ ಕಾಳಜಿಯು ದೇವರ ರಾಜ್ಯದ ಅಭಿವ್ಯಕ್ತಿಯಾಗಿದೆ. ಒಳ್ಳೆಯ ಸಮಾರ್ಯದವನ ಕಥೆ (ಲೂಕ 10:25 37) ಈ ರೀತಿಯ ಆಧ್ಯಾತ್ಮಿಕತೆಯ ಸರಳ ಚಿತ್ರವನ್ನು ನೀಡುತ್ತದೆ. ಸಮಾರ್ಯದವನು ಗಾಯಗೊಂಡ ವ್ಯಕ್ತಿಯನ್ನು ನೋಡುತ್ತಾನೆ, ಕರುಣೆಯಿಂದ ಚಲಿಸಲ್ಪಡುತ್ತಾನೆ, ಅವನ ಬಳಿಗೆ ಹೋಗುತ್ತಾನೆ ಮತ್ತು ಕಾರ್ಯನಿರ್ವಹಿಸುತ್ತಾನೆ. ಇಂದು ನಮಗೆ ಪ್ರಶ್ನೆ ಹೀಗಿದೆ: ನಾವು ಯಾವುದನ್ನು ನೋಡಲು ನಮ್ಮನ್ನು ಅನುಮತಿಸುತ್ತೇವೆ? ಮತ್ತು ನಾವು ನೋಡುವುದರೊಂದಿಗೆ ಏನು ಮಾಡಲು ಆಯ್ಕೆ ಮಾಡುತ್ತೇವೆ? ಇಲ್ಲಿಯೇ ಆಧ್ಯಾತ್ಮಿಕತೆ ಪ್ರಾಯೋಗಿಕ ಜೀವನವಾಗುತ್ತದೆ. ಪ್ರಶ್ನೆ ಕೇವಲ ನಾವು ತಂತ್ರಜ್ಞಾನವನ್ನು ಹೇಗೆ ಬಳಸುತ್ತೇವೆ ಎಂಬುದಲ್ಲ; ಅದರ ಬಳಕೆ ನಮ್ಮ ಸುತ್ತಮುತ್ತಲಿನ ವಾಸ್ತವಿಕತೆಗಳ ಬಗ್ಗೆ ನಮ್ಮನ್ನು ಹೆಚ್ಚು ಎಚ್ಚರಿಕೆಯಿಂದ ಮಾಡುತ್ತದೆಯೇ ಎಂಬುದಾಗಿದೆ. ನ್ಯಾಯದ ಆಧ್ಯಾತ್ಮಿಕತೆ ಕೇವಲ ದುಃಖದ ಚಿತ್ರಗಳನ್ನು ನೋಡುವುದರಿಂದ ಮುಂದೆ ಸಾಗಲು ನಮ್ಮನ್ನು ಕರೆಯುತ್ತದೆ. ಕಾಣದಂತೆ ಮಾಡಲ್ಪಟ್ಟಿರುವುದನ್ನು ನೋಡುವುದು, ಜೀವವನ್ನು ನಿರಾಕರಿಸುವ ಸಂಗತಿಗಳನ್ನು ವಿವೇಚಿಸುವುದು ಮತ್ತು ಜೀವವು ಅರಳಲು ಸಹಾಯ ಮಾಡುವ ಸಂಗತಿಗಳನ್ನು ಉತ್ತೇಜಿಸಲು ನಮ್ಮ ಡಿಜಿಟಲ್ ವೇದಿಕೆಗಳನ್ನು ಬಳಸುವುದು ಇದರ ಭಾಗವಾಗಿದೆ. ಹೀಗೆ ಮಾಡುವಾಗ ನಾವು ನ್ಯಾಯ ಮತ್ತು ಕರುಣೆಯ ಬೀಜಗಳನ್ನು ಬಿತ್ತುತ್ತೇವೆ. ನಂಬಿಗಸ್ತ ಕ್ರಿಯೆಯು ದೇವರ ಸಮಯದಲ್ಲಿ ಫಲವನ್ನು ನೀಡುತ್ತದೆ ಎಂಬ ಭರವಸೆಯಲ್ಲಿ ನಾವು ಮುಂದುವರಿಯುತ್ತೇವೆ.

ಆಧ್ಯಾತ್ಮಿಕತೆ ಮತ್ತು ಸಂವಾದ

ನಮ್ಮ ಸಂದರ್ಭವು ವಿಭಿನ್ನ ಸಂಸ್ಕೃತಿಗಳು, ಪರಂಪರೆಗಳು, ಧರ್ಮಗಳು, ಭಾಷೆಗಳು ಮತ್ತು ಜೀವನದೃಷ್ಟಿಕೋನಗಳನ್ನು ಹೊಂದಿರುವ ಜನರೊಂದಿಗೆ ನಮ್ಮನ್ನು ಭೇಟಿಯಾಗುವಂತೆ ಮಾಡುತ್ತದೆ. ಭಾರತವು ಸದಾಕಾಲ ಇಂತಹ ವೈವಿಧ್ಯತೆಯಿಂದ ಗುರುತಿಸಲ್ಪಟ್ಟಿದೆ. ಆದರೆ ಡಿಜಿಟಲ್ ಜಾಲಗಳು ಈ ಭೇಟಿಗಳನ್ನು ಇನ್ನಷ್ಟು ತೀವ್ರಗೊಳಿಸಿವೆ. ಆದರೆ ಹತ್ತಿರವಾಗಿರುವುದು ಎಂದರೆ ಪರಸ್ಪರ ಅರ್ಥಮಾಡಿಕೊಳ್ಳುವುದು ಎಂದಲ್ಲ. ನಾವು ಇತರರನ್ನು ಪದೇಪದೇ ಎದುರಿಸಬಹುದು; ಆದರೆ ನಿಜವಾಗಿ ಅವರ ಮಾತನ್ನು ಕೇಳದೇ ಇರಬಹುದು. ಕ್ರೈಸ್ತ ನಂಬಿಕೆಯಲ್ಲಿ ಸಂವಾದಕ್ಕೆ ಆಳವಾದ ಧಾರ್ಮಿಕ ಆಧಾರವಿದೆ. ತಂದೆ, ಮಗ ಮತ್ತು ಪವಿತ್ರಾತ್ಮನಾದ ತ್ರಿಯೇಕ ದೇವರನ್ನು ನಾವು ನಂಬುತ್ತೇವೆ. ದೇವರ ಸ್ವಭಾವವೇ ಸಂಬಂಧಾತ್ಮಕವಾಗಿದೆ. ಮಾನವಕುಲವು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದು, ಪರಸ್ಪರ ಸಂಬಂಧದಲ್ಲಿ ಜೀವಿಸಲು ಕರೆಯಲ್ಪಟ್ಟಿದೆ ಎಂಬುದನ್ನೂ ನಾವು ನಂಬುತ್ತೇವೆ. ಅವತಾರವು ಈ ಅರ್ಥವನ್ನು ಇನ್ನಷ್ಟು ಆಳಗೊಳಿಸುತ್ತದೆ. ಯೇಸು ಕ್ರಿಸ್ತನಲ್ಲಿ ದೇವರು ಮಾನವ ಇತಿಹಾಸದೊಳಗೆ ಪ್ರವೇಶಿಸಿ, ಮಾನವಕುಲವನ್ನು ಅದರೊಳಗಿನಿಂದಲೇ ಎದುರಿಸುತ್ತಾನೆ. ಸಮಾರ್ಯದ ಸ್ತ್ರೀಯೊಂದಿಗೆ ಯೇಸುವಿನ ಭೇಟಿ (ಯೋಹಾನ 4)

ಅತ್ಯಂತ ಮಹತ್ವದ್ದಾಗಿದೆ. ಯೇಸು ಲಿಂಗ, ಜನಾಂಗ, ಧರ್ಮ ಮತ್ತು ಸಾಮಾಜಿಕ ಸ್ಥಾನಮಾನಗಳ ಗಡಿಗಳನ್ನು ದಾಟಿ ಅವಳೊಂದಿಗೆ ಸಂಭಾಷಣೆ ನಡೆಸುತ್ತಾನೆ. ಈ ಭೇಟಿಯು ಅವರ ಭಿನ್ನತೆಗಳನ್ನು ಅಳಿಸಿಹಾಕುವುದಿಲ್ಲ; ಬದಲಾಗಿ ಅರ್ಥಮಾಡಿಕೊಳ್ಳುವಿಕೆ ಮತ್ತು ಪರಿವರ್ತನೆಗೆ ಸ್ಥಳವನ್ನು ಸೃಷ್ಟಿಸುತ್ತದೆ. ಪೇತ್ರ ಮತ್ತು ಕೊರ್ನೇಲ್ಯನ ಕಥೆ (ಅಪೊಸ್ತಲರ ಕೃತ್ಯಗಳು 10) ಈ ವಿಚಾರವನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯುತ್ತದೆ. ಯಾರು ದೇವರ ಜನರಿಗೆ ಸೇರಿದವರು ಎಂಬುದರ ಕುರಿತು ಪೇತ್ರನು ಕೆಲವು ಪೂರ್ವಗ್ರಹಗಳನ್ನು ಹೊಂದಿದ್ದನು. ಆದರೆ ಆ ಭೇಟಿಯ ಮೂಲಕ ದೇವರು ತಾನು ಊಹಿಸಿದ್ದ ಗಡಿಗಳಾಚೆಯೂ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾನೆ ಎಂಬುದನ್ನು ಅವನು ಕಂಡುಕೊಳ್ಳುತ್ತಾನೆ. ಪೇತ್ರನೇ ಬದಲಾಗುತ್ತಾನೆ. ಆದ್ದರಿಂದ ಸಂವಾದವೆಂದರೆ ಇತರರಿಗೆ ನಾವು ಏನು ಕಲಿಸಬೇಕು ಎಂಬುದಷ್ಟೇ ಅಲ್ಲ; ಕೇಳಲು, ಕಲಿಯಲು ಮತ್ತು ಪರಿವರ್ತನೆಗೊಳ್ಳಲು ನಮ್ಮ ಸಿದ್ಧತೆಯೂ ಆಗಿದೆ.

ಸಂವಾದಕ್ಕೆ ಇತರ ಧರ್ಮಗಳು ಮತ್ತು ಸಂಸ್ಕೃತಿಗಳ ಕಥೆಗಳನ್ನು ಕೇಳುವುದು, ಅವರ ಆರಾಧನಾ ಸ್ಥಳಗಳಿಗೆ ಭೇಟಿ ನೀಡುವುದು, ಒಟ್ಟಿಗೆ ಊಟ ಮಾಡುವುದು, ಪ್ರಾಮಾಣಿಕ ಸಂಭಾಷಣೆಗೆ ಸ್ಥಳಗಳನ್ನು ಸೃಷ್ಟಿಸುವುದು ಮತ್ತು ಶಾಂತಿ, ಬಡತನ ಹಾಗೂ ಸೃಷ್ಟಿಯ ಸಂರಕ್ಷಣೆಯಂತಹ ವಿಷಯಗಳಲ್ಲಿ ಒಟ್ಟಾಗಿ ಕೆಲಸ ಮಾಡುವಂತಹ ನೈಜ ಅಭ್ಯಾಸಗಳು ಅಗತ್ಯ. ಡಿಜಿಟಲ್ ಸ್ಥಳಗಳಲ್ಲಿ ಇದರ ಅರ್ಥ: ಪ್ರತಿಕ್ರಿಯಿಸುವ ಮೊದಲು ಕ್ಷಣಕಾಲ ನಿಲ್ಲುವುದು, ಫಾರ್ವರ್ಡ್ ಮಾಡುವ ಮೊದಲು ಮಾಹಿತಿಯನ್ನು ಪರಿಶೀಲಿಸುವುದು, ತೀರ್ಪು ನೀಡುವ ಮೊದಲು ಕೇಳುವುದು ಮತ್ತು ಆನ್‌ಲೈನ್ ದ್ವೇಷವನ್ನು ನಿರಾಕರಿಸುವುದು. ಇದರರ್ಥ ನಮ್ಮ ನಂಬಿಕೆಗಳನ್ನು ತ್ಯಜಿಸಬೇಕು ಎಂದಲ್ಲ. ನಮ್ಮ ನಂಬಿಕೆಗಳನ್ನು ವಿನಯದಿಂದ ಹಿಡಿದುಕೊಂಡು, ಮತ್ತೊಬ್ಬರನ್ನು ಘನತೆಯಿಂದ ಎದುರಿಸಬೇಕು. ಕೇಳುವುದು ಸ್ವತಃ ಒಂದು ಆಧ್ಯಾತ್ಮಿಕ ಅಭ್ಯಾಸವಾಗಿದೆ. ಪ್ರತಿಯೊಂದು ಇಂತಹ ಭೇಟಿಯೂ ಶಾಂತಿ ಮತ್ತು ಅರ್ಥಮಾಡಿಕೊಳ್ಳುವಿಕೆಯ ಬೀಜವಾಗಬಹುದು. ಅದನ್ನು ನಂಬಿಕೆಯಲ್ಲಿ ತಾಳ್ಮೆಯಿಂದ ಬಿತ್ತಿ, ಅದರ ಫಲವನ್ನು ದೇವರಿಗೆ ಒಪ್ಪಿಸಬಹುದು.

ಆಧ್ಯಾತ್ಮಿಕತೆ ಮತ್ತು ಐಕ್ಯಭಾವ

ಸಂವಾದವು ಕೇವಲ ಮಾತುಕತೆಯಾಗಿ ಉಳಿಯಬಾರದು. ನಾವು ಮತ್ತೊಬ್ಬರ ಕಥೆಯನ್ನು ಕೇಳಿದಾಗ, ಅವರ ಹೋರಾಟಗಳನ್ನು ಎದುರಿಸಲು ಆರಂಭಿಸುತ್ತೇವೆ. ಇದು ನಮ್ಮನ್ನು ಐಕ್ಯಭಾವದ ಕಡೆಗೆ ಕರೆದೊಯ್ಯುತ್ತದೆ. ಅಂದರೆ ಇತರರಿಗಾಗಿ ಕೇವಲ ಅನುಕಂಪ ಹೊಂದುವುದಲ್ಲ, ಅವರೊಂದಿಗೆ ನಿಂತು ಅವರೊಂದಿಗೆ ಪ್ರಯಾಣಿಸುವ ಸಿದ್ಧತೆ. ಯುದ್ಧ, ಸ್ಥಳಾಂತರ, ಬಡತನ, ಹಿಂಸಾಚಾರ ಮತ್ತು ಪರಿಸರದ ನಾಶದಂತಹ ದುಃಖಗಳನ್ನು ನಾವು ಡಿಜಿಟಲ್ ಮಾಧ್ಯಮಗಳ ಮೂಲಕ ನಿರಂತರವಾಗಿ ನೋಡುತ್ತೇವೆ. ಆದರೆ ಪರದೆಯ ಮೇಲೆ ದುಃಖವನ್ನು ನೋಡುವುದರಿಂದ ನಾವು ದುಃಖಿಸುವವರೊಂದಿಗೆ ನಿಜವಾಗಿ ಹತ್ತಿರವಾಗುತ್ತೇವೆ ಎಂಬುದಿಲ್ಲ. ಅದು ನಮ್ಮನ್ನು ಕೇವಲ ಪ್ರೇಕ್ಷಕರನ್ನಾಗಿ ಮಾಡಬಹುದು. ಕ್ರೈಸ್ತ ಆಧ್ಯಾತ್ಮಿಕತೆ ಈ ದೂರವನ್ನು ಪ್ರಶ್ನಿಸುತ್ತದೆ. ಯೇಸುವಿನ ಸೇವೆಯು ಅಂಚಿನಲ್ಲಿರುವವರ ಕಡೆಗೆ ಸಾಗುವ ಸೇವೆಯಾಗಿದೆ. ಆತನು ಕುಷ್ಠರೋಗಿಯನ್ನು ಮುಟ್ಟುತ್ತಾನೆ, ಪಾಪಿಗಳೆಂದು ಕರೆಯಲ್ಪಟ್ಟವರೊಂದಿಗೆ ಊಟ ಮಾಡುತ್ತಾನೆ, ಹೊರಗುಳಿಸಲ್ಪಟ್ಟವರಿಗೆ ಘನತೆಯನ್ನು ಪುನಃ ನೀಡುತ್ತಾನೆ ಮತ್ತು ಯಾರೂ ಗಮನಿಸದವರ ಕೂಗಿಗೆ ಪ್ರತಿಕ್ರಿಯಿಸುತ್ತಾನೆ. ಶಿಲುಬೆಯು ಈ ಐಕ್ಯಭಾವದ ಅತ್ಯಂತ ಆಳವಾದ ಅಭಿವ್ಯಕ್ತಿಯಾಗಿದೆ. ಕ್ರಿಸ್ತನಲ್ಲಿ ದೇವರು ಮಾನವ ದುಃಖವನ್ನು ದೂರದಿಂದ ನೋಡುವ ಪ್ರೇಕ್ಷಕನಾಗಿ ಉಳಿಯುವುದಿಲ್ಲ; ಮಾನವ ಜೀವನದ ಮುರಿತದ ಆಳಕ್ಕೆ

ಪ್ರವೇಶಿಸುತ್ತಾನೆ.

ಭಾರತೀಯ ಸಂದರ್ಭದಲ್ಲಿ ಫಾ. ಸ್ಟ್ಯಾನ್ ಸ್ವಾಮಿ ಅವರ ಜೀವನ ಮತ್ತು ಸಾಕ್ಷ್ಯವು ಮಹತ್ವದ ಉದಾಹರಣೆಯಾಗಿದೆ. ಆದಿವಾಸಿ ಸಮುದಾಯಗಳಿಗಾಗಿ ಅವರ ಬದ್ಧತೆಯು ಅವರೊಂದಿಗೆ ಇರುವಿಕೆ, ಜೊತೆಯಾಗಿ ನಡೆಯುವುದು ಮತ್ತು ಅವರ ಪರವಾಗಿ ಧ್ವನಿ ಎತ್ತುವುದರ ಮೂಲಕ ವ್ಯಕ್ತವಾಯಿತು. ಸಾಮಾನ್ಯವಾಗಿ ಯಾರ ಧ್ವನಿಯೂ ಕೇಳಿಸದ ಸಮುದಾಯಗಳ ಮಾತನ್ನು ಅವರು ಕೇಳಿದರು ಮತ್ತು ಭೂಮಿ, ಸ್ಥಳಾಂತರ, ಹಕ್ಕುಗಳು ಮತ್ತು ಘನತೆಯ ಕುರಿತ ಹೋರಾಟಗಳಲ್ಲಿ ಅವರೊಂದಿಗೆ ನಿಂತರು. ಅವರ ಜೀವನವು ಐಕ್ಯಭಾವ ಎಂದರೆ ದೂರದಿಂದ ಜನರ ಪರವಾಗಿ ಮಾತನಾಡುವುದಲ್ಲ ಎಂಬುದನ್ನು ನಮಗೆ ನೆನಪಿಸುತ್ತದೆ. ಅವರೊಂದಿಗೆ ಇರುವುದು, ಕೇಳುವುದು, ಕಲಿಯುವುದು, ಜೊತೆಯಾಗಿ ನಡೆಯುವುದು ಮತ್ತು ಅವರ ಪಕ್ಕದಲ್ಲಿ ನಿಲ್ಲುವುದು ಐಕ್ಯಭಾವವಾಗಿದೆ. ಇದೇ ಆಧ್ಯಾತ್ಮಿಕತೆ ಪ್ರಾಯೋಗಿಕ ಜೀವನವಾಗುವ ಮಾರ್ಗವಾಗಿದೆ. ನಾವು ಎದುರಿಸುವ ಸಂಗತಿಗಳು ನಮ್ಮನ್ನು ಬದಲಾಯಿಸದೆ ಹಾಗೆಯೇ ಬಿಡಬಾರದು. ಐಕ್ಯಭಾವವು ಪ್ರೇಕ್ಷಕರಾಗಿರುವುದರಿಂದ ಸಹಯಾತ್ರಿಗಳಾಗುವಂತೆ ನಮ್ಮನ್ನು ಕರೆಯುತ್ತದೆ. ಅದು ನಮ್ಮನ್ನು ಕೇಳುತ್ತದೆ: "ಯಾರ ದುಃಖವನ್ನು ನಾನು ನಿರ್ಲಕ್ಷಿಸಲು ಕಲಿತಿದ್ದೇನೆ?" "ಯಾರೊಂದಿಗೆ ನಿಲ್ಲಲು ನಾನು ಸಿದ್ಧನಿದ್ದೇನೆ?" ಇಂತಹ ಐಕ್ಯಭಾವಕ್ಕೆ ತ್ಯಾಗ, ತಾಳ್ಮೆ ಮತ್ತು ನಿರಂತರ ಪ್ರಯತ್ನ ಬೇಕಾಗಬಹುದು. ಆದರೂ ಕೀರ್ತನೆ 126:5ರ ಆಧ್ಯಾತ್ಮಿಕತೆ ನಮಗೆ ನೆನಪಿಸುವಂತೆ, ಕಣ್ಣೀರಿನೊಂದಿಗೆ ಬಿತ್ತಿದರೂ ನಂಬಿಗಸ್ತಿಕೆಯಿಂದ ಬಿತ್ತುವುದು ವ್ಯರ್ಥವಲ್ಲ. ದೇವರು ಅದರಿಂದ ಸಂತೋಷದ ಬೆಳೆಯನ್ನು ಉಂಟುಮಾಡಬಲ್ಲನು.

ಇಂದಿನ ಆಧ್ಯಾತ್ಮಿಕತೆಯ ಸವಾಲು

ಇಂದಿನ ಆಧ್ಯಾತ್ಮಿಕತೆಯ ಸವಾಲು ಅಂತಿಮವಾಗಿ ನಂಬಿಗಸ್ತಿಕೆಯ ಸವಾಲಾಗಿದೆ. ವೇಗವಾಗಿ ಬದಲಾಗುತ್ತಿರುವ ಸಂದರ್ಭದಲ್ಲಿ ಕ್ರೈಸ್ತ ನಂಬಿಕೆಯನ್ನು ಪರಿಚಿತವಾದ ಆಚರಣೆಗಳನ್ನು ಕಾಪಾಡುವುದಕ್ಕೆ ಮಾತ್ರ ಸೀಮಿತಗೊಳಿಸಲಾಗುವುದಿಲ್ಲ. ಅದೇ ಸಮಯದಲ್ಲಿ ಪ್ರತಿಯೊಂದು ಹೊಸ ಸಾಂಸ್ಕೃತಿಕ ಬೆಳವಣಿಗೆಯನ್ನು ಅನುಸರಿಸುವುದೂ ಕ್ರೈಸ್ತ ನಂಬಿಕೆಯ ಮಾರ್ಗವಲ್ಲ. ನಮಗೆ ವಿವೇಚನೆ ಅಗತ್ಯ. ಎಲ್ಲಿ ಜೀವನವನ್ನು ದೃಢಪಡಿಸಲಾಗುತ್ತಿದೆ ಮತ್ತು ಎಲ್ಲಿ ಜೀವನದ ಮೌಲ್ಯ ಕುಗ್ಗಿಸಲಾಗುತ್ತಿದೆ ಎಂಬುದನ್ನು ಗುರುತಿಸಬೇಕು. ಎಲ್ಲಿ ಸಂಬಂಧಗಳು ಬಲಪಡಿಸಲ್ಪಡುತ್ತಿವೆ ಮತ್ತು ಎಲ್ಲಿ ಜನರನ್ನು ಹೊರಗಿಡಲಾಗುತ್ತಿದೆ ಎಂಬುದನ್ನು ಗಮನಿಸಬೇಕು. ಇಂತಹ ವಿವೇಚನೆಗೆ ಸುವಾರ್ತೆಯೇ ನಮಗೆ ಮಾದರಿಯನ್ನು ನೀಡುತ್ತದೆ. ಯೇಸುವಿನ ಜೀವನವು ದೇವರೊಂದಿಗಿನ ಆಳವಾದ ಅನ್ಯೋನ್ಯತೆಯು ಜನರಿಂದ ದೂರವಾಗುವಂತೆ ಮಾಡುವುದಿಲ್ಲ; ಬದಲಾಗಿ ಅವರ ಜೀವನ ಮತ್ತು ಹೋರಾಟಗಳ ಬಗ್ಗೆ ಇನ್ನಷ್ಟು ಆಳವಾದ ಗಮನವನ್ನು ಉಂಟುಮಾಡುತ್ತದೆ ಎಂಬುದನ್ನು ತೋರಿಸುತ್ತದೆ. ಅವನ ಕರುಣೆ ಭೇಟಿಯಾಗಿ ರೂಪುಗೊಳ್ಳುತ್ತದೆ; ಅವನ ಭೇಟಿ ಕ್ರಿಯೆಯಾಗಿ ರೂಪುಗೊಳ್ಳುತ್ತದೆ; ಮತ್ತು ಅವನ ಕ್ರಿಯೆ ದೇವರ ರಾಜ್ಯದ ಕಡೆಗೆ ಸೂಚಿಸುತ್ತದೆ. ಸಭೆಗೆ ಇದರ ಅರ್ಥವೇನೆಂದರೆ, ಮೇಲ್ಮೈಯನ್ನು ಮೀರಿ ನೋಡುವ, ನಮ್ಮ ಪರಂಪರೆಗಳು ಮತ್ತು ಪೂರ್ವಗ್ರಹಗಳನ್ನು ಮೀರಿ ಕೇಳುವ ಮತ್ತು ನಮ್ಮ ಸೌಕರ್ಯದ ಗಡಿಗಳನ್ನು ಮೀರಿ ಜನರೊಂದಿಗೆ ನಡೆಯುವ ಆಧ್ಯಾತ್ಮಿಕತೆಯನ್ನು ಪುನಃ ಕಂಡುಕೊಳ್ಳುವುದು. ಪ್ರಾರ್ಥನೆಯು ನಮ್ಮ ಕರುಣೆಯ ಸಾಮರ್ಥ್ಯವನ್ನು ಆಳಗೊಳಿಸಲು, ಶಾಸ್ತ್ರವು ನಮ್ಮ ವಿವೇಚನೆಯನ್ನು ತೀಕ್ಷ್ಣಗೊಳಿಸಲು ಮತ್ತು ನಂಬಿಕೆಯು ನಮ್ಮ ಸಮುದಾಯಗಳ ಜೀವನದಲ್ಲಿ ಜವಾಬ್ದಾರಿಯುತ ಭಾಗವಹಿಸುವಿಕೆಯಾಗಿ ರೂಪುಗೊಳ್ಳಲು ನಾವು ಅವಕಾಶ ನೀಡಬೇಕು. ಬಹುಶಃ ನಾವು ಮುಂದಕ್ಕೆ ಕೊಂಡೊಯ್ಯಬೇಕಾದ ಪ್ರಶ್ನೆ ಕೇವಲ: "ನಾವು ಎಷ್ಟು ಆಧ್ಯಾತ್ಮಿಕರಾಗಿದ್ದೇವೆ?" ಎಂಬುದಲ್ಲ. ಬದಲಾಗಿ:

"ನಮ್ಮ ಆಧ್ಯಾತ್ಮಿಕತೆ ನಮ್ಮನ್ನು ಯಾವ ರೀತಿಯ ಜನರನ್ನಾಗಿ ಮಾಡುತ್ತಿದೆ?" ಎಂಬುದಾಗಿದೆ. ಅದು ನಮ್ಮನ್ನು ದೇವರ ಕಡೆಗೆ ಹೆಚ್ಚು ಗಮನಹರಿಸುವವರನ್ನಾಗಿ, ಮತ್ತೊಬ್ಬರ ಕಡೆಗೆ ಹೆಚ್ಚು ತೆರೆದವರನ್ನಾಗಿ, ದುಃಖದ ಬಗ್ಗೆ ಹೆಚ್ಚು ಸಂವೇದನಾಶೀಲರನ್ನಾಗಿ ಮತ್ತು ಜೀವನ ಹಾಗೂ ಮಾನವ ಘನತೆಯ ಕಡೆಗೆ ಹೆಚ್ಚು ಬದ್ಧರಾದವರನ್ನಾಗಿ ಮಾಡುತ್ತಿದ್ದರೆ, ನಮ್ಮ ಆಧ್ಯಾತ್ಮಿಕತೆ ಕ್ರಿಸ್ತನ ಜೀವಂತ ಸಾಕ್ಷಿಯಾಗಿ ರೂಪುಗೊಳ್ಳುತ್ತಿದೆ. ಇಂತಹ ಅರ್ಥದಲ್ಲಿ, ಇಂದಿನ ಆಧ್ಯಾತ್ಮಿಕತೆ ಎಂದರೆ ಜೀವನದ ಸಂಕೀರ್ಣತೆಯಿಂದ ದೂರವಿರುವ ಒಂದು ಸ್ಥಳವನ್ನು ಹುಡುಕುವುದಲ್ಲ. ಅದರ ಮಧ್ಯೆಯೇ ಕ್ರಿಸ್ತನನ್ನು ನಂಬಿಗಸ್ತಿಕೆಯಿಂದ ಹೇಗೆ ಅನುಸರಿಸಬೇಕು ಎಂಬುದನ್ನು ಕಂಡುಕೊಳ್ಳುವುದಾಗಿದೆ. ತಕ್ಷಣವೇ ಬೆಳೆಯನ್ನು ನೋಡದಿದ್ದರೂ ನಂಬಿಕೆಯಿಂದ ಬೀಜ ಬಿತ್ತುವ ರೈತನಂತೆ, ನಾವು ನ್ಯಾಯ, ಸಂವಾದ, ಕರುಣೆ ಮತ್ತು ಐಕ್ಯಭಾವದ ಬೀಜಗಳನ್ನು ಬಿತ್ತಲು ಕರೆಯಲ್ಪಟ್ಟಿದ್ದೇವೆ. ನಮ್ಮ ಪರಿಶ್ರಮದ ಫಲವನ್ನು ನಾವು ಯಾವಾಗಲೂ ನೋಡದೇ ಇರಬಹುದು. ಆದರೆ ಕೀರ್ತನೆ 126:5 ನಮಗೆ ನೆನಪಿಸುತ್ತದೆ: "ಕಣ್ಣೀರಿನಿಂದ ಬಿತ್ತುವವರು ಹರ್ಷಗಾನ ಮಾಡುತ್ತಾ ಕೊಯ್ಯುವರು." ಆದ್ದರಿಂದ ನಂಬಿಕೆಯಲ್ಲಿ ಬಿತ್ತುವುದು ಮತ್ತು ಸಂತೋಷದಲ್ಲಿ ಕೊಯ್ಯುವುದು ಕೇವಲ ಕೊಯ್ಲಿನ ಹಬ್ಬದ ಒಂದು ವಿಷಯವಲ್ಲ; ಅದು ಇಂದಿನ ನಮ್ಮ ಆಧ್ಯಾತ್ಮಿಕತೆಯನ್ನು ಬದುಕುವ ಒಂದು ಮಾರ್ಗವಾಗಿದೆ. ಜಗತ್ತಿನಲ್ಲಿ ಕ್ರಿಸ್ತನ ಪ್ರೀತಿಯ ಬೀಜಗಳನ್ನು ನಂಬಿಗಸ್ತಿಕೆಯಿಂದ ಬಿತ್ತುತ್ತಾ, ಬೆಳೆಯನ್ನು ದೇವರ ಕೈಗೆ ಒಪ್ಪಿಸುವುದೇ ಇಂದಿನ ಕ್ರೈಸ್ತ ಆಧ್ಯಾತ್ಮಿಕತೆಯ ಕರೆಯಾಗಿದೆ.



ಇಂದಿನ ನಾಯಕತ್ವ

ರೆವ. ಸುಶೀಲ್ ಸುಮಿತ್ರಾ
ಯುಬಿಎಂ ಕ್ರಿಸ್ತ ಕೃಪಾ ಚರ್ಚ್, ಚೆಂಬೂರ್

ನಾಯಕತ್ವದ ಕುರಿತು ಸುಗ್ಗಿ ಕಲಿಸುವ ಪಾಠಗಳು

ಸುಗ್ಗಿಯಲ್ಲಿ ನಮ್ಮನ್ನು ವಿನಮ್ರರನ್ನಾಗಿಸುವ ಏನೋ ಒಂದು ವಿಶೇಷವಾದ ಸಂಗತಿ ಇದೆ.

ಒಂದು ಹೊಲವು ಬಂಗಾರದ ಬಣ್ಣಕ್ಕೆ ತಿರುಗುವ ಬಹಳ ಹಿಂದೆಯೇ, ಯಾರೋ ಒಬ್ಬನು ಕೆಲಸವನ್ನು ಪ್ರಾರಂಭಿಸಿರುತ್ತಾನೆ. ಬೀಜವನ್ನು ಬಿತ್ತಿರುತ್ತಾನೆ, ಮಣ್ಣನ್ನು ಸಿದ್ಧಪಡಿಸಿರುತ್ತಾನೆ, ಕಳೆಗಳನ್ನು ಕಿತ್ತಿರುತ್ತಾನೆ ಮತ್ತು ನೀರನ್ನು ಹೊತ್ತೊಯ್ದಿರುತ್ತಾನೆ. ಈ ಕೆಲಸವು ಯಾವುದೇ ಪ್ರಶಂಸೆ ಇಲ್ಲದೆ, ಯಾರ ಗಮನಕ್ಕೂ ಬಾರದೆ, ಕೊನೆಯಲ್ಲಿ ಬೆಳೆಯು ಹೇಗಿರುತ್ತದೆ ಎಂಬ ನಿರೀಕ್ಷೆಯು ಇಲ್ಲದೆ ನಡೆಯುತ್ತದೆ. ಬಹುಶಃ, ಸೇವಕನ ನಾಯಕತ್ವದ ಅತ್ಯಂತ ಸ್ಪಷ್ಟವಾದ ಚಿತ್ರಣಗಳಲ್ಲಿ ಇದೂ ಒಂದಾಗಿದೆ.

ನಾಯಕತ್ವ ಎಂದರೆ ಮುಂದೆ ನಿಂತು ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಮಾರ್ಗದರ್ಶನ ನೀಡುವುದು ಮತ್ತು ಎಲ್ಲರ ಗಮನಕ್ಕೆ ಬರುವುದು ಎಂದು ನಾವು ಸಾಮಾನ್ಯವಾಗಿ ಭಾವಿಸುತ್ತೇವೆ. ಆದರೆ ಧರ್ಮಶಾಸ್ತ್ರವು ನಮಗೆ ವಿಭಿನ್ನವಾದ ಚಿತ್ರವನ್ನು ನೀಡುತ್ತದೆ. ಅದು ನಮ್ಮನ್ನು ಒಂದು ಹೊಲಕ್ಕೆ ಕರೆದೊಯ್ಯುತ್ತದೆ. ಯೇಸು ಒಂದು ಕೈಪಾವುಡ ಮತ್ತು ನೀರಿನ ಪಾತ್ರೆಯನ್ನು ತೆಗೆದುಕೊಂಡು ಮೊಣಕಾಲೂರಿ ತನ್ನ ಶಿಷ್ಯರ ಪಾದಗಳನ್ನು ತೊಳೆಯುವ ಆ ಕೋಣೆಗೆ ನಮ್ಮನ್ನು ಕರೆದೊಯ್ಯುತ್ತದೆ. ನಂತರ ಆತನು ಹೇಳಿದ ಈ ಮಾತುಗಳನ್ನು ನಮಗೆ ನೀಡುತ್ತದೆ: "ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು." (ಮಾರ್ಕ 10:43)

ಅಂತಹ ನಾಯಕತ್ವದಲ್ಲಿ ಯಾವುದೇ ವೈಭವವಿಲ್ಲ. ಅದು ಸರಳವಾಗಿ ಸೇವೆ ಮಾಡುವ ಮನಸ್ಸು.

ಬೆಳೆಯಲು ಬಿಡುವ ತಾಳ್ಮೆ

ಯಾಕೋಬನು ತಾಳ್ಮೆಯನ್ನು ವಿವರಿಸಲು ರೈತನ ಉದಾಹರಣೆಯನ್ನು ಬಳಸುತ್ತಾನೆ: "ಸಹೋದರರೇ, ಕರ್ತನು ಪ್ರತ್ಯಕ್ಷನಾಗುವ ತನಕ ದೀರ್ಘಶಾಂತಿಯಿಂದಿರಿ. ವ್ಯವಸಾಯಗಾರನನ್ನು ನೋಡಿರಿ; ಅವನು ಭೂಮಿಯ ಬೆಲೆಯುಳ್ಳ ಫಲಕ್ಕಾಗಿ ಕಾದಿದ್ದು ಮುಂಗಾರು ಹಿಂಗಾರು ಮಳೆಗಳು ಬರುವ ತನಕ ದೀರ್ಘಶಾಂತಿಯಿಂದಿರುವನು." (ಯಾಕೋಬ 5:7)

ಒಂದು ಬೀಜ ಬೆಳೆಯುತ್ತಿದೆಯೇ ಎಂದು ನೋಡಲು ರೈತನಿಗೆ ಅದನ್ನು ನೆಲದಿಂದ ಎಳೆದು ನೋಡಲು ಸಾಧ್ಯವಿಲ್ಲ. ಮಳೆಯನ್ನು ಬೇಗನೆ ಬರಿಸುವುದೂ ಅವನಿಂದ ಸಾಧ್ಯವಿಲ್ಲ. ದಿನವಿಡೀ ಹೊಲದ ಮೇಲೆ ನಿಂತು ಫಲಿತಾಂಶಕ್ಕಾಗಿ ಒತ್ತಾಯಿಸಲೂ ಅವನಿಂದ ಸಾಧ್ಯವಿಲ್ಲ.

ಅವನು ಮಾಡಬೇಕಾದದ್ದು ಅದನ್ನು ಆರೈಕೆ ಮಾಡುವುದು. ನೀರು ಹಾಕುವುದು, ಗಮನಿಸುವುದು, ಬೆಳೆಯನ್ನು ಹಾಳುಮಾಡುವ ಸಂಗತಿಗಳನ್ನು ತೆಗೆದುಹಾಕುವುದು ಮತ್ತು ಸಂರಕ್ಷಿಸುವುದು.

ನಾಯಕತ್ವವೂ ಅನೇಕ ಬಾರಿ ಹೀಗೆಯೇ ಇರುತ್ತದೆ.

ನಾವು ಸಭೆಯನ್ನು ಮುನ್ನಡೆಸುತ್ತಿರಲಿ, ಒಂದು ತಂಡವನ್ನು ಮುನ್ನಡೆಸುತ್ತಿರಲಿ, ಕುಟುಂಬವನ್ನು ನಡೆಸುತ್ತಿರಲಿ ಅಥವಾ ಮತ್ತೊಬ್ಬರ ಜೀವನದ ಮೇಲೆ ಪ್ರಭಾವ ಬೀರುತ್ತಿರಲಿ ನಿಜವಾಗಿಯೂ ಮುಖ್ಯವಾದ ಬಹಳಷ್ಟು ಸಂಗತಿಗಳು ತಕ್ಷಣವೇ ಗೋಚರಿಸುವುದಿಲ್ಲ. ಒಂದು ಪ್ರೋತ್ಸಾಹದ ಮಾತು ಫಲ ನೀಡಲು ವರ್ಷಗಳೇ ಬೇಕಾಗಬಹುದು. ಉದಾಹರಣೆಗೆ, ಒಬ್ಬ ಯುವಕ ಅಥವಾ ಯುವತಿಯು ಭಾನುವಾರ ಶಾಲೆಯ ಶಿಕ್ಷಕರಿಂದ ಪಡೆದ ಮಾರ್ಗದರ್ಶನದ ಮೌಲ್ಯವನ್ನು ಬಹಳ ವರ್ಷಗಳ ನಂತರವೇ ಅರಿತುಕೊಳ್ಳಬಹುದು.

ನಾಯಕತ್ವವನ್ನು ತಕ್ಷಣದ ಫಲಿತಾಂಶಗಳಿಂದ ಅಳೆಯಲು ನಾವು ಅನೇಕ ಬಾರಿ ಪ್ರಲೋಭಿತರಾಗುತ್ತೇವೆ. ಆದರೆ ನಾವು ಮಾಡುವ ಅತ್ಯಂತ ಮಹತ್ವದ ಕೆಲವು ಕೆಲಸಗಳಿಗೆ ತಕ್ಷಣದ ಯಶಸ್ಸಿನ ಯಾವುದೇ ಸಾಕ್ಷಿ ಇರುವುದಿಲ್ಲ.

ಆದ್ದರಿಂದ ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನ ಮಾತುಗಳು ನಮಗೆ ಸಮಾಧಾನವನ್ನೂ ಸವಾಲನ್ನೂ ನೀಡುತ್ತವೆ: "ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ. ಯಾಕಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು." (ಗಲಾತ್ಯ 6:9)

ನಾವು ನಿರೀಕ್ಷಿಸುವ ಸಮಯದಲ್ಲೇ ಆಗಬೇಕೆಂದಿಲ್ಲ. ನಾವು ಇನ್ನೂ ಅಲ್ಲಿದ್ದಾಗಲೇ ಅದರ ಫಲವನ್ನು ನೋಡುವೆವು ಎಂಬುದೂ ಖಚಿತವಲ್ಲ. ಅದಕ್ಕೆ ತಾಳ್ಮೆಯೂ ನಂಬಿಕೆಯೂ ಅಗತ್ಯ.

ನಮ್ಮ ಮುಂದಿರುವ ಹೊಲ

ಆದರೆ ಕೊಯ್ಲಿನ ಇನ್ನೊಂದು ಮುಖವೂ ಇದೆ.

ಯೇಸು ತನ್ನ ಶಿಷ್ಯರಿಗೆ ಹೇಳಿದನು: "ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ; ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ." (ಯೋಹಾನ 4:35)

ಅವು ಕೊಯ್ಲಿಗೆ ಸಿದ್ಧವಾಗಿವೆ. ಆ ದಿನವು ಈಗಲೇ ಬಂದಿದೆ.

ಇದು ಮಹತ್ವದ್ದಾಗಿದೆ, ಏಕೆಂದರೆ ನಾಯಕತ್ವವನ್ನು ಮುಂದೂಡಲು ನಾವು ಕೆಲವೊಮ್ಮೆ ಅದನ್ನು ಒಂದು ನೆಪವನ್ನಾಗಿ ಮಾಡಿಕೊಳ್ಳುತ್ತೇವೆ. ನಮಗೆ ಇನ್ನಷ್ಟು ಅನುಭವ ಬಂದಾಗ, ಇನ್ನಷ್ಟು ಅಧಿಕಾರ ದೊರೆತಾಗ, ಇನ್ನಷ್ಟು ಸಮಯ ಸಿಕ್ಕಾಗ ಅಥವಾ ಇನ್ನೂ ಮಹತ್ವದ ಸ್ಥಾನ ದೊರೆತಾಗ ನಾವು ಬದಲಾವಣೆಯನ್ನು ತರಬಹುದು ಎಂದು ಅಂದುಕೊಳ್ಳುತ್ತೇವೆ. ಆದರೆ ನಾಯಕತ್ವವು ಅಪರೂಪವಾಗಿ ಒಂದು ಹುದ್ದೆಯಿಂದ ಆರಂಭವಾಗುತ್ತದೆ. ಅದು ಗಮನಿಸುವುದರಿಂದ ಆರಂಭವಾಗುತ್ತದೆ.

ನಮ್ಮ ಸಭೆಯಲ್ಲಿರುವ ಯಾರಿಗಾದರೂ ಪ್ರೋತ್ಸಾಹದ ಅಗತ್ಯವಿರಬಹುದು, ಒಬ್ಬ ಮಗುವಿಗೆ ತನ್ನ ಮೇಲೆ ನಂಬಿಕೆ ಇಡುವ ಯಾರಾದರೂ ಬೇಕಿರಬಹುದು, ಯಾರೋ ಒಬ್ಬರು ಮೌನವಾಗಿ ಸಭೆಯಿಂದ ದೂರವಾಗಿರಬಹುದು, ಯಾರಿಗಾದರೂ ಸಲಹೆ ನೀಡುವುದಕ್ಕಿಂತ, ಅವರ ಮಾತುಗಳನ್ನು ಕಿವಿಗೊಟ್ಟು ಕೇಳುವ ಒಬ್ಬ ವ್ಯಕ್ತಿ ಬೇಕಿರಬಹುದು.

ನಾವು ನಾಯಕತ್ವದ ಅವಕಾಶಕ್ಕಾಗಿ ಕಾಯಬೇಕಾಗಿಲ್ಲ. ಅನೇಕ ಬಾರಿ ಆ ಅವಕಾಶ ಈಗಾಗಲೇ ನಮ್ಮ ಮುಂದೆ ನಿಂತಿರುತ್ತದೆ.

ಸೇವಕನ ನಾಯಕತ್ವವು ಒಂದು ಸರಳ ಪ್ರಶ್ನೆಯನ್ನು ಕೇಳುತ್ತದೆ: "ದೇವರು ಇಂದು ನನ್ನ ದಾರಿಯಲ್ಲಿ ಯಾರನ್ನು ಇರಿಸಿದ್ದಾನೆ? ಮತ್ತು ನಾನು ಅವರಿಗಾಗಿ ಏನು ಮಾಡಬಹುದು?"

ಕೆಲವೊಮ್ಮೆ ನಾಯಕತ್ವ ಎಂದರೆ, ಇತರರು ಹೋಗಿಬಿಟ್ಟ ನಂತರ ಉಳಿದು ಸಹಾಯ ಮಾಡುವುದು, ಕಷ್ಟಕರವಾದ ಒಂದು ದೂರವಾಣಿ ಕರೆ ಮಾಡುವುದು, ನಾವು ದಣಿದಿದ್ದರೂ ಇತರರ ಮಾತನ್ನು ಕೇಳುವುದು, ಮತ್ತೊಬ್ಬರಿಗೆ ಮತ್ತೊಂದು ಅವಕಾಶ ನೀಡುವುದು, ಯಾರೂ ಗಮನಿಸದ ಒಂದು ಕೆಲಸವನ್ನು ಮೌನವಾಗಿ ಮಾಡುವುದು. ಈ ಕ್ಷಣಗಳು ಎಂದಿಗೂ ನಾಯಕತ್ವದ ಸಾಧನೆಗಳ ಪಟ್ಟಿಯಲ್ಲಿ ಕಾಣಿಸಿಕೊಳ್ಳದಿರಬಹುದು. ಆದರೂ ಅವುಗಳಿಗೆ ಮಹತ್ವವಿದೆ.

ನಾವು ಎಂದಿಗೂ ನೋಡದಿರಬಹುದಾದುದನ್ನು ಬಿತ್ತುವುದು

ನಾಯಕತ್ವದ ಅತ್ಯಂತ ಕಠಿಣ ಪಾಠಗಳಲ್ಲಿ ಒಂದೇನೆಂದರೆ, ನಾವು ಬಿತ್ತಿದ ಬೀಜದ ಬೆಳೆಯನ್ನು ನೋಡುವವರು ನಾವೇ ಆಗಿರಬೇಕೆಂದಿಲ್ಲ.

ಯೇಸು ಹೀಗೆ ಹೇಳಿದನು: "ಒಬ್ಬನು ಬಿತ್ತುತ್ತಾನೆ, ಮತ್ತೊಬ್ಬನು ಕೊಯ್ಯುತ್ತಾನೆ." (ಯೋಹಾನ 4:37)

ಒಬ್ಬ ಶಿಕ್ಷಕನು ತನ್ನ ಒಂದು ಪಾಠದ ಸಂಪೂರ್ಣ ಪರಿಣಾಮವನ್ನು ಎಂದಿಗೂ ತಿಳಿಯದೇ ಇರಬಹುದು. ಒಬ್ಬ ಮಾರ್ಗದರ್ಶಕನು ತಾನು ಪ್ರೋತ್ಸಾಹಿಸಿದ ಯುವಕನು ಮುಂದೆ ಯಾವ ರೀತಿಯ ನಾಯಕನಾಗುತ್ತಾನೆ ಎಂಬುದನ್ನು ನೋಡದೇ ಇರಬಹುದು. ಒಬ್ಬ ತಂದೆ ಅಥವಾ ತಾಯಿ ವರ್ಷಗಳ ಕಾಲ ಮೌಲ್ಯಗಳನ್ನು ಬಿತ್ತುತ್ತಿರಬಹುದು; ಆದರೆ ತಮ್ಮ ಮಗುವಿನ ಮನಸ್ಸಿನಲ್ಲಿ ಯಾವ ನಿರ್ದಿಷ್ಟ ಮಾತು ಉಳಿಯುತ್ತದೆ ಎಂಬುದನ್ನು ಅವರಿಗೆ ತಿಳಿದಿರದೇ ಇರಬಹುದು.

ನಾಯಕತ್ವ ವಹಿಸುವವರಿಗೆ ಇದು ಕಷ್ಟವಾಗಬಹುದು, ಏಕೆಂದರೆ ನಮ್ಮ ಕೆಲಸದ ಫಲಿತಾಂಶವನ್ನು ನಾವು ನೋಡಬೇಕೆಂದು ಸಹಜವಾಗಿ ಬಯಸುತ್ತೇವೆ. ನಮ್ಮ ಪರಿಶ್ರಮಕ್ಕೆ ತಕ್ಕ ಫಲವನ್ನು ಬಯಸುತ್ತೇವೆ. ಆದರೆ ಬಹುಶಃ ಇಲ್ಲಿಯೇ ನಾಯಕತ್ವವು ಸಾಧನೆಯಿಂದ ದೂರವಾಗಿ ನಂಬಿಗಸ್ತಿಕೆಗೆ ತಿರುಗುತ್ತದೆ. ನಾವು ಬಿತ್ತಿದ್ದನ್ನೆಲ್ಲ ಕೊಯ್ಯಲು ನಮ್ಮನ್ನು ಕರೆಯಲಾಗಿಲ್ಲ. ಕೆಲವೊಮ್ಮೆ ನಾವು ಮಾಡಬೇಕಾದದ್ದು ಚೆನ್ನಾಗಿ ಬಿತ್ತುವುದು ಮಾತ್ರ.

ಇಂದು ನಾವು ಅನುಭವಿಸುತ್ತಿರುವ ಆಶೀರ್ವಾದಗಳ ಹಿಂದೆ, ನಮಗಿಂತ ಮೊದಲು ಯಾರೋ ಬಿತ್ತಿದ ಬೀಜವಿದೆ. ನಾವು ಇಂದು ಬಿತ್ತುವ ಬೀಜಗಳಿಂದ ನಮ್ಮ ನಂತರ ಬರುವವರು ಪ್ರಯೋಜನ ಪಡೆಯಬಹುದು. ಇದೇ ಬೆಳೆಯ ಸ್ವಭಾವ. ಅದು ಅಪರೂಪವಾಗಿ ಒಬ್ಬ ವ್ಯಕ್ತಿಯ ಕೆಲಸವಾಗಿರುತ್ತದೆ.

ಮೊಣಕಾಲೂರಲು ಯೋಗ್ಯವಾದ ಹೊಲ

ಹಾಗಾದರೆ ಬೆಳೆಯು ನಮಗೆ ನಾಯಕತ್ವದ ಕುರಿತು ಏನು ಕಲಿಸುತ್ತದೆ?

ನಮ್ಮ ಮುಂದೆ ಇರುವ ಹೊಲದ ಕಡೆ ಗಮನ ಕೊಡಲು ಅದು ನಮಗೆ ಕಲಿಸುತ್ತದೆ. ನಮಗೆ ವಹಿಸಿಕೊಡಲ್ಪಟ್ಟಿರುವುದನ್ನು ಕಾಳಜಿಯಿಂದ ನೋಡಿಕೊಳ್ಳಲು ಕಲಿಸುತ್ತದೆ. ಫಲಿತಾಂಶಗಳು ನಿಧಾನವಾಗಿದ್ದರೂ ಕೆಲಸವನ್ನು ಮುಂದುವರಿಸಲು ಕಲಿಸುತ್ತದೆ. ಬೆಳವಣಿಗೆಯನ್ನು ಯಾವಾಗಲೂ ಆತುರಪಡಿಸಲು ಸಾಧ್ಯವಿಲ್ಲ ಎಂಬುದನ್ನು ಅರಿಯಲು ಕಲಿಸುತ್ತದೆ. ಮತ್ತು, ಅದರ ಕೊಯ್ಲು ಬೇರೆಯವರ ಪಾಲಾಗಬಹುದಾದರೂ ಬೀಜವನ್ನು ಬಿತ್ತಲು ಸಿದ್ಧರಾಗಿರಲು ಕಲಿಸುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ, ಅದು ನಮಗೆ ಕ್ರಿಸ್ತನನ್ನು ನೆನಪಿಸುತ್ತದೆ.

ನಾವು ಕರ್ತನೆಂದು ಕರೆಯುವ ಆತನು ಮೊಣಕಾಲೂರಿದನು. ಆತನು ನೀರಿನ ಪಾತ್ರೆಯನ್ನು ಆರಿಸಿಕೊಂಡನು. ಆತನು ಸೇವೆಯನ್ನು ಆರಂಭಿಸಿದನು. ಕೊನೆಗೆ, ಆತನು ಶಿಲುಬೆಯನ್ನು ಆರಿಸಿಕೊಂಡನು. ನಾಯಕತ್ವವನ್ನು ಬಹಿರಂಗತೆ, ಪ್ರಭಾವ ಮತ್ತು ಅಧಿಕಾರದೊಂದಿಗೆ ಸಮೀಕರಿಸುವ ಈ ಜಗತ್ತಿಗೆ ಇದು ಕಠಿಣ ಮಾದರಿ. ಆದರೂ ಧರ್ಮಶಾಸ್ತ್ರವು ನಮ್ಮ ಮುಂದೆ ಇಡುವ ನಾಯಕತ್ವದ ಮಾದರಿ ಇದೇ.

ಬಹುಶಃ, ಇಂದು ನಾಯಕತ್ವ ವಹಿಸುವುದೆಂದರೆ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಹೊಂದಿರುವುದು ಅಥವಾ ಫಲಿತಾಂಶದ ಬಗ್ಗೆ ಸಂಪೂರ್ಣ ಖಚಿತವಾಗಿರುವುದಲ್ಲ. ನಮಗೆ ನೀಡಲ್ಪಟ್ಟಿರುವ ಹೊಲದಲ್ಲಿ ನಂಬಿಗಸ್ತರಾಗಿರುವುದು ಅಷ್ಟೇ.

ಅಲ್ಲಿ ಮಾಡಲು ಕೆಲಸವಿದೆ.

ಒಂದು ಬೀಜ ಬಿತ್ತಬೇಕಿದೆ, ಒಂದು ಜೀವನವನ್ನು ಪ್ರೋತ್ಸಾಹಿಸಬೇಕಿದೆ, ಒಂದು ಕಳೆಯನ್ನು ಕೀಳಬೇಕಿದೆ, ಒಬ್ಬ ವ್ಯಕ್ತಿಯನ್ನು ಗಮನಿಸಬೇಕಿದೆ, ಒಂದು ಕೆಲಸವನ್ನು ಉತ್ತಮವಾಗಿ ಮಾಡಬೇಕಿದೆ.

ಮತ್ತು, ನಮ್ಮ ಕಣ್ಣಿಗೆ ಕಾಣದ ಯಾವುದೋ ಸ್ಥಳದಲ್ಲಿ, ಒಂದು ಬೆಳೆಯು ರೂಪುಗೊಳ್ಳುತ್ತಿದೆ.

"ನೀವು ಏನು ಮಾಡಿದರೂ ಅದನ್ನು ಪೂರ್ಣ ಹೃದಯದಿಂದ ಮಾಡಿರಿ; ಅದು ಕರ್ತನಿಗಾಗಿಯೇ ಮಾಡುವುದೆಂದು ತಿಳಿದುಕೊಳ್ಳಿರಿ." (ಕೊಲೊಸ್ಸೆಯವರಿಗೆ 3:23)



ಮಕಾರಿಯೋಸ್

ರೆವ. ರಾಬಿನ್ ಗಾರ್ಜರ್
ಇಸಿಐ ಚರ್ಚ್, ತಲೋಜಾ, ನವಿ ಮುಂಬೈ

ಮಕಾರಿಯೋಸ್: ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು

ನಾವೆಲ್ಲರೂ ಆಶೀರ್ವಾದಿತವಾದ ಜೀವನವನ್ನು ನಡೆಸಲು ಬಯಸುತ್ತೇವೆ. ಅನೇಕ ಜನರಿಗೆ ಆಶೀರ್ವಾದ ಎಂದರೆ ಆರ್ಥಿಕ ಭದ್ರತೆ, ಲೋಕದ ಸಮೃದ್ಧಿ, ಅರ್ಥಪೂರ್ಣ ಸಂಬಂಧಗಳು, ಸಾಮಾಜಿಕ ಪ್ರಭಾವ, ಗೌರವಾನ್ವಿತ ಸ್ಥಾನಮಾನ ಅಥವಾ ಆರಾಮದಾಯಕ ಜೀವನ ಎಂಬುದಾಗಿ ಅರ್ಥೈಸಿಕೊಂಡಿದ್ದಾರೆ.

ಆದರೆ "ಆಶೀರ್ವಾದಿತ ಜೀವನ"ದ ಕುರಿತು ನಮ್ಮ ಅರ್ಥವು ದೇವರ ಅರ್ಥಕ್ಕಿಂತ ವಿಭಿನ್ನವಾಗಿದೆಯೋ? ನಿಜವಾಗಿಯೂ ಆಶೀರ್ವಾದಿತ ಜೀವನ ಎಂದರೆ ಏನು?

ಇದಕ್ಕೆ ಅತ್ಯಂತ ಸ್ಪಷ್ಟವಾದ ಉತ್ತರಗಳಲ್ಲಿ ಒಂದನ್ನು ಮತ್ತಾಯ 5:3 12ರಲ್ಲಿ ದಾಖಲಿಸಿರುವ ಅಷ್ಟಮಂಗಳ ವಾಕ್ಯಗಳಲ್ಲಿ (Beatitudes) ಕಾಣಬಹುದು. ಯೇಸು ಅನೇಕ ಬಾರಿ "ಮಕಾರಿಯೋಸ್" (μακάριος) ಎಂಬ ಗ್ರೀಕ್ ಪದವನ್ನು ಉಪಯೋಗಿಸಿದ್ದಾರೆ. ಇದನ್ನು ಸಾಮಾನ್ಯವಾಗಿ "ಧನ್ಯರು" ಅಥವಾ "ಆಶೀರ್ವಾದಿತರು" ಎಂದು ಅನುವಾದಿಸಲಾಗಿದೆ. ಈ ಪದವು ಆಶೀರ್ವಾದಿತ, ದೇವರ ಕೃಪೆಗೆ ಪಾತ್ರರಾದ ಅಥವಾ ಆಳವಾದ ಅರ್ಥದಲ್ಲಿ ನಿಜವಾಗಿಯೂ ಭಾಗ್ಯವಂತರಾದ ಸ್ಥಿತಿಯನ್ನು ಸೂಚಿಸುತ್ತದೆ.

ಮುಖ್ಯವಾಗಿ, ಮಕಾರಿಯೋಸ್ ಎಂಬುದು ತಾತ್ಕಾಲಿಕವಾದ ಭಾವನಾತ್ಮಕ ಸಂತೋಷವನ್ನು ಮಾತ್ರ ವಿವರಿಸುವ ಪದವಲ್ಲ. ಬದಲಾಗಿ, ದೇವರಿಗೆ ಸೇರಿದವನಾಗಿ, ಆತನ ಕೃಪೆ ಮತ್ತು ಪ್ರಸನ್ನತೆಯ ಅಡಿಯಲ್ಲಿ ಜೀವಿಸುವ ವ್ಯಕ್ತಿಯ ಆಶೀರ್ವಾದಿತ ಸ್ಥಿತಿಯನ್ನು ಇದು ಸೂಚಿಸುತ್ತದೆ.

ಲೋಕವು ಸಾಮಾನ್ಯವಾಗಿ ನಾವು ಹೊಂದಿರುವ ಆಸ್ತಿಪಾಸ್ತಿಗಳು, ನಾವು ಹೊಂದಿರುವ ಸ್ಥಾನಮಾನ, ನಮಗೆ ಪರಿಚಯವಿರುವ ಜನರು ಮತ್ತು ನಾವು ಅನುಭವಿಸುವ ಸೌಕರ್ಯಗಳ ಆಧಾರದ ಮೇಲೆ ಆಶೀರ್ವಾದವನ್ನು ಅಳೆಯುತ್ತದೆ. ಆದರೆ ಯೇಸು ಅದನ್ನು ವಿಭಿನ್ನವಾಗಿ ಅಳೆಯುತ್ತಾನೆ.

ಯೇಸು ಹೀಗೆ ಘೋಷಿಸುತ್ತಾನೆ: "ಆತ್ಮದಲ್ಲಿ ಬಡವರಾಗಿರುವವರು ಧನ್ಯರು," "ದುಃಖಪಡುವವರು ಧನ್ಯರು," "ಶಾಂತರು ಧನ್ಯರು," "ನೀತಿಗೆ ಹಸಿದು ಬಾಯಾರುವವರು ಧನ್ಯರು." ನೀತಿಯ ನಿಮಿತ್ತವಾಗಿ ಹಿಂಸೆ ತಾಳಿಕೊಳ್ಳುವವರನ್ನು ಯೇಸು ಧನ್ಯರೆಂದು ಕರೆಯುತ್ತಾನೆ.

ಇಲ್ಲಿ ಗಮನ ಸೆಳೆಯುವ ಸಂಗತಿಯೆಂದರೆ, ಲೋಕದ ದೃಷ್ಟಿಯಲ್ಲಿ ನಿರ್ಗತಿಕರು, ಸಮಾಜದ ಅಂಚಿಗೆ ತಳ್ಳಲ್ಪಟ್ಟವರೆಂದು ಕಾಣುವವರನ್ನೇ ಯೇಸು ಮಕಾರಿಯೋಸ್ ಎಂದು ಕರೆಯುತ್ತಾನೆ ಆತ್ಮದಲ್ಲಿ ಬಡವರು, ದುಃಖಿಸುವವರು, ಶಾಂತರು, ನೀತಿಗಾಗಿ ಹಸಿದು ಬಾಯಾರುವವರು ಮತ್ತು ಹಿಂಸೆಯನ್ನು ತಾಳಿಕೊಳ್ಳುವರು.

ಏಕೆ?

ಯಾಕೆಂದರೆ ನೋವು ಮತ್ತು ಕಷ್ಟಕರ ಪರಿಸ್ಥಿತಿಗಳೇ ಸ್ವತಃ ಆಶೀರ್ವಾದಗಳೆಂದು ಯೇಸು ಬೋಧಿಸುತ್ತಿಲ್ಲ. ಬದಲಾಗಿ, ನಿಜವಾದ ಆಶೀರ್ವಾದವು ಹೊರಗಿನ ಪರಿಸ್ಥಿತಿಗಳಿಂದ ನಿರ್ಧರಿಸಲ್ಪಡುವುದಿಲ್ಲ ಎಂಬುದನ್ನು ಆತನು ಪ್ರಕಟಿಸುತ್ತಾನೆ.

ಆತ್ಮದಲ್ಲಿ ಬಡವರು ಪರಲೋಕರಾಜ್ಯವನ್ನು ಹೊಂದಿದ್ದಾರೆ; ದುಃಖಿಸುವವರು ಸಮಾಧಾನವನ್ನು ಹೊಂದುವರು; ಶಾಂತರು ಭೂಮಿಗೆ ಭಾಗ್ಯರಾಗುವರು; ನೀತಿಗಾಗಿ ಹಸಿದು ಬಾಯಾರುವವರು ತೃಪ್ತರಾಗುವರು.

ದೇವರಿಗೆ ಸೇರಿದ ವ್ಯಕ್ತಿಯು ತನ್ನ ಪರಿಸ್ಥಿತಿಗಳು ಆಶೀರ್ವಾದಿತವಾಗಿರುವಂತೆ ಕಾಣದಿದ್ದರೂ ಸಹ ನಿಜವಾಗಿಯೂ ಆಶೀರ್ವಾದಿತನಾಗಿದ್ದಾನೆ.

ಇಂತಹ ನಂಬಿಕೆಯ ಸುಂದರವಾದ ಚಿತ್ರಣವನ್ನು ದೇವಾಲಯದ ಕಾಣಿಕೆಯ ಪೆಟ್ಟಿಗೆಯಲ್ಲಿ ಕಾಣಿಕೆ ಹಾಕಿದ ಬಡ ವಿಧವೆಯ ಘಟನೆಯಲ್ಲಿ ನೋಡಬಹುದು. ಈ ಘಟನೆ ಮಾರ್ಕ 12:41 44 ಮತ್ತು ಲೂಕ 21:1 4ರಲ್ಲಿ ದಾಖಲಾಗಿದೆ.

ಯೇಸು ದೇವಾಲಯದ ಕಾಣಿಕೆ ಪೆಟ್ಟಿಗೆಯಲ್ಲಿ ಜನರು ಕಾಣಿಕೆಗಳನ್ನು ಹಾಕುವುದನ್ನು ಗಮನಿಸುತ್ತಿದ್ದನು. ಅನೇಕ ಶ್ರೀಮಂತರು ದೊಡ್ಡ ಮೊತ್ತದ ಹಣವನ್ನು ಕಾಣಿಕೆಯಾಗಿ ಹಾಕಿದರು. ಆಗ ಒಬ್ಬ ಬಡ ವಿಧವೆ ಬಂದು ಎರಡು ಚಿಕ್ಕ ತಾಮ್ರದ ನಾಣ್ಯಗಳನ್ನು ಹಾಕಿದಳು.

ಆಗ ಯೇಸು ತನ್ನ ಶಿಷ್ಯರಿಗೆ, ಈ ವಿಧವೆಯು ಉಳಿದ ಎಲ್ಲರಿಗಿಂತಲೂ ಹೆಚ್ಚು ಹಾಕಿದ್ದಾಳೆ ಎಂದು ಹೇಳಿದನು. ಏಕೆಂದರೆ ಇತರರು ತಮ್ಮ ಸಮೃದ್ಧಿಯಲ್ಲಿ ಉಳಿದದ್ದನ್ನು ಕೊಟ್ಟರು; ಆದರೆ ಆಕೆ ತನ್ನ ಬಡತನದಲ್ಲಿಯೇ ತನ್ನ ಜೀವನೋಪಾಯಕ್ಕೆ ಇದ್ದುದನ್ನೆಲ್ಲಾ ಕೊಟ್ಟಳು.

ಆಕೆಯ ಕಾಣಿಕೆಯ ಮೊತ್ತವು ಚಿಕ್ಕದಾಗಿತ್ತು; ಆದರೆ ಆಕೆ ಮಾಡಿದ ತ್ಯಾಗವು ಅಪಾರವಾಗಿತ್ತು. ಯೇಸು ಕಾಣಿಕೆಯ ಮೊತ್ತವನ್ನು ಮಾತ್ರ ನೋಡಲಿಲ್ಲ. ಅದರ ಹಿಂದೆ ಇದ್ದ ಹೃದಯ, ತ್ಯಾಗ ಮತ್ತು ದೇವರ ಮೇಲಿನ ನಂಬಿಕೆಯನ್ನು ನೋಡಿದನು.

ಆ ಬಡ ವಿಧವೆ ನಮಗೆ ಒಂದು ಮಹತ್ವವಾದ ಸತ್ಯವನ್ನು ನೆನಪಿಸುತ್ತದೆ: ದೇವರು ನಮ್ಮ ನಂಬಿಗಸ್ತಿಕೆಯನ್ನು ಕೇವಲ ನಾವು ಹೊಂದಿರುವ ಅಥವಾ ಕೊಡುವ ವಸ್ತುಗಳ ಪ್ರಮಾಣದಿಂದ ಅಳೆಯುವುದಿಲ್ಲ. ಮಾನವನ ದೃಷ್ಟಿಯಲ್ಲಿ ಅಲ್ಪವಾಗಿ ಕಾಣುವ ಸಂಗತಿಯೂ ದೇವರಿಗೆ ಸಮರ್ಪಿಸಲ್ಪಟ್ಟಾಗ ಮಹತ್ವಪೂರ್ಣವಾಗಬಹುದು.

ಇಲ್ಲಿಯೇ ನಂಬಿಕೆಯಲ್ಲಿ ಬಿತ್ತುವುದರ ನಿಜವಾದ ಅರ್ಥವು ಸ್ಪಷ್ಟವಾಗುತ್ತದೆ.

ನಂಬಿಕೆಯಲ್ಲಿ ಬಿತ್ತುವುದು ಎಂದರೆ, ದೇವರೊಂದಿಗೆ ಒಂದು ವ್ಯವಹಾರ ಮಾಡುವಂತೆ ದೇವರಿಗೆ ಕೊಡುವುದು ಎಂದಲ್ಲ ಅಂದರೆ, ಪ್ರತಿಯಾಗಿ ಭೌತಿಕ ಸಮೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ದೇವರಿಗೆ ಏನನ್ನಾದರೂ ಕೊಡುವುದಲ್ಲ. ಬೈಬಲಿನ ನಂಬಿಕೆಯು ದೇವರನ್ನು ನಮ್ಮ ಚಿತ್ತದಂತೆ ನಡೆಸಿಕೊಳ್ಳುವ ಪ್ರಯತ್ನವಲ್ಲ.

ಬದಲಾಗಿ, ನಂಬಿಕೆಯಲ್ಲಿ ಬಿತ್ತುವುದು ಎಂದರೆ, "ಕರ್ತನೇ, ನನ್ನಲ್ಲಿರುವುದೆಲ್ಲವೂ ನಿನ್ನದೇ. ನನ್ನ ಸಂಪತ್ತು, ನನ್ನ ಭವಿಷ್ಯ, ನನ್ನ ಕುಟುಂಬ, ನನ್ನ ಸೇವೆ, ನನಗೆ ದೊರೆಯುವ ಅವಕಾಶಗಳು ಮತ್ತು ನನಗೆ ತಿಳಿಯದಿರುವ ಅನಿಶ್ಚಿತತೆಗಳನ್ನೂ ಸಹ ನಿನಗೆ ಒಪ್ಪಿಸುತ್ತೇನೆ. ನಿನ್ನನ್ನು ನಾನು ನಂಬುತ್ತೇನೆ" ಎಂದು ಹೇಳುವುದಾಗಿದೆ.

ನಾವು ದೇವರಿಗೆ ವಿಧೇಯರಾಗುವಾಗಲೆಲ್ಲಾ, ಅದರ ಫಲವನ್ನು ತಕ್ಷಣವೇ ನೋಡಲು ಸಾಧ್ಯವಾಗದಿದ್ದರೂ, ನಂಬಿಗಸ್ತಿಕೆಯಿಂದ ನಡೆಯುವಾಗ ನಾವು ಬಿತ್ತುತ್ತೇವೆ.

ಪೌಲನು ನಮಗೆ ನೆನಪಿಸುವಂತೆ, "ಮನುಷ್ಯನು ಏನನ್ನು ಬಿತ್ತುತ್ತಾನೋ ಅದನ್ನೇ ಕೊಯ್ಯುವನು" (ಗಲಾತ್ಯರಿಗೆ 6:7). ಹಾಗೆಯೇ, ಒಳ್ಳೆಯದನ್ನು ಮಾಡುವುದರಲ್ಲಿ ಬೇಸರಗೊಳ್ಳದೆ ಇರೋಣ ಎಂದು ಆತನು ಪ್ರೋತ್ಸಾಹಿಸುತ್ತಾನೆ; ಯಾಕಂದರೆ "ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಕೊಯ್ಯುವೆವು" (ಗಲಾತ್ಯರಿಗೆ 6:9).

ದೇವರು ವಾಗ್ದಾನ ಮಾಡುವ ಬೆಳೆ ಎಂದರೆ ಅನಿವಾರ್ಯವಾಗಿ ಭೌತಿಕ ಸಂಪತ್ತು ಅಥವಾ ಐಹಿಕ ಸಮೃದ್ಧಿಯೇ ಆಗಿರಬೇಕೆಂದಿಲ್ಲ. ಕೆಲವೊಮ್ಮೆ ಆ ಬೆಳೆಯು ಬದಲಾಗಿರುವ ಜೀವನಗಳಾಗಿರಬಹುದು; ಆತ್ಮಿಕ ಪರಿಪಕ್ವತೆಯಾಗಿರಬಹುದು; ಬಲಗೊಂಡ ನಂಬಿಕೆಯಾಗಿರಬಹುದು; ಫಲಪ್ರದವಾದ ಸೇವೆಯಾಗಿರಬಹುದು; ಅಥವಾ ನಿತ್ಯವಾದ ಪ್ರತಿಫಲವಾಗಿರಬಹುದು. ನಂಬಿಗಸ್ತ ವಿಧೇಯತೆಯಿಂದ ಮಾಡಿದ ಯಾವುದನ್ನೂ ದೇವರು ವ್ಯರ್ಥವಾಗಲು ಬಿಡುವುದಿಲ್ಲ.

ಆದ್ದರಿಂದ, ನಮಗೆ ಸುಖಕರವಾದ ಜೀವನ ಖಚಿತವೆಂಬ ಕಾರಣಕ್ಕಾಗಿ ನಾವು ಬಿತ್ತುವುದಿಲ್ಲ; ದೇವರು ನಮ್ಮ ನಂಬಿಕೆಗೆ ಯೋಗ್ಯನಾಗಿರುವುದರಿಂದ ನಾವು ಬಿತ್ತುತ್ತೇವೆ. ದೇವರ ಕೃಪೆಯನ್ನು ಪಡೆದುಕೊಳ್ಳುವುದಕ್ಕಾಗಿ ನಾವು ಕೊಡುವುದಿಲ್ಲ; ಈಗಾಗಲೇ ಆತನ ಕೃಪೆಯನ್ನು ಪಡೆದಿರುವುದರಿಂದ ನಾವು ಕೊಡುತ್ತೇವೆ.

ಲೋಕವು ಬೀಜದ ಪ್ರಮಾಣವನ್ನು ಅಳೆಯಬಹುದು; ಆದರೆ ದೇವರು ಅದನ್ನು ಬಿತ್ತಲ್ಪಡುವಾಗ ಇರುವ ನಂಬಿಕೆಯನ್ನು ನೋಡುತ್ತಾನೆ. ಲೋಕವು ಒಂದು ಸಣ್ಣ ಕಾಣಿಕೆಯನ್ನು ನೋಡಬಹುದು; ಆದರೆ ದೇವರು ಸಂಪೂರ್ಣವಾಗಿ ಸಮರ್ಪಿತವಾದ ಹೃದಯವನ್ನು ನೋಡುತ್ತಾನೆ.

ಆದ್ದರಿಂದ, ನಿಜವಾದ ಮಕಾರಿಯೋಸ್ ವ್ಯಕ್ತಿ ಎಂದರೆ ಅತ್ಯಧಿಕವಾದದ್ದನ್ನು ಹೊಂದಿರುವವನು, ಅತ್ಯಧಿಕ ಸಂಪತ್ತನ್ನು ಪಡೆದಿರುವವನು ಅಥವಾ ಅತ್ಯಂತ ಸುಲಭವಾದ ಜೀವನವನ್ನು ಅನುಭವಿಸುವವನು ಎಂದೇನಲ್ಲ.

ನಿಜವಾಗಿ ಆಶೀರ್ವದಿತನಾದ ವ್ಯಕ್ತಿ ಎಂದರೆ ದೇವರಿಗೆ ಸೇರಿದವನು, ಆತನನ್ನು ನಂಬಿಗಸ್ತಿಕೆಯಿಂದ ವಿಶ್ವಾಸಿಸುವವನು ಮತ್ತು ಬೆಳೆಯನ್ನು ಇನ್ನೂ ಕಾಣಿಸದಿದ್ದರೂ ವಿಧೇಯತೆಯಿಂದ ಬಿತ್ತುವುದನ್ನು ಮುಂದುವರಿಸುವವನು.

ಪರಿಸ್ಥಿತಿಗಳು ನಮಗೆ ಅನುಕೂಲಕರವಾಗಿಲ್ಲವೆಂದು ತೋರುವಾಗ, ನಾವು ಇದನ್ನು ನೆನಪಿಸಿಕೊಳ್ಳೋಣ: ಆಶೀರ್ವಾದವು ನಾವು ಕೊನೆಗೆ ಪಡೆಯುವುದರಲ್ಲಿ ಮಾತ್ರ ಇರುವುದಿಲ್ಲ; ದೇವರಿಗೆ ಸೇರಿದವರಾಗಿರುವುದೇ ನಿಜವಾದ ಆಶೀರ್ವಾದ.

ಕ್ರಿಸ್ತನಿಗೆ ಸೇರಿದವನು ನಂಬಿಕೆಯಿಂದ ಬಿತ್ತಬಹುದು, ನಿರೀಕ್ಷೆಯಿಂದ ಸಹಿಸಿಕೊಳ್ಳಬಹುದು ಮತ್ತು ಕೊನೆಯಲ್ಲಿ ಸಂತೋಷದಿಂದ ಕೊಯ್ಯಬಹುದು.



ಪರೂಸಿಯಾ

ರೆವ. ಗಾಡ್‌ಫ್ರೇ ಸೋನ್ಸ್
ಯುಬಿಎಂ ಸುಶಾಂತಿ ಚರ್ಚ್, ಬೈಕುಲ್ಲಾ

ಪರೂಸಿಯಾ (Παρουσία)

ಗ್ರೀಕ್ ಪದವಾದ παρουσία (Parousia) ಎಂಬುದು "ಬರುವುದು" (Coming) ಅಥವಾ "ಸನ್ನಿಧಿ/ಉಪಸ್ಥಿತಿ" (Presence) ಹಾಗೂ "ಆಗಮನ/ಆವಿರ್ಭಾವ" (Advent/Arrival) ಎಂಬ ಅರ್ಥಗಳನ್ನು ಹೊಂದಿದೆ.

ಆದಿಕಾಲದ ಕ್ರೈಸ್ತ ಬರಹಗಳು, ಕ್ರಿಸ್ತನು ನರಾವತಾರಿಯಾಗಿ ಮತ್ತೆ ಬರುವನು ಎಂಬ ನಂಬಿಕೆಯು ಸಾರ್ವತ್ರಿಕವೂ ಮತ್ತು ಕ್ರೈಸ್ತ ನಂಬಿಕೆಯ ಮೂಲಭೂತ ಅಂಶವೂ ಆಗಿತ್ತು ಎಂಬುದಕ್ಕೆ ಸಾಕ್ಷಿಯಾಗಿವೆ. ಬಹುತೇಕ ಕ್ರೈಸ್ತರು ಅಂತಿಮ ಸುಗ್ಗಿಯನ್ನು (Harvest) ಯೇಸು ಕ್ರಿಸ್ತನ ಭವಿಷ್ಯದ ಪುನರಾಗಮನದ ಕಾಲವೆಂದು ನೋಡುತ್ತಾರೆ.

ಬೈಬಲಿನಲ್ಲಿ "ಸುಗ್ಗಿ" (Harvest) ಎಂಬುದು ಯೇಸು ಬರುವ ಯುಗದ ಸಮಾಪ್ತಿಯ ಒಂದು ಚಿತ್ರಣವಾಗಿದೆ.

ಕ್ರಿಸ್ತನ ಬರುವಿಕೆಯನ್ನು (Παρουσία) ಬಿತ್ತುವುದು, ಕೊಯ್ಯುವುದು ಮತ್ತು ನ್ಯಾಯತೀರ್ಪು ಎಂಬ ಕೃಷಿ ರೂಪಕಗಳ ಮೂಲಕ ಅತ್ಯಂತ ಸ್ಪಷ್ಟವಾಗಿ ವಿವರಿಸಲಾಗಿದೆ. ಇವು ಮುಖ್ಯವಾಗಿ ಸುವಾರ್ತೆಗಳು ಮತ್ತು ಪ್ರಕಟನೆಯ ಗ್ರಂಥದಲ್ಲಿ ಕಂಡುಬರುತ್ತವೆ.

ಗೋಧಿ ಮತ್ತು ಕಳೆಗಳ ದೃಷ್ಟಾಂತ

ಯೇಸು ಮತ್ತಾಯ 13:30ರಲ್ಲಿ ಕಳೆಗಳ ದೃಷ್ಟಾಂತದಲ್ಲಿ ಹೀಗೆ ಹೇಳಿದನು: "ಸುಗ್ಗೀಕಾಲದ ತನಕ ಎರಡೂ ಕೂಡ ಬೆಳೆಯಲಿ; ಸುಗ್ಗೀಕಾಲದಲ್ಲಿ ನಾನು ಕೊಯ್ಯುವವರಿಗೆ – ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡುವದಕ್ಕೆ ಹೊರೆಕಟ್ಟಿಹಾಕಿ, ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು."

39ನೇ ವಚನದಲ್ಲಿ, ಕೊಯ್ಲು ಯುಗದ ಅಂತ್ಯ, ಮತ್ತು ಕೊಯ್ಯುವವರು ದೇವದೂತರು ಎಂದು ಯೇಸು ವಿವರಿಸುತ್ತಾನೆ.

40ನೇ ವಚನದಲ್ಲಿ: "ಹೀಗಿರಲಾಗಿ ಹೇಗೆ ಹಣಜಿಯನ್ನು ಆರಿಸಿತೆಗೆದು ಸುಟ್ಟುಬಿಡುತ್ತಾರೋ, ಹಾಗೆಯೇ ಯುಗದ ಸಮಾಪ್ತಿಯಲ್ಲಿ ನಡೆಯುವದು."

ಕ್ರಿಸ್ತನ ಪುನರಾಗಮನದ ಸಮಯದಲ್ಲಿ ದೇವದೂತರು ನೀತಿವಂತರನ್ನು ಅನೀತಿವಂತರಿಂದ ಪ್ರತ್ಯೇಕಿಸುವರು.

ಯೇಸು ಅಂತಿಮ ನ್ಯಾಯತೀರ್ಪನ್ನು ಸುಗ್ಗಿಯ ಕಾಲವೆಂದು ವಿವರಿಸುತ್ತಾನೆ ಆ ಸಮಯದಲ್ಲಿ ಲೋಕವು ಸಂಪೂರ್ಣವಾಗಿ ಪಕ್ವವಾಗಿರುತ್ತದೆ.

ಕೆಲವೊಮ್ಮೆ ಯೇಸು ಬಿತ್ತುವವನ ದೃಷ್ಟಾಂತದಲ್ಲಿ ಪ್ರಸ್ತುತ ಕೊಯ್ಲಿನ ಬಗ್ಗೆಯೂ ಮಾತನಾಡಿದನು. ಅಂದರೆ, ದೇವರ ಸಂದೇಶವನ್ನು

ಕೇಳಲು ಇಲ್ಲಿಯೇ, ಈಗಲೇ ಸಿದ್ಧರಾಗಿರುವ ಜನರ ಬಗ್ಗೆ ಆತನು ಹೇಳುತ್ತಿದ್ದನು.

ಕಳೆಗಳ ದೃಷ್ಟಾಂತ ನಮಗೆ ಕಲಿಸುವ ಪಾಠಗಳು

ಈ ದೃಷ್ಟಾಂತವು ಲೋಕದಲ್ಲಿ ಯಾವಾಗಲೂ ಒಂದು ವೈರಿಯಾದ ಶಕ್ತಿ ಇರುತ್ತದೆ ಮತ್ತು ಅದು ಒಳ್ಳೆಯ ಬೀಜವನ್ನು ನಾಶಮಾಡಲು ಅವಕಾಶಕ್ಕಾಗಿ ಕಾಯುತ್ತಿರುತ್ತದೆ ಎಂಬುದನ್ನು ಕಲಿಸುತ್ತದೆ.

ಆದ್ದರಿಂದ ನಾವು ಸದಾ ಎಚ್ಚರಿಕೆಯಿಂದಿರಬೇಕು.

ಇದು ಮತ್ತೊಂದು ಸತ್ಯವನ್ನೂ ಕಲಿಸುತ್ತದೆ: ಒಳ್ಳೆಯವರು ಯಾರು? ಕೆಟ್ಟವರು ಯಾರು? ಎಂಬುದನ್ನು ಗುರುತಿಸುವುದು ಯಾವಾಗಲೂ ಸುಲಭವಲ್ಲ. ಕೆಲವರು ಹೊರಗೆ ಒಳ್ಳೆಯವರಂತೆ ಕಾಣಬಹುದು, ಆದರೆ ವಾಸ್ತವದಲ್ಲಿ ಕೆಟ್ಟವರಾಗಿರಬಹುದು.

ಆದ್ದರಿಂದ ನಾವು ಇತರರ ಬಗ್ಗೆ ತಕ್ಷಣ ತೀರ್ಪು ನೀಡಬಾರದು. ತೀರ್ಪು ನೀಡುವ ಅಂತಿಮ ಹಕ್ಕು ದೇವರಿಗೆ ಮಾತ್ರ ಇದೆ.

ಅಂತಿಮವಾಗಿ, ಈ ದೃಷ್ಟಾಂತವು ಎರಡು ವಿಷಯಗಳನ್ನು ತಿಳಿಸುತ್ತದೆ:

(ಅ) ಜನರನ್ನು ತೀರ್ಪು ಮಾಡಬಾರದು ಎಂಬ ಎಚ್ಚರಿಕೆ.

(ಆ) ಅಂತಿಮವಾಗಿ ದೇವರ ನ್ಯಾಯತೀರ್ಪು ಖಂಡಿತವಾಗಿ ಬರುತ್ತದೆ ಎಂಬ ಎಚ್ಚರಿಕೆ.

ಕ್ರಿಸ್ತನ ಬರುವಿಕೆಯ ಕುರಿತು ಮತ್ತಾಯ 24:3ರಲ್ಲಿ ಯೇಸು ಎಣ್ಣೆಯ ಮರಗಳ ಗುಡ್ಡದ ಮೇಲೆ ಕುಳಿತಿದ್ದಾಗ, ಶಿಷ್ಯರು ಆತನ ಬಳಿಗೆ ಪ್ರತ್ಯೇಕವಾಗಿ ಬಂದು ಕೇಳಿದರು: "ಇವು ಯಾವಾಗ ಸಂಭವಿಸುವವು? ಮತ್ತು ನಿನ್ನ ಬರುವಿಕೆಯ ಹಾಗೂ ಯುಗದ ಅಂತ್ಯದ ಸೂಚನೆ ಏನು?"

ಯೇಸು ಮತ್ತಾಯ 24:27ರಲ್ಲಿ ಹೀಗೆ ವಿವರಿಸಿದನು: "ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು."

37ನೇ ವಚನ: "ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವದು."

39ನೇ ವಚನ: "ಪ್ರಳಯದ ನೀರು ಬಂದು ಎಲ್ಲರನ್ನು ಬಡುಕೊಂಡುಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ. ಅದರಂತೆ ಮನುಷ್ಯಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವದು."

ಇಲ್ಲಿ ಯೇಸು ತನ್ನ ಎರಡನೆಯ ಬರುವಿಕೆಯ ಕುರಿತು ನೇರವಾಗಿ ಮಾತನಾಡುತ್ತಾನೆ. ಹೊಸ ಒಡಂಬಡಿಕೆಯಲ್ಲಿ "Second Coming" ಎಂಬ ಪದವನ್ನು ನೇರವಾಗಿ ಬಳಸುವುದಿಲ್ಲ. ಬದಲಾಗಿ, ಕ್ರಿಸ್ತನು ಮಹಿಮೆಯಲ್ಲಿ ಹಿಂದಿರುಗುವುದನ್ನು ವಿವರಿಸಲು ಬಳಸುವ ಆಸಕ್ತಿದಾಯಕ ಪದವೇ "ಪರೂಸಿಯಾ Παρουσία." ಸಾರಾಂಶ ಸುವಾರ್ತೆಗಳಾದ ಮತ್ತಾಯ, ಮಾರ್ಕ ಮತ್ತು ಲೂಕದಲ್ಲಿ ಈ ಪದವು ಮುಖ್ಯವಾಗಿ ಮತ್ತಾಯ 24ನೇ ಅಧ್ಯಾಯದಲ್ಲಿಯೇ ಕಂಡುಬರುತ್ತದೆ ಮತ್ತಾಯ 24:3, 27, 37, 39. ಇದು ಅಧಿಕಾರ ಮತ್ತು ಶಕ್ತಿಯಿಂದ ಬರುವಿಕೆಯನ್ನು ಸೂಚಿಸುತ್ತದೆ.

ಎರಡನೆಯ ಬರುವಿಕೆಯ ಸಿದ್ಧಾಂತ

ಇಲ್ಲಿ ನಾವು ಕ್ರಿಸ್ತನ ಎರಡನೆಯ ಬರುವಿಕೆಯ ಸಿದ್ಧಾಂತವನ್ನು ನೋಡುತ್ತೇವೆ. ಇದು ಖಂಡಿತವಾಗಿಯೂ ಎರಡು ಮಹತ್ವದ

ಸತ್ಯಗಳನ್ನು ದೃಢಪಡಿಸುತ್ತದೆ:

(i) ಕ್ರಿಸ್ತನ ಅಂತಿಮ ವಿಜಯ

ಶಿಲುಬೆಯಲ್ಲಿ ಶಿಲುಬೆಗೇರಿಸಲ್ಪಟ್ಟವನೇ ಒಂದು ದಿನ ಎಲ್ಲರ ಕರ್ತನಾಗುವನು. ಅಂತ್ಯವು ಖಚಿತವಾಗಿದೆ; ಆ ಅಂತ್ಯವೆಂದರೆ ಕ್ರಿಸ್ತನ ಸಾರ್ವತ್ರಿಕ ರಾಜತ್ವ.

(ii) ಇತಿಹಾಸವು ಒಂದು ಗುರಿಯ ಕಡೆಗೆ ಸಾಗುತ್ತಿದೆ

ಎರಡನೆಯ ಬರುವಿಕೆಯು ಈ ಮೂಲಭೂತ ಸತ್ಯವನ್ನು ಹೊಂದಿದೆ: ಸೃಷ್ಟಿಯು ಸಂಪೂರ್ಣವಾಗಿ ಸಾಗುತ್ತಿರುವ ಒಂದು ದೈವಿಕ ಉದ್ದೇಶಿತ ಅಂತಿಮ ಘಟನೆ. ಅದು ನಾಶವಾಗಿ ಹೋಗುವುದಲ್ಲ; ಬದಲಾಗಿ ದೇವರ ಸಾರ್ವತ್ರಿಕ ಮತ್ತು ನಿತ್ಯವಾದ ಆಳ್ವಿಕೆಯಲ್ಲಿ ಪೂರ್ಣಗೊಳ್ಳುತ್ತದೆ.

ಬರುವಿಕೆಯ ಸಮಯ

ಕ್ರಿಸ್ತನು ಬರುವ ಸಮಯವು ದೇವರಿಗೆ ಮಾತ್ರ ತಿಳಿದಿದೆ. ಆದ್ದರಿಂದ ಎರಡನೆಯ ಬರುವಿಕೆಯ ಸಮಯದ ಬಗ್ಗೆ ಊಹಾಪೋಹ ಮಾಡುವುದು ಅತ್ಯಂತ ಗಂಭೀರವಾದ ತಪ್ಪಾಗಿದೆ. ಯಾರ ಕರ್ತವ್ಯವೂ ಸಮಯವನ್ನು ಊಹಿಸುವುದಲ್ಲ; ನಮ್ಮ ಕರ್ತವ್ಯವೆಂದರೆ ನಮ್ಮನ್ನು ಸಿದ್ಧಪಡಿಸಿಕೊಳ್ಳುವುದು ಮತ್ತು ಎಚ್ಚರವಾಗಿರುವುದು. ನೋಹನ ಕಾಲದಲ್ಲಿ ಜನರು ಭೌತಿಕ ವಿಷಯಗಳಲ್ಲಿ ಮುಳುಗಿದ್ದಾಗ ಪ್ರವಾಹವು ಅಕಸ್ಮಾತ್ತಾಗಿ ಬಂದಂತೆ, ಕ್ರಿಸ್ತನ ಬರುವಿಕೆಯೂ ಅನೇಕರಿಗೆ ಅಚ್ಚರಿಯ ಮತ್ತು ತಕ್ಷಣದ ಘಟನೆಯಾಗಿ ಬರುವುದು.

ಕೊಯ್ಲು ಮತ್ತು ನ್ಯಾಯತೀರ್ಪು

ಯೋಹಾನ ಬರುವ ನ್ಯಾಯತೀರ್ಪನ್ನು ವಿವರಿಸಲು ಕೊಯ್ಲಿನ ರೂಪಕವನ್ನು ಬಳಸುತ್ತಾನೆ.

ಮತ್ತಾಯ 3:12: "ಆತನ ಕೈಯಲ್ಲಿ ಬೀಸುವ ಸಲಕರಣೆ ಇದೆ; ಆತನು ತನ್ನ ಕಣದ ನೆಲವನ್ನು ಸಂಪೂರ್ಣವಾಗಿ ಶುದ್ಧಮಾಡಿ, ತನ್ನ ಗೋಧಿಯನ್ನು ಕಣಜಕ್ಕೆ ಸೇರಿಸುವನು; ಆದರೆ ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಡುವನು."

ಕ್ರಿಸ್ತನ ಬರುವಿಕೆಯು ಪ್ರತ್ಯೇಕಿಸುವ ಮತ್ತು ನ್ಯಾಯತೀರ್ಪು ಮಾಡುವ ಕಾಲವಾಗಿರುತ್ತದೆ. ಆ ಸಮಯದಲ್ಲಿ ಆತನು ತನ್ನವರನ್ನು ತನ್ನ ಬಳಿಗೆ ಕೂಡಿಸಿಕೊಳ್ಳುವನು.

ಇವುಗಳಾಚೆಗೆ ನಾವು ಹೋಗಲು ಸಾಧ್ಯವಿಲ್ಲ, ಏಕೆಂದರೆ ಅಂತಿಮ ಜ್ಞಾನವನ್ನು ದೇವರು ತನ್ನಲ್ಲಿಯೇ ಇಟ್ಟುಕೊಂಡಿದ್ದಾನೆ; ಅದು ಆತನ ಜ್ಞಾನ ಮತ್ತು ಸಾರ್ವಭೌಮತ್ವದ ಭಾಗವಾಗಿದೆ.

ಪರೂಸಿಯಾ ಮತ್ತು ಪುನರುತ್ಥಾನ

ಪೌಲನು ಕ್ರಿಸ್ತನ ಪುನರುತ್ಥಾನವನ್ನು ಪ್ರಥಮ ಫಲದೊಂದಿಗೆ ನೇರವಾಗಿ ತಿಳಿಸಿ, ನಂತರ ನಡೆಯಲಿರುವ ಪರೂಸಿಯಾದ ಕ್ರಮಕ್ಕೆ ಸಂಬಂಧಿಸುತ್ತಾನೆ.

1 ಕೊರಿಂಥದವರಿಗೆ 15:23: "ಕ್ರಿಸ್ತನು ಪ್ರಥಮ ಫಲವಾಗಿದ್ದಾನೆ; ನಂತರ ಕ್ರಿಸ್ತನ ಬರುವಿಕೆಯ ಸಮಯದಲ್ಲಿ ಕ್ರಿಸ್ತನಿಗೆ ಸೇರಿದವರು

ಎಬ್ಬಿಸಲ್ಪಡುವರು."

ರೈತನ ರೂಪಕ

ಯಾಕೋಬನು ಪರೂಸಿಯಾದ ಬೆಳಕಿನಲ್ಲಿ ವಿಶ್ವಾಸಿಗಳಿಗೆ ತಾಳ್ಮೆಯಿಂದಿರಲು ಕರೆ ನೀಡುತ್ತಾನೆ ಮತ್ತು ರೈತನ ರೂಪಕವನ್ನು ಬಳಸುತ್ತಾನೆ. ಯಾಕೋಬ 5:7 8: "ಸಹೋದರರೇ, ಕರ್ತನು ಬರುವ ತನಕ ದೀರ್ಘ ಶಾಂತಿಯಿಂದಿರ್ರಿ. ವ್ಯವಸಾಯಗಾರನನ್ನು ನೋಡಿರಿ; ಅವನು ಭೂಮಿಯ ಅಮೂಲ್ಯವಾದ ಫಲಕ್ಕಾಗಿ ಕಾದಿದ್ದು ಮುಂಗಾರು ಹಿಂಗಾರು ಮಳೆಗಳು ಬರುವ ತನಕ ದೀರ್ಘಶಾಂತಿಯಿಂದಿರುವನು. ನೀವು ಸಹ ದೀರ್ಘಶಾಂತಿಯಿಂದಿರ್ರಿ; ನಿಮ್ಮ ಹೃದಯಗಳನ್ನು ಸ್ಥಿರಪಡಿಸಿಕೊಳ್ಳಿರಿ; ಕರ್ತನ ಬರುವಿಕೆಯು ಸಮೀಪವಾಗಿದೆ."

1 ಯೋಹಾನ 2:28 ಯೋಹಾನನು ಹೀಗೆ ಹೇಳುತ್ತಾನೆ: "ಪ್ರಿಯ ಮಕ್ಕಳೇ, ಆತನು ಪ್ರಕಟವಾಗುವಾಗ ನಾವು ಆತನ ಮುಂದೆ ಧೈರ್ಯದಿಂದಿರಲು ಮತ್ತು ಆತನ ಬರುವಿಕೆಯಲ್ಲಿ ನಾಚಿಕೆಗೆ ಒಳಗಾಗದಿರಲು, ಆತನಲ್ಲಿ ಮುಂದುವರಿಯಿರಿ."

ಪೌಲನು ಹೇಳುತ್ತಾನೆ: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಸನ್ನಿಧಿಯಲ್ಲಿ ಆತನು ಬರುವಾಗ ನಮ್ಮ ನಿರೀಕ್ಷೆ, ಸಂತೋಷ ಅಥವಾ ಹೆಮ್ಮೆಯ ಕಿರೀಟ ಯಾವುದು? ಅದು ನೀವೇ ಅಲ್ಲವೇ? ಆತನ ಮುಂದೆ ನಮ್ಮ ಭರವಸವೂ ಮತ್ತು ಸಂತೋಷವೂ ಆಗಿದ್ದೀರಿ." (1 ಥೆಸಲೋನಿಕದವರಿಗೆ 2:19)

ಮತ್ತೆ ಪೌಲನು ಪ್ರಾರ್ಥಿಸುತ್ತಾನೆ: "ನಮ್ಮ ಕರ್ತನಾದ ಯೇಸು ತನ್ನ ಎಲ್ಲಾ ಪರಿಶುದ್ಧರೊಂದಿಗೆ ಬರುವಾಗ, ನಮ್ಮ ದೇವರೂ ತಂದೆಯೂ ಆದ ಆತನ ಸನ್ನಿಧಿಯಲ್ಲಿ ನಿಮ್ಮ ಹೃದಯಗಳನ್ನು ಬಲಪಡಿಸಿ, ನೀವು ನಿರ್ದೋಷಿಗಳಾಗಿಯೂ ಪರಿಶುದ್ಧರಾಗಿಯೂ ಇರುವಂತೆ ಮಾಡಲಿ." (1 ಥೆಸಲೋನಿಕದವರಿಗೆ 3:13)

ಕರ್ತನ ಬರುವಿಕೆ

1 ಥೆಸಲೋನಿಕದವರಿಗೆ 4:16: "ಕರ್ತನು ತಾನೇ ಆತನ ಆಜ್ಞೆಘೋಷದೊಡನೆಯೂ, ಪ್ರಧಾನದೂತನ ಶಬ್ದದೊಡನೆಯೂ, ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದುಬರುವನು."

1 ಥೆಸಲೋನಿಕದವರಿಗೆ 5:23: "ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ, ಪ್ರಾಣ ಮತ್ತು ಶರೀರಗಳು ದೋಷವಿಲ್ಲದೆ ಕಾಣಿಸುವಂತೆ ಕಾಪಾಡಲ್ಪಡಲಿ."

ಪ್ರಕಟನೆಯ ಗ್ರಂಥದಲ್ಲಿನ ಕೊಯ್ಲು

ಪ್ರಕಟನೆ 14:14 16 ಯೋಹಾನನು ಒಂದು ದೃಶ್ಯವನ್ನು ಕಾಣುತ್ತಾನೆ: ಮನುಷ್ಯಕುಮಾರನಂತಿರುವ ಒಬ್ಬನು ಬಿಳಿ ಮೋಡದ ಮೇಲೆ ಕುಳಿತಿದ್ದಾನೆ. ಆತನ ಕೈಯಲ್ಲಿ ತೀಕ್ಷ್ಣವಾದ ಕುಡುಗೋಲು ಇದೆ. ಭೂಮಿಯ ಬೆಳೆಯು ಪಕ್ವವಾಗಿರುವುದರಿಂದ ಅದನ್ನು ಕೊಯ್ಯುವಂತೆ ದೇವದೂತನಿಂದ ಆಜ್ಞೆ ಬರುತ್ತದೆ. ಇದು ಭೂಮಿಯ ಅಂತ್ಯಕಾಲದ ಕೊಯ್ಲನ್ನು ಪ್ರತಿಬಿಂಬಿಸುತ್ತದೆ. ಇದನ್ನು ನ್ಯಾಯತೀರ್ಪಿನ ಕೊಯ್ಲು ಎಂದು ಕರೆಯಬಹುದು.

ಯೋಹಾನನ ಕಾಲದಲ್ಲಿ ಭಯಾನಕ ಹಿಂಸೆ ನಡೆಯುತ್ತಿದ್ದರೂ, ಆತನು ಅತ್ಯಂತವಾಗಿ ಹಾರೈಸಿದ್ದ ಒಂದು ವಿಷಯವೆಂದರೆ ಕ್ರಿಸ್ತನು ಶೀಘ್ರವಾಗಿ ಹಿಂದಿರುಗಬೇಕು ಎಂಬುದೇ.

ಅಂತಿಮ ಕರೆ "ಬಾ, ಕರ್ತನಾದ ಯೇಸುವೇ!"

ಪ್ರಕಟನೆ 22:20 21: "ಇವುಗಳನ್ನು ಸಾಕ್ಷೀಕರಿಸುವಾತನು––ಖಂಡಿತವಾಗಿ ನಾನು ಬೇಗ ಬರುತ್ತೇನೆ ಎಂದು ಹೇಳುತ್ತಾನೆ. ಆಮೆನ್. ಹಾಗೆಯೇ ಆಗಲಿ; ಕರ್ತನಾದ ಯೇಸುವೇ, ಬಾ. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರೊಂದಿಗೆ ಇರಲಿ. ಆಮೆನ್."

ಪರೂಸಿಯಾ ನಮಗೆ ಕೇವಲ ಕ್ರಿಸ್ತನು ಮತ್ತೆ ಬರುವನು ಎಂಬ ಸತ್ಯವನ್ನು ಮಾತ್ರ ನೆನಪಿಸುವುದಿಲ್ಲ; ಅದು ನಮ್ಮನ್ನು ಎಚ್ಚರಿಕೆಯಿಂದ, ಪರಿಶುದ್ಧತೆಯಿಂದ ಮತ್ತು ನಂಬಿಕೆಯಲ್ಲಿ ಜೀವಿಸಲು ಕರೆಯುತ್ತದೆ. ಅಂತ್ಯವು ಖಚಿತ. ಕ್ರಿಸ್ತನ ವಿಜಯವು ಖಚಿತ. ಆದರೆ ಆ ದಿನ ಮತ್ತು ಆ ಘಳಿಗೆ ನಮಗೆ ತಿಳಿದಿಲ್ಲ.

ಆದ್ದರಿಂದ ನಮ್ಮ ಕರ್ತವ್ಯವು ದಿನವನ್ನು ಊಹಿಸುವುದಲ್ಲ ಸಿದ್ಧರಾಗಿರುವುದು, ಎಚ್ಚರವಾಗಿರುವುದು ಮತ್ತು ಕರ್ತನಲ್ಲಿ ನಂಬಿಗಸ್ತರಾಗಿ ಉಳಿಯುವುದು.

"ಆಮೆನ್. ಬಾ, ಕರ್ತನಾದ ಯೇಸುವೇ!"



ಮಿಷನರಿ ಕಥೆ

ರೆವ. ಜಾನ್ ಎಲೈರ್ಕುರ್
ಯುಬಿಎಂ ಕ್ರಿಸ್ತ ಕಾಂತಿ ಚರ್ಚ್, ಕುರ್ಲಾ

ಕ್ರಿಶ್ಚಿಯನ್ ಲೆನ್ಹಾರ್ಡ್ ಗ್ರೈನರ್ ಭಾರತದಲ್ಲಿ ಬಾಸೆಲ್ ಮಿಷನ್‌ನ ಪ್ರವರ್ತಕ ಮಿಷನರಿ

ಕ್ರಿಶ್ಚಿಯನ್ ಲೆನ್ಹಾರ್ಡ್ ಗ್ರೈನರ್ ಅವರು 1834ರಲ್ಲಿ ಭಾರತಕ್ಕೆ ಆಗಮಿಸಿದ ಬಾಸೆಲ್ ಇವಾಂಜೆಲಿಕಲ್ ಮಿಷನ್‌ನ ಪ್ರವರ್ತಕ ಮಿಷನರಿಗಳಲ್ಲಿ ಒಬ್ಬರಾಗಿದ್ದರು. ಜೋಹಾನ್ ಕ್ರಿಸ್ಟೋಫ್ ಲೆಹ್ನರ್ ಮತ್ತು ಸ್ಯಾಮುವೆಲ್ ಹೆಬಿಕ್ ಅವರೊಂದಿಗೆ ಅವರು ಭಾರತಕ್ಕೆ ಕಳುಹಿಸಲ್ಪಟ್ಟ ಮೊದಲ ಮೂವರು ಬಾಸೆಲ್ ಮಿಷನರಿಗಳಲ್ಲಿ ಒಬ್ಬರಾಗಿದ್ದರು. ಅವರ ಭಾರತ ಪ್ರವೇಶವು ದಕ್ಷಿಣ ಭಾರತದ ಪಶ್ಚಿಮ ಕರಾವಳಿ ಪ್ರದೇಶಗಳಲ್ಲಿ ಪ್ರೊಟೆಸ್ಟಂಟ್ ಮಿಷನ್ ಕಾರ್ಯದ ಇತಿಹಾಸದಲ್ಲಿ ಮಹತ್ವದ ಆರಂಭವನ್ನು ಗುರುತಿಸಿತು. ಈ ಮೂವರು ಮಿಷನರಿಗಳು 31 ಮಾರ್ಚ್ 1834ರಂದು ಬಾಸೆಲ್‌ನಿಂದ ಪ್ರಯಾಣ ಆರಂಭಿಸಿ, ಅಂತಿಮವಾಗಿ 30 ಅಕ್ಟೋಬರ್ 1834ರಂದು ಮಂಗಳೂರಿಗೆ ತಲುಪಿದರು. ಮಂಗಳೂರು ಭಾರತದಲ್ಲಿನ ಬಾಸೆಲ್ ಮಿಷನ್‌ನ ಮೊದಲ ಪ್ರಮುಖ ಮಿಷನ್ ಕೇಂದ್ರವಾಗಿ ಅಭಿವೃದ್ಧಿಯಾಯಿತು.

ಗ್ರೈನರ್ ಮತ್ತು ಅವರ ಸಹೋದ್ಯೋಗಿಗಳು ಶ್ರೀಮಂತ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯನ್ನು ಹೊಂದಿದ್ದ ಪ್ರದೇಶಕ್ಕೆ ಆಗಮಿಸಿದರು. ಅಲ್ಲಿನ ಜನರೊಂದಿಗೆ ಅರ್ಥಪೂರ್ಣವಾಗಿ ಸಂಪರ್ಕ ಸಾಧಿಸಲು ಅವರ ಭಾಷೆಯನ್ನು ಕಲಿಯುವುದು ಅತ್ಯಗತ್ಯವೆಂದು ಅವರು ಅರಿತುಕೊಂಡರು. ಸ್ಥಳೀಯ ಜನರ ಭಾಷೆ, ಸಂಸ್ಕೃತಿ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳದೆ ಸುವಾರ್ತೆಯನ್ನು ಪರಿಣಾಮಕಾರಿಯಾಗಿ ಸಾರಲು ಸಾಧ್ಯವಿಲ್ಲವೆಂಬ ದೃಷ್ಟಿಕೋನವು ಆರಂಭಿಕ ಬಾಸೆಲ್ ಮಿಷನರಿಗಳ ಕಾರ್ಯದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಗ್ರೈನರ್ ಅವರು ವಿಶೇಷವಾಗಿ ತುಳು ಭಾಷೆಯನ್ನು ಕಲಿಯಲು ತಮ್ಮನ್ನು ತೊಡಗಿಸಿಕೊಂಡರು. ದಕ್ಷಿಣ ಕನ್ನಡ ಕರಾವಳಿ ಪ್ರದೇಶದಲ್ಲಿ ವ್ಯಾಪಕವಾಗಿ ಮಾತನಾಡಲ್ಪಡುತ್ತಿದ್ದ ತುಳು ಭಾಷೆಯಲ್ಲಿ ಅವರ ಅಧ್ಯಯನ ಮತ್ತು ಸೇವೆ ಬಾಸೆಲ್ ಮಿಷನ್‌ನ ಆರಂಭಿಕ ಭಾಷಾ ಕಾರ್ಯದಲ್ಲಿ ಮಹತ್ವದ ಸ್ಥಾನವನ್ನು ಪಡೆಯಿತು. ಐತಿಹಾಸಿಕ ದಾಖಲೆಗಳ ಪ್ರಕಾರ, ಗ್ರೈನರ್ ಅವರು ತುಳು ಭಾಷಾ ಕಾರ್ಯದೊಂದಿಗೆ ವಿಶೇಷವಾಗಿ ಸಂಬಂಧ ಹೊಂದಿದ್ದರು; ಹೆಬಿಕ್ ಅವರು ಕನ್ನಡ ಮತ್ತು ಲೆಹ್ನರ್ ಅವರು ಕೊಂಕಣಿ ಭಾಷಾ ಕಾರ್ಯದಲ್ಲಿ ಗಮನಹರಿಸಿದ್ದರು.

ಗ್ರೈನರ್ ಅವರ ಮಿಷನರಿ ಸೇವೆ ಕೇವಲ ಸುವಾರ್ತೆ ಸಾರುವುದಕ್ಕೆ ಸೀಮಿತವಾಗಿರಲಿಲ್ಲ. ಬಾಸೆಲ್ ಮಿಷನ್‌ನ ಆರಂಭಿಕ ಕಾರ್ಯಯೋಜನೆಯಲ್ಲಿ ಶಾಲೆಗಳ ಸ್ಥಾಪನೆ ಮತ್ತು ಸ್ಥಳೀಯ ಕ್ಯಾಟೆಕಿಸ್ಟ್‌ಗಳ (ಧರ್ಮೋಪದೇಶಕರ) ತರಬೇತಿ ಕೂಡ ಪ್ರಮುಖವಾಗಿತ್ತು. ಆದ್ದರಿಂದ ಶಿಕ್ಷಣವು ಸುವಾರ್ತೆ ಸಾರುವ ಕಾರ್ಯದೊಂದಿಗೆ ನಿಕಟವಾಗಿ ಸಂಪರ್ಕ ಹೊಂದಿತ್ತು. ಸ್ಥಳೀಯ ಜನರ ನಡುವೆ ಕ್ರೈಸ್ತ ನಂಬಿಕೆಯನ್ನು ಪರಿಣಾಮಕಾರಿಯಾಗಿ ಬೋಧಿಸಲು ತಮ್ಮದೇ ಜನಾಂಗ ಮತ್ತು ಭಾಷೆಯವರಲ್ಲಿ ತರಬೇತಿ ಪಡೆದ ಶಿಕ್ಷಕರು ಹಾಗೂ ಧರ್ಮೋಪದೇಶಕರು ಅಗತ್ಯವೆಂದು ಮಿಷನರಿಗಳು ನಂಬಿದ್ದರು. ಈ ದೃಷ್ಟಿಕೋನವು ಮುಂದೆ ಶಾಲೆಗಳು, ತರಬೇತಿ ಸಂಸ್ಥೆಗಳು ಮತ್ತು ಸ್ಥಳೀಯ ಕ್ರೈಸ್ತ ನಾಯಕತ್ವದ ಬೆಳವಣಿಗೆಗೆ ಸಹಾಯಕವಾಯಿತು.

ಗ್ರೈನರ್ ಅವರ ಮಿಷನರಿ ಸೇವೆಯ ಮತ್ತೊಂದು ಗಮನಾರ್ಹ ಅಂಶವೆಂದರೆ ಮಿಷನ್‌ಗೆ ಸಂಬಂಧಿಸಿದ ಜನರ ಆರ್ಥಿಕ ಮತ್ತು ಸಾಮಾಜಿಕ ಕಲ್ಯಾಣದ ಬಗ್ಗೆ ಅವರ ಕಾಳಜಿ. ಕ್ರೈಸ್ತ ನಂಬಿಕೆಯನ್ನು ಸ್ವೀಕರಿಸಿದ ನಂತರ ಕೆಲವು ಜನರು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದ್ದ ಕಾರಣ, ಬಾಸೆಲ್ ಮಿಷನ್ ಕ್ರಮೇಣ ಕೃಷಿ, ಕೈಗಾರಿಕೆ ಮತ್ತು ವೃತ್ತಿಪರ ತರಬೇತಿಯಂತಹ ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡಿತು. ದಕ್ಷಿಣ ಕನ್ನಡದಲ್ಲಿ ಕೃಷಿ ಕಾರ್ಯವನ್ನು ಅಭಿವೃದ್ಧಿಪಡಿಸುವ ಪ್ರಯತ್ನಗಳಿಗೆ ಗ್ರೈನರ್ ಅವರು ಬೆಂಬಲ ನೀಡಿದರು ಮತ್ತು ಈ ಕಾರ್ಯಕ್ಕಾಗಿ ಬಾಸೆಲ್ ಮಿಷನ್‌ನ ಅಧಿಕಾರಿಗಳಿಂದ ಸಹಾಯವನ್ನು ಕೋರಿದರು. ಸುವಾರ್ತೆ, ಶಿಕ್ಷಣ, ಉದ್ಯೋಗ ಮತ್ತು ಪ್ರಾಯೋಗಿಕ ಸೇವೆಯನ್ನು ಪರಸ್ಪರ ಸಂಬಂಧಿಸಿದ ಕ್ಷೇತ್ರಗಳೆಂದು ಪರಿಗಣಿಸಿದ ಬಾಸೆಲ್ ಮಿಷನ್‌ನ ಸಮಗ್ರ ಮಿಷನ್ ದೃಷ್ಟಿಕೋನವನ್ನು ಇದು ಪ್ರತಿಬಿಂಬಿಸುತ್ತದೆ.

ಕ್ರೈಸ್ತ ಸಾಹಿತ್ಯದ ಕ್ಷೇತ್ರದಲ್ಲಿಯೂ ಗ್ರೈನರ್ ಅವರ ಕೊಡುಗೆ ಮಹತ್ವದ್ದಾಗಿತ್ತು. ಬಾಸೆಲ್ ಮಿಷನ್ ಮಂಗಳೂರಿನಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದ ನಂತರ ಸ್ಥಳೀಯ ಭಾಷೆಗಳಲ್ಲಿ ಕ್ರೈಸ್ತ ಸಾಹಿತ್ಯವನ್ನು ಪ್ರಕಟಿಸುವ ಕಾರ್ಯ ಆರಂಭವಾಯಿತು. ಐತಿಹಾಸಿಕ ದಾಖಲೆಗಳಲ್ಲಿ ಕ್ರಿಶ್ಚಿಯನ್ ಗ್ರೈನರ್ ಅವರು ಮತ್ತಾಯನ ಸುವಾರ್ತೆಯನ್ನು ತುಳು ಭಾಷೆಗೆ ಅನುವಾದಿಸಿದ ಕಾರ್ಯದೊಂದಿಗೆ ಸಂಬಂಧಿಸಲ್ಪಟ್ಟಿದ್ದಾರೆ. ತುಳು ಭಾಷಿಕ ಜನರಿಗೆ ಕ್ರೈಸ್ತ ಸಂದೇಶವನ್ನು ಅವರ ಸ್ವಂತ ಭಾಷೆಯಲ್ಲಿ ತಲುಪಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಿತ್ತು.

ಆದ್ದರಿಂದ ಕ್ರಿಶ್ಚಿಯನ್ ಲೆನ್ಹಾರ್ಡ್ ಗ್ರೈನರ್ ಅವರ ಮಹತ್ವವು ಕೇವಲ ಭಾರತಕ್ಕೆ ಬಂದ ಮೊದಲ ಬಾಸೆಲ್ ಮಿಷನರಿಗಳಲ್ಲಿ ಒಬ್ಬರಾಗಿದ್ದರು ಎಂಬುದರಲ್ಲಿ ಮಾತ್ರ ಸೀಮಿತವಾಗಿಲ್ಲ. ಅವರ ಸೇವೆಯು ಆರಂಭಿಕ ಬಾಸೆಲ್ ಮಿಷನ್‌ನ ವಿಶಿಷ್ಟವಾದ ಮಿಷನ್ ವಿಧಾನವನ್ನು ಪ್ರತಿಬಿಂಬಿಸುತ್ತದೆ. ಜನರ ಭಾಷೆಯನ್ನು ಕಲಿಯುವುದು, ಸುವಾರ್ತೆಯನ್ನು ಸಾರುವುದು, ಶಿಕ್ಷಣವನ್ನು ಸ್ಥಾಪಿಸುವುದು, ಸ್ಥಳೀಯ ಕಾರ್ಯಕರ್ತರನ್ನು ತರಬೇತುಗೊಳಿಸುವುದು ಮತ್ತು ಜನರ ಪ್ರಾಯೋಗಿಕ ಸಾಮಾಜಿಕ ಹಾಗೂ ಆರ್ಥಿಕ ಅಗತ್ಯಗಳಿಗೆ ಸ್ಪಂದಿಸುವುದು ಅವರ ಕಾಲದ ಮಿಷನ್ ಕಾರ್ಯದ ಪ್ರಮುಖ ಅಂಶಗಳಾಗಿದ್ದವು.

ಇಂದು ಕ್ರಿಶ್ಚಿಯನ್ ಲೆನ್ಹಾರ್ಡ್ ಗ್ರೈನರ್ ಮತ್ತು ಅವರ ಸಹಪ್ರವರ್ತಕರ ಇತಿಹಾಸವು ಭಾರತದಲ್ಲಿನ ಬಾಸೆಲ್ ಮಿಷನ್ ಪರಂಪರೆಯ ಬೇರುಗಳನ್ನು ಅರ್ಥಮಾಡಿಕೊಳ್ಳಲು ಮಹತ್ವದ್ದಾಗಿದೆ. 1834ರಲ್ಲಿ ಮಂಗಳೂರಿನಲ್ಲಿ ಆರಂಭವಾದ ಈ ಮಿಷನ್ ಕಾರ್ಯದ ಮೂಲಕ ಅನೇಕ ಚರ್ಚುಗಳು, ಶಿಕ್ಷಣ ಸಂಸ್ಥೆಗಳು ಮತ್ತು ಕ್ರೈಸ್ತ ಸಮುದಾಯಗಳು ಕ್ರಮೇಣ ಬೆಳೆಯತೊಡಗಿದವು. ಈ ಪ್ರವರ್ತಕ ಮಿಷನರಿಗಳ ಸೇವೆಯು ಕ್ರೈಸ್ತ ಸಂದೇಶವನ್ನು ಸಾರುವುದರ ಜೊತೆಗೆ ಜನರ ಭಾಷೆ, ಜೀವನ ಮತ್ತು ಅಗತ್ಯಗಳೊಳಗೆ ಪ್ರವೇಶಿಸಿ ಸೇವೆ ಸಲ್ಲಿಸುವ ಮಿಷನ್ ಕರೆಯ ಮಹತ್ವವನ್ನು ನಮಗೆ ನೆನಪಿಸುತ್ತದೆ.

ಕ್ರಿಶ್ಚಿಯನ್ ಲೆನ್ಹಾರ್ಡ್ ಗ್ರೈನರ್ ಅವರ ಜೀವನ ಮತ್ತು ಸೇವೆ ನಮಗೆ ಒಂದು ಮಹತ್ವದ ಸತ್ಯವನ್ನು ನೆನಪಿಸುತ್ತದೆ: ಮಿಷನ್ ಎಂದರೆ ಕೇವಲ ಒಂದು ಸಂದೇಶವನ್ನು ಘೋಷಿಸುವುದಲ್ಲ; ದೇವರ ಸುವಾರ್ತೆಯನ್ನು ಜನರ ಭಾಷೆಯಲ್ಲಿ, ಅವರ ಜೀವನದ ಸಂದರ್ಭಗಳಲ್ಲಿ ಮತ್ತು ಅವರ ನೈಜ ಅಗತ್ಯಗಳ ಮಧ್ಯದಲ್ಲಿ ಸಾಕ್ಷಿಯಾಗಿ ಜೀವಿಸುವುದಾಗಿದೆ.



ಸಭೆಯ ಮೇಜಿನಿಂದ

ಶ್ರೀಮತಿ ಯೂನಿಸ್ ಸೋನ್ಸ್

ಯುಬಿಎಂ ಕ್ರಿಸ್ತ ಜ್ಯೋತಿ ಚರ್ಚ್, ಥಾಣೆ

"ನಂಬಿಕೆಯಲ್ಲಿ ಬಿತ್ತುವುದು, ಸಂತೋಷದಲ್ಲಿ ಕೊಯ್ಯುವುದು"

ಬಿತ್ತುವುದು ಮತ್ತು ಕೊಯ್ಯುವುದರ ಬಗ್ಗೆ ಮಾತನಾಡುವಾಗ ನಮಗೆ ಸಹಜವಾಗಿ ಕೃಷಿಯೇ ನೆನಪಾಗುತ್ತದೆ. ಮುಖ್ಯವಾಗಿ ಇದು ಬೀಜ ಮತ್ತು ಬೆಳೆಯ ಕುರಿತಾಗಿ ಮಾತನಾಡುತ್ತದೆ. ಬಿತ್ತುವಾಗಲೂ ಮತ್ತು ಕೊಯ್ಯುವಾಗಲು ಪರಿಶ್ರಮ ಅತಿ ಅಗತ್ಯ ಎಂಬುದನ್ನು ತಿಳಿಸುತ್ತದೆ. ಕೀರ್ತನೆ 126:5 6 ರಲ್ಲಿಯೂ ಕೂಡ ಅಳುತ್ತಾ ಬಿತ್ತುವುದು ಎಂಬ ವಾಕ್ಯ ಬಳಸಲಾಗಿದೆ. ಇದರ ಅರ್ಥ ನಂಬಿಕೆಯಿಂದ ಬಿತ್ತುವಾಗಲೂ ಕೂಡ ನೋವು, ಸಂಕಷ್ಟಗಳು ಒಳಗೊಂಡಿರುತ್ತದೆ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಯಾವುದರಲ್ಲಿ ನಂಬಿಕೆ? ನಂಬಿಕೆಯು ಯಾವುದನ್ನು ಸೂಚಿಸುತ್ತಿದೆ ಎಂಬುದನ್ನು ಸ್ಪಷ್ಟೀಕರಿಸುತ್ತದೆ. 1 ಕೊರಿಂಥ 2:5 ರಲ್ಲಿ ತಿಳಿಸುವಂತೆ: "ನಿಮ್ಮ ನಂಬಿಕೆಯು ಮನುಷ್ಯ ಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರ ಮಾಡಿಕೊಂಡಿರಬೇಕು." ಆದ್ದರಿಂದ ನಾವು ಬಿತ್ತುವಾಗ ನಮ್ಮ ನಂಬಿಕೆಯು ಮನುಷ್ಯ ಜ್ಞಾನ, ಸಾಮರ್ಥ್ಯ ಅಥವಾ ತಿಳುವಳಿಕೆಯ ಮೇಲೆ ಇರದೆ ದೇವರ ಶಕ್ತಿಯ ಮೇಲಿರಬೇಕೆಂದು ತಿಳಿಸುತ್ತದೆ.

ಬಿತ್ತುವಿಕೆಯಲ್ಲಿ ನಂಬಿಕೆ ಯಾಕೆ ಮುಖ್ಯ? 1 ಕೊರಿಂಥ 2:9 ರಲ್ಲಿ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಾವು ನಿರೀಕ್ಷಿಸುತ್ತಿರುವ ಸುಗ್ಗಿಯು ಲೋಕಕ್ಕೆ ಮಾತ್ರ ಸೀಮಿತವಾಗದೆ, ಲೋಕದ ಅಳತೆಗೂ ಮೀರಿದ್ದಾಗಿದೆ, ಆದ್ದರಿಂದ ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯಬೇಕೆಂದು 2 ಕೊರಿಂಥ 5:7 ರಲ್ಲಿ ತಿಳಿಸುತ್ತದೆ.

ನಾವು ಬಿತ್ತುವ ಬೀಜವು ಕೇವಲ ಭೌತಿಕ ಬೀಜವಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ನಮ್ಮ ಆಲೋಚನೆಗಳು, ಕಾರ್ಯಗಳು, ಸಮಯ, ಮಾತುಗಳು ಮತ್ತು ದೇವರ ವಾಕ್ಯವು ಕೂಡ ಬೀಜದ ರೂಪದಲ್ಲಿ ಬಿತ್ತಲ್ಪಡುತ್ತದೆ. ಯೇಸು ಕ್ರಿಸ್ತನು ಕೂಡ ಮತ್ತಾಯ 13ನೇ ಅಧ್ಯಾಯದಲ್ಲಿ ಬೀಜದ ಉಪಮೆಯ ಮೂಲಕ ಇದನ್ನು ವಿವರಿಸಿದ್ದಾನೆ. ಆದ್ದರಿಂದ, ಧರ್ಮಶಾಸ್ತ್ರದಿಂದಲೂ ಪ್ರಕೃತಿಯಿಂದಲೂ ನಾವು ತಿಳಿದುಕೊಳ್ಳುವುದೇನೆಂದರೆ ನಾವು ಏನನ್ನು ಬಿತ್ತುತ್ತೇವೋ ಅದನ್ನೇ ಕೊಯ್ಯುತ್ತೇವೆ.

ನಮ್ಮ ಪ್ರಸ್ತಾಪವೂ ಕೂಡ ಬೀಜವನ್ನು ಹೇಗೆ ಬಿತ್ತಬೇಕು ಮತ್ತು ಹೇಗೆ ಕೊಯ್ಯಬೇಕು ಎಂಬುದರ ಬಗ್ಗೆ ತಿಳಿಸುವುದಾಗಿದೆ. ಇದನ್ನು ನಮ್ಮ ದೈನಂದಿನ ಜೀವನಕ್ಕೆ ಅಳವಡಿಸಿಕೊಳ್ಳುವುದು ಅತಿ ಅಗತ್ಯ. ನಾನು ನಿಮಗೆ ಯೇಸುಕ್ರಿಸ್ತನ ಶಿಷ್ಯತ್ವದ ಕರೆಯನ್ನು ನೆನಪಿಸುತ್ತೇನೆ. ಶಿಷ್ಯತ್ವವೆಂದರೆ ಯೇಸುವಿನ ಜೊತೆಯಲ್ಲಿ ನಡೆಯುವುದು ಅಥವಾ ಆತನನ್ನು ಹಿಂಬಾಲಿಸುವುದೇ ಮಾತ್ರವಲ್ಲ,

ಬದಲಾಗಿ ಶಿಲುಬೆಯನ್ನು ಹೊತ್ತುಕೊಂಡು ನಡೆಯುವುದು. ಇಲ್ಲಿ ಯೇಸುವಿನ ಶಿಲುಬೆಯಲ್ಲ ಬದಲಾಗಿ ನಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನನ್ನು ಹಿಂಬಾಲಿಸುವುದು. ಇದೇ ಶಿಷ್ಯತ್ವದ ಮುಖ್ಯ ಷರತ್ತಾಗಿದೆ.

ಶಿಲುಬೆ ಎಂದರೆ ಕೇವಲ ಮರದಿಂದ ಮಾಡಿದ ಶಿಲುಬೆಯಲ್ಲ, ಲೂಕ 9:23 ರಲ್ಲಿ ಹೇಳಿರುವ ಯೇಸುವಿನ ಮಾತಿನ ಮೇಲೆ ನಂಬಿಕೆ ಇಟ್ಟು ತನ್ನನ್ನು ನಿರಾಕರಿಸಿ ಶಿಲುಬೆಯನ್ನು ಹೊತ್ತುಕೊಂಡು ನಡೆಯುವುದಾಗಿದೆ. ಯೇಸುಕ್ರಿಸ್ತನು ಶಿಲುಬೆಯಲ್ಲಿ ತನ್ನ ಪ್ರಾಣ ಮತ್ತು ದೇಹವನ್ನು ಬಿತ್ತಿದ್ದಾನೆ, ನಾವುಗಳು ಕೂಡ ಇದೇ ರೀತಿಯಲ್ಲಿ ಈ ಲೋಕದಲ್ಲಿ ಬಿತ್ತಲ್ಪಡಬೇಕು.

ಯೇಸು ಗೆತ್ಸೆಮನೆ ತೋಟದಲ್ಲಿ ತನ್ನನ್ನು ದುಃಖದಿಂದ ಬಿತ್ತಲ್ಪಟ್ಟಿದ್ದಾನೆ. ಆತನು ಅನುಭವಿಸಿದ ನೋವು ಸಂಕಟ ಮತ್ತು ತ್ಯಾಗವು ಸುಗ್ಗಿಗೆ ದಾರಿಯಾಯಿತು. ಇದರ ಅರ್ಥ ಆತನ ಸಂಕಟ, ತ್ಯಾಗವು ನಮ್ಮ ಜೀವನದಲ್ಲಿ ಸಂತೋಷವನ್ನು ನೀಡಿತು. ಆತನು ಬಹಳ ದುಃಖದಿಂದ ಬಿತ್ತಲ್ಪಟ್ಟನು ಆದರೆ ನಾವು ಸಂತೋಷದ ಸುಗ್ಗಿಯ ಬೆಳೆಯನ್ನು ಪಡೆದುಕೊಂಡೆವು. ಸಂತೋಷದಿಂದ ಪಡೆದುಕೊಂಡ ಬೆಳೆಯು ಯಾವುದೆಂದರೆ ಇಬ್ರಿಯ 2:10 ರಲ್ಲಿ ನಾವು ದೇವರ ಮಕ್ಕಳಾಗುವ ಅಧಿಕಾರ ಪಡೆದುಕೊಂಡೆವು. ಯೇಸು ತಂದೆಯ ಮೇಲೆ ನಂಬಿಕೆ ಇಟ್ಟು ಈ ಲೋಕದಲ್ಲಿ ತನ್ನನ್ನೇ ಬೀಜವಾಗಿ ಬಿತ್ತಲ್ಪಟ್ಟನು, ಅದೇ ರೀತಿಯಲ್ಲಿ ನಾವುಗಳು ಕೂಡ ದೇವರ ಮೇಲೆ ನಂಬಿಕೆ ಇಟ್ಟು ಈ ಲೋಕದಲ್ಲಿ ಫಲ ಕೊಡುವ ಬೀಜವಾಗಿ ಬಿತ್ತಲ್ಪಡಬೇಕು.

ದೇವರ ಮಕ್ಕಳಾಗಿ ನಾವು ಈ ಲೋಕದಲ್ಲಿ ಜೀವಿಸುತ್ತಿರುವಾಗ, ಬಹುತೇಕ ಪ್ರತಿದಿನವೂ ನೋವು ಮತ್ತು ಸುಖದ ನಡುವೆ ಒಂದು ಆಯ್ಕೆಯನ್ನು ಮಾಡಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತೇವೆ. ಆದರೆ ದೇವರ ವಾಗ್ದಾನಗಳ ಮೇಲಿನ ನಂಬಿಕೆಯು ಸಂಕಷ್ಟಗಳನ್ನು ಸಹಿಸಿಕೊಂಡು ಮುಂದೆ ಸಾಗಲು ನಮಗೆ ಶಕ್ತಿಯನ್ನು ನೀಡುತ್ತದೆ.

ಇದನ್ನು ಒಂದು ಉದಾಹರಣೆಯ ಮೂಲಕ ಅರ್ಥಮಾಡಿಕೊಳ್ಳೋಣ. ನಾವು ನಮ್ಮ ಮುಂಜಾನೆಯ ಸಮಯವನ್ನು ದೈಹಿಕ ಸೌಂದರ್ಯ ಮತ್ತು ಆರೋಗ್ಯದ ಆರೈಕೆ, ಆಹಾರ, ವ್ಯಾಯಾಮ, ಕೆಲಸ ಇತ್ಯಾದಿಗಳಿಗೆ ಮಾತ್ರ ಮೀಸಲಿಟ್ಟರೆ, ನಮಗೆ ಉತ್ತಮ ಆರೋಗ್ಯ ಮತ್ತು ಸಂಪತ್ತನ್ನು ಸಂಪಾದಿಸಿಕೊಳ್ಳಬಹುದು ಆದರೆ ನಮ್ಮ ದೈಹಿಕ ಆದ್ಯತೆಗಳನ್ನು ತ್ಯಾಗಮಾಡಿ "ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ" (ಮತ್ತಾಯ 6:33) ಎಂಬ ಕ್ರಿಸ್ತನ ವಾಕ್ಯಕ್ಕೆ ಆದ್ಯತೆ ನೀಡಲು ನಾವು ಸಿದ್ಧರಾಗಿದ್ದರೆ, ಯೇಸು ಯೋಹಾನ 6:63ರಲ್ಲಿ, "ಬದುಕಿಸುವಂಥದು ಆತ್ಮವೇ; ಮಾಂಸವು ಯಾವುದಕ್ಕೂ ಬರುವದಿಲ್ಲ" ಎಂದು ಹೇಳುತ್ತಾನೆ. ಆಗ ನಾವು ನಿತ್ಯ ಜೀವವೆಂಬ ಸಂತೋಷದ ಕೊಯ್ಲನ್ನು ಪಡೆಯುತ್ತೇವೆ. ಸರಳವಾಗಿ ಹೇಳುವುದಾದರೆ, "ಶರೀರಕ್ಕೆ ಬಿತ್ತುವುದು" ಎಂದರೆ ನಂಬಿಕೆಯಿಂದ ನಡೆಯುವುದಕ್ಕೆ ವಿರುದ್ಧವಾದ ಜೀವನ. ಇದರ ಅರ್ಥ ಸ್ವಕೇಂದ್ರಿತ ಜೀವನವನ್ನು ನಡೆಸದೆ ಕ್ರಿಸ್ತ ಕೇಂದ್ರಿತ ಜೀವನವನ್ನು ನಡೆಸಬೇಕಾಗಿದೆ.

ಗಲಾತ್ಯದವರಿಗೆ 6:8 ಹೇಳುತ್ತದೆ: "ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು, ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯ ಜೀವವನ್ನು ಕೊಯ್ಯುವನು." ನಂಬಿಕೆಯಿಂದ ಮಾಡುವ ಪ್ರತಿಯೊಂದು ಬಿತ್ತನೆಯೂ ಆತ್ಮನಲ್ಲಿ ಮಾಡುವ ಬಿತ್ತನೆಯಾಗಿದೆ. ಗಲಾತ್ಯದವರಿಗೆ 5:16ರಲ್ಲಿ ಸಹ ಆತ್ಮನ ಪ್ರಕಾರ ನಡೆಯುವಂತೆ ನಮಗೆ ಕರೆ ನೀಡಲಾಗಿದೆ.

ಕೊಯ್ಲು ಎನ್ನುವುದು ನೈಸರ್ಗಿಕ ನಿಯಮದ ಫಲವೂ ದೇವರ ವಾಗ್ದಾನದ ನೆರವೇರಿಕೆಯೂ ಆಗಿದೆ. ಆದರೆ ಬೀಜವು ನಮ್ಮ ಕೈಯಲ್ಲಿದೆ; ಏನು ಬಿತ್ತಬೇಕು ಎಂಬ ನಿರ್ಧಾರವನ್ನು ನಾವು ಮಾಡಬೇಕಾಗಿದೆ. ಕಣ್ಣಿಗೆ ಕಾಣುವ ಕ್ಷಣಿಕ ಸುಖದಲ್ಲಿ ಬಿತ್ತಬೇಕೋ, ಅಥವಾ ಕಾಣದ ದೇವರ ಕಾರ್ಯದ ಮೇಲೆ ನಂಬಿಕೆಯಿಟ್ಟು ನಮ್ಮ ಒಳ್ಳೆಯದಕ್ಕಾಗಿ ಆತನು ಮಾಡುತ್ತಿರುವ ಕಾರ್ಯದಲ್ಲಿ ಬಿತ್ತಬೇಕೋ ಎಂಬ ಆಯ್ಕೆ ನಮ್ಮದು. ರೋಮಾಪುರದವರಿಗೆ 8:13 ಹೇಳುತ್ತದೆ: "ನೀವು ಶರೀರ ಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ." ಇದು ಒಂದು ಪ್ರಮುಖ ಸತ್ಯವನ್ನು ನಮಗೆ ತಿಳಿಸುತ್ತದೆ: ನಮ್ಮ ಸ್ವಂತ ಶಕ್ತಿ ಅಥವಾ ಜ್ಞಾನದಿಂದ ಶರೀರಭಾವಗಳನ್ನು ಕೊಲ್ಲಲು ಸಾಧ್ಯವಿಲ್ಲ. ರೋಮಾಪುರದವರಿಗೆ 8:7 ನಮಗೆ ಶರೀರಭಾವಗಳ ಮೇಲೆ ಇಡುವ ಮನಸ್ಸು ದೇವರಿಗೆ ವಿರೋಧವಾಗಿದೆ ಎಂದು ತಿಳಿಸುತ್ತದೆ. ಆದ್ದರಿಂದ, ನಾವು ಪ್ರತಿದಿನ ನಂಬಿಕೆಯಿಂದ ದೇವರ ವಾಕ್ಯವನ್ನು ನಮ್ಮ ಹೃದಯದಲ್ಲಿ ಬಿತ್ತಿ, ನಮ್ಮ ಆತ್ಮವನ್ನು ಪೋಷಿಸಿದಾಗ, ನಾವು ಯೇಸು ಅಪೇಕ್ಷಿಸುವಂತೆ ಜೀವಿಸಲು ಮತ್ತು ಮಾಡಲು ಪವಿತ್ರಾತ್ಮನೇ ನಮಗೆ ಶಕ್ತಿಯನ್ನು ನೀಡುತ್ತಾನೆ. ರೋಮಾಪುರದವರಿಗೆ ಬರೆದ ಪತ್ರವು ಸಭೆಗೆ ಬರೆಯಲ್ಪಟ್ಟ ಪತ್ರ ಎಂಬುದನ್ನೂ ನಾವು ಗಮನಿಸಬೇಕು.

1 ಕೊರಿಂಥದವರಿಗೆ 9:27ರಲ್ಲಿ ಪೌಲನು ಸ್ವಯಂ ಶಿಸ್ತಿನ ಅಗತ್ಯವನ್ನು ತಿಳಿಸುತ್ತಾನೆ: "ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ." ಪೌಲನು ಇದನ್ನು ಕೇವಲ ಬೋಧಿಸಲಿಲ್ಲ; ತನ್ನ ಜೀವನದಲ್ಲಿ ಅಳವಡಿಸಿಕೊಂಡನು ಮತ್ತು ತಾನು ಬೋಧಿಸಿದ ರೀತಿಯಲ್ಲಿಯೇ ನಡೆದನು. ಇದೇ ನಂಬಿಕೆಯ ಆತ್ಮವಿಶ್ವಾಸ. ಈ ನಂಬಿಕೆಯೇ ಯಾಕೋಬನು ಹೀಗೆ ಹೇಳುವಂತೆ ಪ್ರೇರೇಪಿಸಿತು: "ನನ್ನ ಸಹೋದರರೇ, ನೀವು ನಾನಾ ವಿಧವಾದ ಕಷ್ಟಗಳಿಗೆ ಒಳಗಾದಾಗ, ಅದನ್ನು ಮಹಾ ಸಂತೋಷವೆಂದು ಎಣಿಸಿರಿ."

1 ಅರಸು 17:13ರಲ್ಲಿ ಚಾರೆಪ್ತದ ವಿಧವೆ ಆತ್ಮನಲ್ಲಿ ಬಿತ್ತುವಿಕೆಗೆ ಒಂದು ಶ್ರೇಷ್ಠ ಉದಾಹರಣೆಯಾಗಿದ್ದಾಳೆ. 14ನೇ ವಚನದಲ್ಲಿ ದೇವರ ವಾಕ್ಯದ ಮೇಲಿಟ್ಟ ನಂಬಿಕೆಯಿಂದ, ಅವಳು ತನ್ನಲ್ಲಿದ್ದ ಕೊನೆಯ ಸ್ವಲ್ಪ ಹಿಟ್ಟನ್ನೂ ಬಿತ್ತಿದಳು. 16ನೇ ವಚನದಲ್ಲಿ ಅವಳಿಗೆ ದೊರೆತ ಸಂತೋಷವಾದ ಸುಗ್ಗಿಯನ್ನು ನಾವು ನೋಡುತ್ತೇವೆ! ಆದುದರಿಂದ, ಕರ್ತನಾದ ಯೇಸು ಕ್ರಿಸ್ತನನ್ನು ಅನುಸರಿಸಲು ಬಯಸುವ ಪ್ರಿಯ ಶಿಷ್ಯನೇ, ನಾವು ನೋವಿನಿಂದ ತಪ್ಪಿಸಿಕೊಳ್ಳಲು ಅಥವಾ ಜೀವನವನ್ನು ಇನ್ನಷ್ಟು ಸುಖಕರವಾಗಿಸಿಕೊಳ್ಳಲು ಪ್ರಯತ್ನಿಸಬಾರದು. "ಯಾವದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ." (ರೋಮಾ 14:23)

ಕ್ರಿಸ್ತನ ನಿಮಿತ್ತ ಅನುಭವಿಸುವ ಸಂಕಟ ಅಥವಾ ನೋವನ್ನು ಶಿಲುಬೆ ಪ್ರತಿನಿಧಿಸುತ್ತದೆ. ನೋವು ದೇವರು ನಮಗೆ ಕೊಟ್ಟಿರುವ ಒಂದು ಸಹಜ ಪ್ರತಿಕ್ರಿಯೆ. ನಂಬಿಕೆಯೂ ದೇವರಿಂದಲೇ ದೊರೆತ ವರವಾಗಿದೆ. (ರೋಮಾ 12:3; ಇಬ್ರಿಯ 12:2) ಆದರೆ ನಮ್ಮ ನಂಬಿಕೆಯು ಬೆಳೆಯಬೇಕಾದರೆ, ದೇವರ ಆಜ್ಞೆಗಳು ಮತ್ತು ವಾಗ್ದಾನಗಳ ಮೇಲಿನ ನಂಬಿಕೆಯಿಂದ ಪ್ರೇರಿತವಾದ ಕೃತ್ಯಗಳೊಂದಿಗೆ ಅದು ಜೊತೆಗೂಡಿರಬೇಕು.

ಕಣ್ಣೀರು ಸುರಿಸುವಾಗ, ದೇಹವು ತಾನು ಸಹಿಸಲಾರದ ಕೆಲವು ಭಾರವನ್ನು ಹೊರಗೆ ಬಿಡುತ್ತದೆ. ಪುರುಷರು, ಮಹಿಳೆಯರು, ಹುಡುಗರು ಮತ್ತು ಹುಡುಗಿಯರೇ ಕಣ್ಣೀರು ಬರಲಿ! ನಾವು ಸುರಿಸುವ ಕಣ್ಣೀರಿನ ಹನಿಗಳು, ಯೇಸುವನ್ನು ಹಿಂಬಾಲಿಸುತ್ತಾ ನಮ್ಮ ಶಿಲುಬೆಯನ್ನು ಹೊತ್ತುಕೊಂಡು ನಡೆಯುವಾಗ, ಕರ್ತನಲ್ಲಿ ದೊರೆಯುವ ಸಂತೋಷದ ಸುಗ್ಗಿಗಾಗಿ ಬಿತ್ತಲ್ಪಡುವ ಬೀಜಗಳಾಗಿವೆ.

ನಮ್ಮ ಸ್ವಂತ ಇಚ್ಛೆಯನ್ನು ಬಿಟ್ಟು, ಯಾವುದೇ ಬೆಲೆಯನ್ನಾದರೂ ಕೊಟ್ಟು ದೇವರ ಚಿತ್ತವನ್ನೇ ಮಾಡಲು ಬಯಸುವುದರಿಂದಲೇ ನಾವು ಈ ಕಣ್ಣೀರನ್ನು ಸುರಿಸುತ್ತಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳೋಣ. (1 ಪೇತ್ರ 2:20) ನಮ್ಮ ಐದು ಇಂದ್ರಿಯಗಳಿಂದ ಬರುವ ಪ್ರೇರಣೆಗಳಿಗೆ ಒಳಗಾಗುವುದನ್ನು ನಿರಾಕರಿಸಿ, ಇಬ್ರಿಯ 11:6ರಲ್ಲಿ ತಿಳಿಸಿರುವ ನಂಬಿಕೆಯಿಂದ ನಡೆಯಲು ನಾವು ಆಯ್ಕೆಮಾಡಿದಾಗ, ನಾವು ಆತ್ಮನಲ್ಲಿ ಬಿತ್ತುತ್ತೇವೆ. ನಮ್ಮ ಆಯ್ಕೆಗಳನ್ನು ಮಾಡುವಾಗ ಗಲಾತ್ಯ 5:17 ಒಂದು ಉತ್ತಮ ಮಾರ್ಗದರ್ಶಕವಾಗಿರುತ್ತದೆ.

ನಂಬಿಕೆಯಿಂದ, 1 ಪೇತ್ರ 1:23ರಲ್ಲಿ ಹೇಳಿರುವ ನಾಶವಾಗದ ಬೀಜವೆಂಬ ದೇವರ ವಾಕ್ಯವನ್ನು ಬಿತ್ತೋಣ. ಆಕಾಶವೂ ಭೂಮಿಯೂ ಅಳಿದುಹೋದರೂ ದೇವರ ವಾಕ್ಯವು ಎಂದೆಂದಿಗೂ ಸ್ಥಿರವಾಗಿ ನಿಲ್ಲುತ್ತದೆ. ನಮ್ಮ ದೇಹಕ್ಕಾಗಿ ಮಾತ್ರವಲ್ಲ, ಕ್ರಿಸ್ತನ ದೇಹವಾದ ಸಭೆಗಾಗಿ ಕೆಲಸ ಮಾಡಲು ನಾವು ಸಿದ್ಧರಾಗಿರೋಣ.

ಇಂತಹ ಜೀವನವು 1 ಕೊರಿಂಥ 13ರಲ್ಲಿ ವಿವರಿಸಲ್ಪಟ್ಟ "ನಿಸ್ವಾರ್ಥ ಪ್ರೀತಿಯಿಂದ" ಮಾತ್ರ ಪ್ರೇರಿತವಾಗಲು ಸಾಧ್ಯ. "ನಾನು" ಎಂಬ ಸ್ವಭಾವವು ಪಾಪಕ್ಕೆ ಸತ್ತದ್ದು, ಆದರೆ ಕ್ರಿಸ್ತನಲ್ಲಿ ಜೀವಂತವಾಗಿರುವವನು ಎಂದು ಪರಿಗಣಿಸೋಣ. (ರೋಮಾ 6:11)

ಆಗ ಪ್ರವಾದಿಯಾದ ಯೆಶಾಯನು ಹೇಳಿದಂತೆ: "ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು." (ಯೆಶಾಯ 53:11)

ಹಾಗೆಯೇ ನಾವೂ ಸಹ ತೃಪ್ತಿಯನ್ನು ಹೊಂದುವೆವು!

ಔಟ್‌ರೀಚ್ ಬೇಸಿಗೆ ಶಿಬಿರ

ಅಪ್ಪಾಪಾಡ, ಮಲಾಡ್ · 19 – 20 ಏಪ್ರಿಲ್

ಯುಬಿಎಂ ಔಟ್‌ರೀಚ್ ವಿಭಾಗದ ವತಿಯಿಂದ ಮಲಾಡ್‌ನ ಅಪ್ಪಾಪಾಡ ಪ್ರದೇಶದ ಮಕ್ಕಳಿಗಾಗಿ ಏಪ್ರಿಲ್ 19 ಮತ್ತು 20ರಂದು ಬೇಸಿಗೆ ಶಿಬಿರವನ್ನು ಆಯೋಜಿಸಲಾಯಿತು. ಮಕ್ಕಳಿಗೆ ಕಲಿಯಲು, ಆಟವಾಡಲು ಹಾಗೂ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಲು ಸಂತೋಷಕರ ಮತ್ತು ಪ್ರೋತ್ಸಾಹದಾಯಕ ವಾತಾವರಣವನ್ನು ಈ ಶಿಬಿರವು ಒದಗಿಸಿತು.

ಏಪ್ರಿಲ್ 19ರಂದು ಮಕ್ಕಳಿಗಾಗಿ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಅವರ ಪ್ರತಿಭೆಗಳನ್ನು ಬೆಳೆಸಲು, ಆತ್ಮವಿಶ್ವಾಸವನ್ನು ಹೆಚ್ಚಿಸಲು, ಸೃಜನಶೀಲತೆಯನ್ನು ಉತ್ತೇಜಿಸಲು ಹಾಗೂ ಪರಸ್ಪರ ಸ್ನೇಹ ಮತ್ತು ಸಹಭಾಗಿತ್ವವನ್ನು ಬೆಳೆಸಲು ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

ಏಪ್ರಿಲ್ 20ರಂದು ಮಕ್ಕಳಿಗಾಗಿ ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಲಾಯಿತು. ತರಗತಿಯ ಹೊರಗಿನ ಪರಿಸರದಲ್ಲಿ ಸಂತೋಷಕರ ಹಾಗೂ ಜ್ಞಾನವರ್ಧಕ ಅನುಭವವನ್ನು ಪಡೆಯಲು ಈ ಪ್ರವಾಸವು ಮಕ್ಕಳಿಗೆ ಉತ್ತಮ ಅವಕಾಶವನ್ನು ನೀಡಿತು.

ಈ ಕಾರ್ಯಕ್ರಮದ ಉದ್ದೇಶವು ಮಕ್ಕಳ ಸಮಗ್ರ ಬೆಳವಣಿಗೆಗೆ ಸಹಾಯ ಮಾಡುವುದಷ್ಟೇ ಅಲ್ಲದೆ, ಅರ್ಥಪೂರ್ಣ ಚಟುವಟಿಕೆಗಳು ಮತ್ತು ಸಹಭಾಗಿತ್ವದ ಮೂಲಕ ದೇವರ ಪ್ರೀತಿ, ಕಾಳಜಿ ಮತ್ತು ನಿರೀಕ್ಷೆಯನ್ನು ಅವರೊಂದಿಗೆ ಹಂಚಿಕೊಳ್ಳುವುದೂ ಆಗಿತ್ತು.

















ಔಟ್‌ರೀಚ್ ಬೇಸಿಗೆ ಶಿಬಿರ - ಛಾಯಾಚಿತ್ರಗಳು

























ವರದಿಗಳು ಮತ್ತು ಛಾಯಾಚಿತ್ರಗಳು

ಏಕತಾ ಪ್ರಾರ್ಥನಾ ದಿನ

ಯುಬಿಎಂ ಕ್ರಿಸ್ತ ಕಾಂತಿ ಚರ್ಚ್, ಕುರ್ಲಾ · 1 ಮೇ 2026

ಯುಬಿಎಂ ಪ್ರಾರ್ಥನಾ ವಿಭಾಗದ ವತಿಯಿಂದ 2026ರ ಮೇ 1ರಂದು, ಯುಬಿಎಂ ಕ್ರಿಸ್ತ ಕಾಂತಿ ಚರ್ಚ್, ಕುರ್ಲಾ ಇಲ್ಲಿ "ಪ್ರಾರ್ಥನೆಯಲ್ಲಿ ಬೆಳೆಯಲು ಪ್ರೇರಿತರಾಗಿ" ಎಂಬ ಸ್ಫೂರ್ತಿದಾಯಕ ವಿಷಯದೊಂದಿಗೆ ಏಕತಾ ಪ್ರಾರ್ಥನಾ ದಿನವನ್ನು ಆಯೋಜಿಸಲಾಯಿತು.

ಈ ಪ್ರಾರ್ಥನಾ ಕೂಟವು ವಿಶ್ವಾಸಿಗಳನ್ನು ಏಕತೆ ಮತ್ತು ಭಕ್ತಿಯ ಮನೋಭಾವದಲ್ಲಿ ಒಂದಾಗಿ ಸೇರಿಸಿತು. ದೇವರ ಸನ್ನಿಧಿಯನ್ನು ಅರಸಿ, ವಿವಿಧ ಅಗತ್ಯಗಳಿಗಾಗಿ ಪ್ರಾರ್ಥನೆ ಸಲ್ಲಿಸಲು ಇದು ಒಂದು ಅರ್ಥಪೂರ್ಣ ಅವಕಾಶವಾಯಿತು. ಪ್ರಾರ್ಥನೆಯು ನಮ್ಮ ನಂಬಿಕೆಯನ್ನು ಬಲಪಡಿಸುವಲ್ಲಿ, ದೇವರೊಂದಿಗಿನ ನಮ್ಮ ಸಂಬಂಧವನ್ನು ಬಲಪಡಿಸಲು ಹಾಗೂ ಸಭೆಯೊಳಗಿನ ಏಕತೆಯನ್ನು ಬೆಳೆಸುವಲ್ಲಿ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಈ ಕೂಟವು ಮತ್ತೊಮ್ಮೆ ನೆನಪಿಸಿತು.

ಪ್ರಾರ್ಥನಾ ಕೂಟದ ಸಂದರ್ಭದಲ್ಲಿ ನಮ್ಮ ಸಭಾ ಕುಟುಂಬಕ್ಕಾಗಿ ವಿಶೇಷವಾಗಿ ಪ್ರಾರ್ಥಿಸಲಾಯಿತು. ದೇವರ ಮಾರ್ಗದರ್ಶನ, ರಕ್ಷಣೆ ಮತ್ತು ಆತ್ಮಿಕ ಬೆಳವಣಿಗೆಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು. ಅಲ್ಲದೆ, ನಮ್ಮ ದೇಶ ಮತ್ತು ಅದರ ನಾಯಕರಿಗಾಗಿ ಪ್ರಾರ್ಥನೆ ಸಲ್ಲಿಸಿ, ದೇಶದಲ್ಲಿ ಶಾಂತಿ, ಜ್ಞಾನ, ನ್ಯಾಯ ಮತ್ತು ದೇವರ ಮಾರ್ಗದರ್ಶನ ನೆಲೆಸುವಂತೆ ಬೇಡಿಕೊಳ್ಳಲಾಯಿತು. ಪ್ರಾರ್ಥನೆಯು ಇನ್ನಷ್ಟು ವಿಶಾಲವಾದ ದೃಷ್ಟಿಕೋನದೊಂದಿಗೆ ಇಡೀ ಜಗತ್ತಿಗಾಗಿ ಪ್ರಾರ್ಥಿಸುವ ಮೂಲಕ ಸಮಾಪ್ತಿಗೊಂಡಿತು. ದೇವರ ಕೃಪೆ, ಶಾಂತಿ ಮತ್ತು ನಿರೀಕ್ಷೆಯ ಅಗತ್ಯದಲ್ಲಿರುವ ವಿವಿಧ ಸಮುದಾಯಗಳು ಹಾಗೂ ಜನರನ್ನು ಸ್ಮರಿಸಿ ಪ್ರಾರ್ಥಿಸಲಾಯಿತು.

ಏಕತಾ ಪ್ರಾರ್ಥನಾ ದಿನವು ಆಶೀರ್ವಾದಕರವೂ ಆತ್ಮಿಕವಾಗಿ ಸಮೃದ್ಧಗೊಳಿಸುವಂತಹ ಸಮಯವಾಗಿತ್ತು. ನಿರಂತರವಾಗಿ ಪ್ರಾರ್ಥನೆಯಲ್ಲಿ ತೊಡಗಿಸಿಕೊಂಡು, ಪ್ರಾರ್ಥಿಸುವ ಸಮುದಾಯವಾಗಿ ಆತ್ಮಿಕವಾಗಿ ಬೆಳೆಯಲು ಇದು ಎಲ್ಲರನ್ನೂ ಪ್ರೇರೇಪಿಸಿತು. ದೇವರ ಶಕ್ತಿ ಮತ್ತು ನಂಬಿಗಸ್ತಿಕೆಯ ಮೇಲೆ ಭರವಸೆಯಿಟ್ಟು, ಪ್ರಾರ್ಥನೆಯಲ್ಲಿ ಮುಂದುವರಿಯುವ ಕರೆಯನ್ನು ಈ ಕಾರ್ಯಕ್ರಮವು ಮತ್ತೊಮ್ಮೆ ಬಲಪಡಿಸಿತು.








ವರದಿಗಳು ಮತ್ತು ಛಾಯಾಚಿತ್ರಗಳು

ಪುರುಷರ ಉತ್ಸವ 2026

ಯುಬಿಎಂ ಕ್ರಿಸ್ತ ಕಾಂತಿ ಚರ್ಚ್, ಕುರ್ಲಾ · 5 ಜುಲೈ 2026

ಕ್ರಿಸ್ತನಲ್ಲಿ ಒಂದಾಗಿ, ಒಟ್ಟಾಗಿ ಬೆಳೆಯೋಣ

"ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದುದ್ದು!" ಕೀರ್ತನೆ 133:1

2026ರ ಜುಲೈ 5ರಂದು ಭಾನುವಾರ, ಯುಬಿಎಂ ಕ್ರಿಸ್ತ ಕಾಂತಿ ಚರ್ಚ್, ಕುರ್ಲಾದಲ್ಲಿ 50ಕ್ಕೂ ಹೆಚ್ಚು ಸದಸ್ಯರು ಸಂತೋಷಭರಿತ ಪುರುಷರ ದಿನಾಚರಣೆಯಲ್ಲಿ ಭಾಗವಹಿಸಿದರು. ಈ ದಿನವು ಕೇವಲ ಮನರಂಜನೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗಿರದೆ, ಪರಸ್ಪರ ಸಂಬಂಧಗಳನ್ನು ಬಲಪಡಿಸಲು ಹಾಗೂ ಕ್ರಿಸ್ತನಲ್ಲಿ ಸಹೋದರರಾಗಿ ಒಬ್ಬರನ್ನೊಬ್ಬರು ಪ್ರೋತ್ಸಾಹಿಸಲು ಉತ್ತಮ ಅವಕಾಶವಾಯಿತು.

ಕಾರ್ಯಕ್ರಮವು ಬೆಳಿಗ್ಗೆ 11:00 ಗಂಟೆಗೆ ಆರಂಭವಾಯಿತು. ಕೈಕುಸ್ತಿ, ಪುಷ್-ಅಪ್, ಡಾರ್ಟ್ ಆಟ, ಪುರುಷರ ಏಕಗಾನ ಹಾಗೂ ವಾದ್ಯಸಂಗೀತದಂತಹ ವಿವಿಧ ಚಟುವಟಿಕೆಗಳು ನಡೆದವು. ಉತ್ಸಾಹ, ಸಂತೋಷ ಮತ್ತು ಸ್ನೇಹಪೂರ್ಣ ಸ್ಪರ್ಧೆಯೊಂದಿಗೆ ಕಾರ್ಯಕ್ರಮಗಳು ಸಂಜೆ ಸುಮಾರು 5:00 ಗಂಟೆಯವರೆಗೆ ಮುಂದುವರಿದವು.

ಆಟಗಳು ಮತ್ತು ವಿವಿಧ ಚಟುವಟಿಕೆಗಳ ಸಂಯೋಜನೆಯಲ್ಲಿ ಯುವಕರ ತಂಡ ಸಹಕಾರ ನೀಡಿತು. ಮಹಿಳಾ ಸದಸ್ಯರು ರುಚಿಕರವಾದ ಆಹಾರವನ್ನು ಸಿದ್ಧಪಡಿಸಿ ಎಲ್ಲರಿಗೂ ಪ್ರೀತಿಯಿಂದ ಬಡಿಸಿದರು. ಪುರುಷರ ಸಮಿತಿ, ಸಭೆಯ ಹಿರಿಯರು ಹಾಗೂ ಸದಸ್ಯರು ಕಾರ್ಯಕ್ರಮದ ಯೋಜನೆ, ತೀರ್ಪುಗಾರಿಕೆ ಮತ್ತು ವಿವಿಧ ಚಟುವಟಿಕೆಗಳ ಸಮನ್ವಯದಲ್ಲಿ ನೀಡಿದ ಒಗ್ಗಟ್ಟಿನ ಸಹಕಾರವು ಈ ದಿನವನ್ನು ಯಶಸ್ವಿಗೊಳಿಸಿತು.

ಇದಕ್ಕಿಂತ ಮುಖ್ಯವಾಗಿ, ಈ ಆಚರಣೆಯು ಕ್ರೈಸ್ತ ಸಮುದಾಯವು ಪ್ರೀತಿ, ಪ್ರೋತ್ಸಾಹ, ಗೌರವ ಮತ್ತು ಪರಸ್ಪರ ಸಹಕಾರದ ಮೇಲೆ ನಿರ್ಮಾಣವಾಗುತ್ತದೆ ಎಂಬ ಸತ್ಯವನ್ನು ಮತ್ತೊಮ್ಮೆ ನೆನಪಿಸಿತು. ಪುರುಷರಾದ ನಾವು ಕೇವಲ ಒಟ್ಟಾಗಿ ಸೇರಿ ಸಂಭ್ರಮಿಸುವುದಷ್ಟೇ ಅಲ್ಲದೆ, ಪರಸ್ಪರರ ನಂಬಿಕೆಯನ್ನು ಬಲಪಡಿಸಿ, ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿ, ದೇವರಿಗೂ ಆತನ ಜನರಿಗೂ ನಿಷ್ಠೆಯಿಂದ ಸೇವೆ ಸಲ್ಲಿಸಲು ಕರೆಯಲ್ಪಟ್ಟಿದ್ದೇವೆ.

ದಿನದ ಅಂತ್ಯವು ಸಂತೋಷದ ನೆನಪುಗಳು, ನವೀಕೃತ ಸ್ನೇಹಸಂಬಂಧಗಳು ಹಾಗೂ ಇನ್ನಷ್ಟು ಗಾಢವಾದ ಏಕತೆಯ ಭಾವನೆಯೊಂದಿಗೆ ನೆರವೇರಿತು.

ಪುರುಷರ ದಿನಾಚರಣೆ 2026 ಕ್ರಿಸ್ತನಲ್ಲಿ ಒಂದಾಗಿ, ಸಹೋದರತ್ವ, ನಂಬಿಕೆ, ಸೌಹಾರ್ದತೆ ಮತ್ತು ಸಂತೋಷವನ್ನು ಹಂಚಿಕೊಂಡ ಒಂದು ಅರ್ಥಪೂರ್ಣ ಆಚರಣೆಯಾಗಿ ನೆನಪಿನಲ್ಲಿ ಉಳಿಯಿತು.









ವರದಿಗಳು ಮತ್ತು ಛಾಯಾಚಿತ್ರಗಳು

ನಮ್ಮ ರಾಷ್ಟ್ರಕ್ಕಾಗಿ ಉಪವಾಸ ಪ್ರಾರ್ಥನೆ

ಯುಬಿಎಂ ಕ್ರಿಸ್ತ ಪ್ರೀತಿ ಚರ್ಚ್ · 25 ಜುಲೈ

ಸಮಯ: ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 3:00 ರವರೆಗೆ । ಆಯೋಜಕರು: ಯುಬಿಎಂ ಕ್ರಿಸ್ತ ಪ್ರೀತಿ ಚರ್ಚ್ ಯುವಜನರು । ನೇತೃತ್ವ: ರೆವ. ಡೇವಿಡ್ ಕಂಬೈ
ವಿಷಯ: "ನಂಬಿಕೆಯಲ್ಲಿ ಒಂದಾಗಿ, ನಿರೀಕ್ಷೆಯಲ್ಲಿ ನಿಲ್ಲುವುದು" । ಬೈಬಲ್ ವಾಕ್ಯ: 2 ಪೂರ್ವಕಾಲವೃತ್ತಾಂತ 7:14

ಪರಿಚಯ

ಜುಲೈ 25ರಂದು ಯುಬಿಎಂ ಕ್ರಿಸ್ತ ಪ್ರೀತಿ ಚರ್ಚ್‌ನ ಯುವಜನರು ದೇಶದ ವಿವಿಧ ಸವಾಲುಗಳು ಮತ್ತು ಸಮಸ್ಯೆಗಳ ಹಿನ್ನೆಲೆಯಲ್ಲಿ "ನಮ್ಮ ರಾಷ್ಟ್ರಕ್ಕಾಗಿ ಉಪವಾಸ ಪ್ರಾರ್ಥನೆ" ಎಂಬ ವಿಶೇಷ ಪ್ರಾರ್ಥನಾ ಕಾರ್ಯಕ್ರಮವನ್ನು ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 3:00 ಗಂಟೆಯವರೆಗೆ ಯುಬಿಎಂ ಕ್ರಿಸ್ತ ಪ್ರೀತಿ ಚರ್ಚ್‌ನಲ್ಲಿ ಆಯೋಜಿಸಿದರು. ವಿಶೇಷವಾಗಿ ದೇಶದಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆಗಳು, ನ್ಯಾಯ, ಶಾಂತಿ, ಸುಧಾರಣೆ ಹಾಗೂ ಸಕಾರಾತ್ಮಕ ಬದಲಾವಣೆಯ ಅಗತ್ಯತೆಯನ್ನು ಮನಗಂಡು ಈ ಪ್ರಾರ್ಥನಾ ಸಭೆಯನ್ನು ಏರ್ಪಡಿಸಲಾಯಿತು.

"ನಂಬಿಕೆಯಲ್ಲಿ ಒಂದಾಗಿ, ನಿರೀಕ್ಷೆಯಲ್ಲಿ ನಿಲ್ಲುವುದು" ಎಂಬ ವಿಷಯವು ಅನಿಶ್ಚಿತತೆ ಮತ್ತು ಸಾಮಾಜಿಕ ಸಮಸ್ಯೆಗಳ ಸಮಯದಲ್ಲಿ ವಿಶ್ವಾಸಿಗಳು ಒಗ್ಗಟ್ಟಿನಿಂದ ಪ್ರಾರ್ಥನೆಯಲ್ಲಿ ನಿಲ್ಲಬೇಕೆಂಬ ಸಭೆಯ ಕರೆಯನ್ನು ಪ್ರತಿಬಿಂಬಿಸಿತು. 2 ಪೂರ್ವಕಾಲವೃತ್ತಾಂತ 7:14ರ ವಾಕ್ಯವನ್ನು ಆಧಾರವಾಗಿಟ್ಟುಕೊಂಡು, ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸಿರಿ ಎಂಬ ಸತ್ಯವನ್ನು ಸಭೆಯವರಿಗೆ ನೆನಪಿಸಲಾಯಿತು.

ಪ್ರಾರ್ಥನೆಯ ಉದ್ದೇಶಗಳು ಮತ್ತು ಪ್ರಮುಖ ವಿಷಯಗಳು

ಈ ಉಪವಾಸ ಪ್ರಾರ್ಥನೆಯ ಮುಖ್ಯ ಉದ್ದೇಶ ನಮ್ಮ ರಾಷ್ಟ್ರಕ್ಕಾಗಿ ದೇವರ ಮಾರ್ಗದರ್ಶನ, ಕರುಣೆ ಮತ್ತು ದೈವಿಕ ಹಸ್ತಕ್ಷೇಪವನ್ನು ಕೋರುವುದಾಗಿತ್ತು. ಕ್ರೈಸ್ತರ ಪ್ರಾರ್ಥನೆಯು ಸಮಾಜದ ನೈಜ ಪರಿಸ್ಥಿತಿಗಳು ಮತ್ತು ಜನರು ಎದುರಿಸುತ್ತಿರುವ ಸಂಕಷ್ಟಗಳೊಂದಿಗೆ ಸಂಬಂಧ ಹೊಂದಿರಬೇಕು ಎಂಬುದನ್ನು ಸಭೆಯವರಿಗೆ ನೆನಪಿಸಲಾಯಿತು.

ವಿದ್ಯಾರ್ಥಿಗಳಿಗಾಗಿ ಮತ್ತು ನಡೆಯುತ್ತಿರುವ ಪ್ರತಿಭಟನೆಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಯಿತು. ವಿದ್ಯಾರ್ಥಿಗಳಿಗೆ ಜ್ಞಾನ, ಧೈರ್ಯ ಮತ್ತು ರಕ್ಷಣೆಯನ್ನು ದೇವರು ಅನುಗ್ರಹಿಸಲಿ ಹಾಗೂ ನಾಯಕರು ಶಾಂತಿಯುತ ಮತ್ತು ನ್ಯಾಯಯುತ ಪರಿಹಾರಗಳತ್ತ ನಡೆಸಲ್ಪಡಲಿ ಎಂದು ಪ್ರಾರ್ಥಿಸಲಾಯಿತು. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಯುವಜನರು ಮಹತ್ವದ ಪಾತ್ರ ವಹಿಸುತ್ತಾರೆ ಎಂಬುದನ್ನು ಸಭೆಯು ಒತ್ತಿಹೇಳಿತು.

ಶಿಕ್ಷಣ ಸುಧಾರಣೆಗಾಗಿ ಸಹ ಪ್ರಾರ್ಥಿಸಲಾಯಿತು. ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ ಪ್ರತಿಯೊಬ್ಬ ಮಗುವಿಗೂ ಸಮಾನ ಅವಕಾಶ, ಉತ್ತಮ ಗುಣಮಟ್ಟದ ಮತ್ತು ಎಲ್ಲರನ್ನೂ ಒಳಗೊಂಡ ಶಿಕ್ಷಣ ದೊರಕುವಂತಹ ವ್ಯವಸ್ಥೆ ನಿರ್ಮಾಣವಾಗಲಿ ಎಂದು ಪ್ರಾರ್ಥಿಸಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ಸಂಸ್ಥೆಗಳು, ಕುಟುಂಬಗಳು ಹಾಗೂ ನೀತಿ ನಿರೂಪಕರನ್ನು ಪ್ರಾರ್ಥನೆಯಲ್ಲಿ ನೆನಪಿಸಲಾಯಿತು.

ಅಪರಾಧ, ಹಿಂಸಾಚಾರ, ದೌರ್ಜನ್ಯ ಮತ್ತು ಅನ್ಯಾಯಗಳಿಂದ ದೇಶವು ರಕ್ಷಿಸಲ್ಪಡಲಿ ಎಂದು ಪ್ರಾರ್ಥಿಸಲಾಯಿತು. ವಿಶೇಷವಾಗಿ ದುರ್ಬಲರು ಮತ್ತು ಅಸಹಾಯಕರ ರಕ್ಷಣೆಗಾಗಿ ದೇವರ ಕೃಪೆಯನ್ನು ಕೋರಲಾಯಿತು. ಶಾಂತಿ, ಮಾನವ ಘನತೆ ಮತ್ತು ನೀತಿಗಾಗಿ ಧ್ವನಿಯಾಗುವುದು ಸಭೆಯ ಜವಾಬ್ದಾರಿಯಾಗಿದೆ ಎಂಬುದನ್ನು ಸಭೆಯವರಿಗೆ ನೆನಪಿಸಲಾಯಿತು.

ಭ್ರಷ್ಟಾಚಾರದ ವಿರುದ್ಧವೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ನಾಯಕರು ಹಾಗೂ ಜವಾಬ್ದಾರಿಯುತ ಸ್ಥಾನಗಳಲ್ಲಿ ಸೇವೆ ಸಲ್ಲಿಸುವವರಿಗೆ ದೇವರು ಜ್ಞಾನ, ಪ್ರಾಮಾಣಿಕತೆ ಮತ್ತು ಹೊಣೆಗಾರಿಕೆಯ ಮನೋಭಾವವನ್ನು ನೀಡಲಿ; ಅವರು ಜನರ ಸೇವೆಗೆ ನಿಷ್ಠೆಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಲಿ ಎಂದು ಪ್ರಾರ್ಥಿಸಲಾಯಿತು.

ಹಿಂಸೆ ಮತ್ತು ಹಿಂಸಾಚಾರವನ್ನು ಎದುರಿಸುತ್ತಿರುವ ಹಾಗೂ ಹಿಂಸೆಗೆ ಒಳಗಾಗುತ್ತಿರುವ ಕ್ರೈಸ್ತ ವಿಶ್ವಾಸಿಗಳಿಗಾಗಿ ಸಹ ಪ್ರಾರ್ಥಿಸಲಾಯಿತು. ಅವರಿಗೆ ಬಲ, ರಕ್ಷಣೆ, ಧೈರ್ಯ ಮತ್ತು ನಂಬಿಕೆಯಲ್ಲಿ ಸ್ಥಿರವಾಗಿ ನಿಲ್ಲುವ ಕೃಪೆಯನ್ನು ದೇವರು ನೀಡಲಿ ಎಂದು ಬೇಡಿಕೊಳ್ಳಲಾಯಿತು. ಆರಾಧನೆಯ ಸ್ವಾತಂತ್ರ್ಯಕ್ಕಾಗಿ ಮತ್ತು ವಿರೋಧವನ್ನು ಎದುರಿಸುವಾಗ ಕ್ರೈಸ್ತರು ನಂಬಿಕೆ, ವಿವೇಕ ಮತ್ತು ಪ್ರೀತಿಯಿಂದ ಪ್ರತಿಕ್ರಿಯಿಸುವಂತಾಗಲಿ ಎಂದು ಪ್ರಾರ್ಥಿಸಲಾಯಿತು.

ಎಲ್ಲರಿಗೂ ಸಮಾನ ಮತ್ತು ಸುಲಭವಾಗಿ ದೊರೆಯುವ ಆರೋಗ್ಯ ಸೇವೆಗಾಗಿ ಸಹ ಪ್ರಾರ್ಥನೆ ಸಲ್ಲಿಸಲಾಯಿತು. ವಿಶೇಷವಾಗಿ ಬಡವರು ಮತ್ತು ದುರ್ಬಲರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಯಿತು. ರೋಗಿಗಳು, ವೈದ್ಯರು, ದಾದಿಯರು, ಆರೋಗ್ಯ ಕಾರ್ಯಕರ್ತರು, ಆಸ್ಪತ್ರೆಗಳು ಹಾಗೂ ಆರೋಗ್ಯ ಕ್ಷೇತ್ರದ ನೀತಿ ನಿರೂಪಕರನ್ನು ಪ್ರಾರ್ಥನೆಯಲ್ಲಿ ನೆನಪಿಸಲಾಯಿತು. ಎಲ್ಲರಿಗೂ ಕೈಗೆಟುಕುವ, ಸುಲಭವಾಗಿ ಲಭ್ಯವಾಗುವ ಮತ್ತು ಮಾನವೀಯತೆಯಿಂದ ಕೂಡಿದ ಆರೋಗ್ಯ ಸೇವೆ

ದೊರಕಲಿ ಎಂದು ಪ್ರಾರ್ಥಿಸಲಾಯಿತು.

ಆಧ್ಯಾತ್ಮಿಕ ಮಹತ್ವ

ಈ ಉಪವಾಸ ಪ್ರಾರ್ಥನೆಯು ಕೇವಲ ಒಂದು ಸಭೆಯ ಕಾರ್ಯಕ್ರಮವಾಗಿರದೆ, ಸಮಾಜದ ಸಮಸ್ಯೆಗಳು ಮತ್ತು ಚಳುವಳಿಗೆ ನೀಡಿದ ಒಂದು ಆಧ್ಯಾತ್ಮಿಕ ಪ್ರತಿಕ್ರಿಯೆಯಾಗಿತ್ತು. ಉಪವಾಸ ಮತ್ತು ಪ್ರಾರ್ಥನೆಯ ಮೂಲಕ, ನಾವು ದೇವರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿದ್ದೇವೆ ಎಂಬ ಸತ್ಯವನ್ನು ಸಭೆಯವರಿಗೆ ನೆನಪಿಸಲಾಯಿತು. ಅದೇ ಸಮಯದಲ್ಲಿ, ಕ್ರೈಸ್ತ ನಾಗರಿಕರಾಗಿ ಸಮಾಜದ ಬಗ್ಗೆ ನಮಗಿರುವ ಜವಾಬ್ದಾರಿಯನ್ನೂ ಒತ್ತಿಹೇಳಲಾಯಿತು.

ನಂಬಿಕೆಯು ವಿಶ್ವಾಸಿಗಳನ್ನು ಕರುಣೆ, ನ್ಯಾಯ, ಸೇವೆ ಮತ್ತು ಜವಾಬ್ದಾರಿಯುತ ನಾಗರಿಕತ್ವದ ಕಡೆಗೆ ನಡೆಸಬೇಕು ಎಂಬ ಸಂದೇಶವನ್ನು ಈ ಸಭೆಯು ಸಾರಿತು. "ಒಂದು ದಿನದ ಪ್ರಾರ್ಥನೆ. ನಂಬಿಕೆ. ಬದಲಾವಣೆ." ಎಂಬ ಸಂದೇಶವು ಕಾರ್ಯಕ್ರಮದ ಹೃದಯವಾಗಿತ್ತು. ಪ್ರಾರ್ಥನೆಯು ಹೃದಯಗಳನ್ನು ಪರಿವರ್ತಿಸಬಲ್ಲದು, ಸಮುದಾಯಗಳನ್ನು ಬಲಪಡಿಸಬಲ್ಲದು ಮತ್ತು ಸಕಾರಾತ್ಮಕ ಕಾರ್ಯಗಳಿಗೆ ಪ್ರೇರಣೆ ನೀಡಬಲ್ಲದು ಎಂಬ ನಿರೀಕ್ಷೆಯನ್ನು ಇದು ಮೂಡಿಸಿತು.

ಸಮಾರೋಪ

"ನಂಬಿಕೆಯಲ್ಲಿ ಒಂದಾಗಿ, ನಿರೀಕ್ಷೆಯಲ್ಲಿ ನಿಲ್ಲುವುದು" ಎಂಬ ವಿಷಯದಡಿ ನಡೆದ ನಮ್ಮ ರಾಷ್ಟ್ರಕ್ಕಾಗಿ ಉಪವಾಸ ಪ್ರಾರ್ಥನೆಯು ಯುಬಿಎಂ ಕ್ರಿಸ್ತ ಪ್ರೀತಿ ಚರ್ಚ್‌ನ ಯುವಜನರ ಅರ್ಥಪೂರ್ಣ ಮತ್ತು ಶ್ಲಾಘನೀಯ ಪ್ರಯತ್ನವಾಗಿತ್ತು. ಈ ಪ್ರಾರ್ಥನಾ ಸಭೆಯ ಮೂಲಕ ವಿದ್ಯಾರ್ಥಿಗಳು, ಶಿಕ್ಷಣ, ದೇಶದ ಸುರಕ್ಷತೆ, ಉತ್ತಮ ಆಡಳಿತ, ಹಿಂಸೆಗೆ ಒಳಗಾಗುತ್ತಿರುವ ವಿಶ್ವಾಸಿಗಳು ಮತ್ತು ಆರೋಗ್ಯ ಸೇವೆಗಳಿಗಾಗಿ ಚರ್ಚ್ ಒಗ್ಗಟ್ಟಿನಿಂದ ದೇವರ ಸನ್ನಿಧಿಯನ್ನು ಅರಸಿತು.

ಸಭೆ ಕೇವಲ ನಿರೀಕ್ಷೆಯ ಕುರಿತು ಮಾತನಾಡುವುದಲ್ಲ, ನಿರೀಕ್ಷೆಯೊಂದಿಗೆ ಪ್ರಾರ್ಥಿಸಿ, ದೇವರ ಶಾಂತಿ, ನ್ಯಾಯ ಮತ್ತು ಪರಿವರ್ತನೆಯ ಸಾಧನವಾಗಿ ಬದುಕಲು ಕರೆಯಲ್ಪಟ್ಟಿದೆ ಎಂಬ ಬಲವಾದ ಸಂದೇಶದೊಂದಿಗೆ ಕಾರ್ಯಕ್ರಮವು ಸಮಾಪ್ತಿಗೊಂಡಿತು. 2 ಪೂರ್ವಕಾಲವೃತ್ತಾಂತ 7:14 ನಮಗೆ ನೆನಪಿಸುವಂತೆ, ದೇವರ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟತನವನ್ನು ಬಿಟ್ಟು ಪ್ರಾರ್ಥಿಸಿ ದೇವರ ದರ್ಶನವನ್ನು ಬಯಸಿ ತಮ್ಮ ಮಾರ್ಗಗಳನ್ನು ಸರಿಪಡಿಸಿಕೊಳ್ಳುವಾಗಲೇ ನಿಜವಾದ ಬದಲಾವಣೆ ಆರಂಭವಾಗುತ್ತದೆ.

ಜುಲೈ 25ರಂದು ನಡೆದ ಈ ಉಪವಾಸ ಪ್ರಾರ್ಥನೆಯು, ದೇವರ ಜನರು ನಂಬಿಕೆಯಲ್ಲಿ ಒಂದಾಗಿ, ನಿರೀಕ್ಷೆಯಲ್ಲಿ ನಿಂತು, ಪ್ರಾಮಾಣಿಕವಾಗಿ ಪ್ರಾರ್ಥಿಸಿದಾಗ, ಸಭೆಯು ದೇವರ ಪ್ರೀತಿ, ಕಾಳಜಿ, ಶಾಂತಿ ಮತ್ತು ನ್ಯಾಯಕ್ಕೆ ಶಕ್ತಿಯುತ ಸಾಕ್ಷಿಯಾಗಬಲ್ಲದು ಎಂಬುದಕ್ಕೆ ಒಂದು ಮಹತ್ವದ ಸಾಕ್ಷಿಯಾಗಿದೆ.










ವರದಿಗಳು ಮತ್ತು ಛಾಯಾಚಿತ್ರಗಳು

ಯುಬಿಎಂ ಮುಂಗಾರು ಮಿಷನ್

ಯುಬಿಎಂ ಔಟ್‌ರೀಚ್ ವಿಭಾಗ

ಮುಂಗಾರು ಮಳೆಯಿಂದಾಗಿ ಸಂಕಷ್ಟಕ್ಕೆ ಒಳಗಾದ ಕುಟುಂಬಗಳಿಗೆ ನೆರವು ನೀಡುವ ಉದ್ದೇಶದಿಂದ ಯುಬಿಎಂ ಔಟ್‌ರೀಚ್ ವಿಭಾಗವು ಟಾರ್ಪಾಲಿನ್‌ಗಳನ್ನು ವಿತರಿಸುವ ಮೂಲಕ ಸಹಾಯಹಸ್ತ ಚಾಚಿತು. ಅಗತ್ಯವಿರುವ ಕುಟುಂಬಗಳಿಗೆ ನೀಡಲಾದ ಈ ಪರಿಹಾರ ಕಾರ್ಯವು, ಸಮುದಾಯದ ಸೇವೆಯಲ್ಲಿ ಕರುಣೆ, ಕಾಳಜಿ ಮತ್ತು ಕ್ರಿಸ್ತನ ಪ್ರೀತಿಯನ್ನು ವ್ಯಕ್ತಪಡಿಸುವ ಯುಬಿಎಂನ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.
















ಧನ್ಯವಾದಗಳು

Email : ubmcmagazine@gmail.com

Website : www.ubmchurches.com

Contact no : 8105-349-008 / 8108- 094-057 / 8767-756-165